ಹಿತ್ತಲಗಿಡ

ಚಾತುರ್ಮಾಸಿಕ

Vol. 1 No.2, October - December, 1996

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆಗಳು, ಸ್ಥಳೀಯ ಸಂಪನ್ಮೂಲಗಳು ಮತ್ತು ಜೀವ ವೈವಿಧ್ಯತೆ ಇವುಗಳ ಮೂಲಕ "ಸುಸ್ಥಿರ ಕೃಷಿ" ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಬಿಡಿ ಪತ್ರಿಕೆ : ರೂ. 15/-



ಅಹಮದಾಬಾದ್ ಸಮ್ಮೇಳನ ವಿಶೇಷಾಂಕ

ಹಿತ್ತಲಗಿಡ

ಚಾತುರ್ಮಾಸಿಕ

Vol. 1, No.2, October - December, 1996

'ಹಿತ್ತಲಗಿಡ' ರೈತ, ವಿಜ್ಞಾನಿ, ವಿದ್ಯಾರ್ಥಿ, ಸ್ವಯಂ ಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆಗಳು, ಸ್ಥಳೀಯ ಸಂಪನ್ಮೂಲಗಳು ಮತ್ತು ಜೀವ ವೈವಿಧ್ಯತೆ ಇವುಗಳ ಮೂಲಕ "ಸುಸ್ಥಿರ ಕೃಷಿ" ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಈ ಸಂಚಿಕೆಯಲ್ಲಿ

ಗೌರವ ಸಂಪಾದಕ

ಟಿ.ಎನ್. ಪ್ರಕಾಶ್ ಕಮ್ಮರಡಿ,
ಸಹಾಯಕ ಪ್ರಾಧ್ಯಾಪಕ, ಕೃಷಿ ಅರ್ಥಶಾಸ್ತ್ರ ವಿಭಾಗ,
ಕೃಷಿವಿಶ್ವವಿದ್ಯಾನಿಲಯ, ಹೆಬ್ಬಾಳ,
ಬೆಂಗಳೂರು-560 024.

ಹಿತ್ತಲ ಗಿಡದ ಪೋಷಕರು :

ಪ್ರೊ. ಅನಿಲ್ ಕೆ. ಗುಪ್ತ, ಮತ್ತು ಸೃಷ್ಟಿ (SRISTI - Society for Research and Initiatives for Sustainable Technologies and Institutions)
ಐ.ಐ.ಎಂ. ಅಹಮದಾಬಾದ್

ಸಂಪಾದಕೀಯ

ನಮ್ಮ ಕೃಷಿ ಏಳಿಗೆಗೆ, ಗ್ರಾಮೀಣ ಬದುಕನ್ನು ಹಸನುಗೊಳಿಸುವುದಕ್ಕೆ, ಪರಿಸರ, ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸುವಲ್ಲಿ ಒಟ್ಟಾರೆ 'ಸುಸ್ಥಿರ ಬದುಕಿನ' ರೀತಿ ಒಂದನ್ನು ಕಂಡುಕೊಳ್ಳುವಲ್ಲಿ ಹೊಸ ಹೊಸ ಆಸೆಗಳು, ವಿವಿಧ ಮೂಲಗಳಿಂದ ಬರವಸೆಗಳು ಏಳತೊಡಗಿವೆ. ಪ್ರೊ. ಅನಿಲ್ ಗುಪ್ತಾರವರು ಹಲವಾರು ವರ್ಷಗಳಿಂದ ತಮ್ಮ 'ಹನಿಬೀ' ಪತ್ರಿಕೆ ಮೂಲಕ ಶೋಧನೆ, ಪ್ರಯೋಗಗಳಿಂದ ಒಂದು ಸಾಧ್ಯತೆಯನ್ನು ಈಗಾಗಲೇ ತೆರೆದಿಟ್ಟಿರುವರು. "ನಮ್ಮ ರೈತರು ಹತ್ತಿರ ಏನೂ ಇಲ್ಲ, ಇವರು ಕಾಲೀ ತಲೆಯ, ಕಾಲೀ ಜೇಬಿನ ಯಾಂತ್ರಿಕ ಜೀವಿಗಳು. ಹಾಗಾಗಿ ಜ್ಞಾನ, ತಾಂತ್ರಿಕತೆ, ಸಂಪನ್ಮೂಲ, ಹಣ ಎಲ್ಲವನ್ನೂ ಹೊರಗಿನಿಂದ ತಂದು, ಈ ಯಾಂತ್ರೀಕೃತ ಜೀವಿಗೆ ತುಂಬಿ, ಇದನ್ನು ಚಾಲನೆಮಾಡಬೇಕು" ಎಂಬ ಆಧುನಿಕ 'ಅಭಿವೃದ್ಧಿ' ಮಾದರಿಯ ರುವಾರಿಗಳ ಅತಿ ದೊಡ್ಡ ಮೌಢ್ಯತೆಗೆ ಕನ್ನಡಿ ಹಿಡಿದಂತಿರುವ ಈ 'ಹನಿಬೀ' ಪ್ರಯೋಗ "ನಮ್ಮ ಗ್ರಾಮೀಣ ಜನರ ಹತ್ತಿರ ಇರುವುದಾದರೂ ಕಡಿಮೆ ಏನು.. ಶತ ಶತಮಾನಗಳ ಕಾಲದ ಮೂಸೆಯಿಂದ ಹೊರಬಂದಿರುವ 'ದೇಶೀಯ, ಪಾರಂಪರಿಕ ಜ್ಞಾನ'ದ ಬಳುವಳಿಯೆ ಇದೆ, ಸಾಂಸ್ಕೃತಿಕ, ಭೂ-ಪರಿಸರದ ಒತ್ತಡಕ್ಕೆ ಮಣಿದು ಸಂರಕ್ಷಿಸುತ್ತಾ ಬಂದಿರುವ 'ಜೀವ ವಿವಿಧತೆ' ಇದೆ, ಪರಿಸ್ಥಿತಿಗೆ ಹೊಂದಿಕೊಂಡು, ಏಳುವ ಸಂಕಟ, ಒತ್ತಡಕ್ಕೆ ಉತ್ತರಿಸುವ ನಾಟೀ ಅನುಶೋಧನೆ, ಆವಿಷ್ಕಾರಗಳನ್ನು ಮಾಡುವ 'ತಳಮಟ್ಟದ ಕರ್ತೃತ್ವಶಕ್ತಿ' ಇದೆ, ಬದುಕಿನ ರೀತಿ ನೀತಿಗಳನ್ನು ಪರಿಸರ, ಸಮಾಜಗಳ ಕಟ್ಟುಪಾಡಿಗೆ ಒಳಪಡಿಸಿಕೊಂಡು ಸಹಬಾಳ್ವೆ ನಡೆಸಲು ಸಹಕಾರಿಯಾಗುವಂತೆ ದೇಶೀಯ ಸಂಸ್ಥೆಗಳ ಸಮೂಹವೆ ಇವರೊಡನೆ ಇದೆ " ಎಂಬುದನ್ನು ಒತ್ತಿ ಹೇಳುತ್ತದೆ. ಈ ಎಲ್ಲಾ ಸಂಪತ್ತನ್ನು ಬಳಸುವ ಹೊಸತೊಂದು ಅಭಿವೃದ್ಧಿ ಮಾದರಿಯನ್ನು ಪ್ರೊ. ಗುಪ್ತಾ ನಮ್ಮ ಮುಂದೆ ಇಡಲು ಯಶಸ್ವಿಯಾಗುತ್ತಿರುವರು. ಇದರ ಕುರುಹೇ ಇದೇ ಜನವರಿಯಲ್ಲಿ ಜರುಗಿದ "ತಳಮಟ್ಟದ ಜನರ..... ಅಂತರರಾಷ್ಟ್ರೀಯ ಸಮ್ಮೇಳನ."

ಸಂಪಾದಕೀಯ

ಕರ್ನಾಟಕದ ಐವರು ರೈತರು, ಅದರಲ್ಲೂ ಓರ್ವ ಕೃಷಿಕೂಲಿಕಾರ ಈ ಸಮ್ಮೇಳನದಲ್ಲಿ ತಮ್ಮ "ತಾಜಾ ಅನುಭವಗಳ ಪ್ರಬಂಧ" ಮಂಡಿಸಿದ್ದು ಈ ಹೊಸ ಅಭಿವೃದ್ಧಿ ಮಾದರಿಯ ಮತ್ತೊಂದು ಆಯಾಮವನ್ನು ಪರಿಚಯಿಸಿರುತ್ತದೆ.

ಕಾಕತಾಳೀಯವೂ ಎಂಬಂತೆ, ಹೆಚ್ಚೂ ಕಡಿಮೆ ಇದೇ ಸಂಧರ್ಭಧಲ್ಲಿ ಬೆಂಗಳೂರಿನಲ್ಲಿ, ತರಳಬಾಳು ಮಠದಲ್ಲಿ **ವಿಶ್ವಸಂಸ್ಕೃತ ಸಮ್ಮೇಳನ** ಜರುಗಿರುತ್ತದೆ. ಸಂಸ್ಕೃತ ಭಾಷೆಯಲ್ಲಿ, ವೇದ ಕಾಲದಲ್ಲಿ ಪುರೋಹಿತಶಾಹಿ ಹಿಡಿತದಲ್ಲಿ ಪೋಷಿಸಲ್ಪಟ್ಟಿರುವ ಜ್ಞಾನ, ವಿಜ್ಞಾನಗಳನ್ನು ಅಗೆದು ತೆಗೆಯುವ ಕಾರ್ಯ, ಹಾಗೇ ಕೃಷಿಯ ಬಗ್ಗೆ ಒಂದು ಪ್ರತ್ಯೇಕ ಘೋಷ್ಠಿಯೇ ಇಲ್ಲಿ ನಡೆದಿರುತ್ತದೆ. ಒಟ್ಟಾರೆ, ಸುಸ್ಥಿರ ಬದುಕಿನ ಸಾಧ್ಯತೆಯ ಮತ್ತೊಂದು ನಾದ ಇಲ್ಲಿ ಎದ್ದಿರುತ್ತದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ **ಸಾವಯುವ ಬೇಸಾಯದ** ಬಗ್ಗೆ ಕಳೆದ ಅಕ್ಟೋಬರ್‌ನಲ್ಲಿ ರಾಷ್ಟ್ರಮಟ್ಟದ ವಿಚಾರಸಂಕಿರಣ ಒಂದು ನಡೆದಿದ್ದು, ವಿಜ್ಞಾನಿಗಳು ರೈತರು, ಸ್ವಯಂಸೇವಾಸಂಸ್ಥೆಗಳೊಡನೆ ಸೇರಿ ಸುಸ್ಥಿರ ಕೃಷಿಯ ರೂಪರೇಷೆಗಳ ಬಗ್ಗೆ ಚರ್ಚಿಸಿರುತ್ತಾರೆ. ಹಾಗೇ ಸಾವಯುವಕೃಷಿಯನ್ನು ಬೆಳೆಸಲು ಸಂಸ್ಥೆ ಒಂದನ್ನು ಹುಟ್ಟುಹಾಕಿರುತ್ತಾರೆ. ಇದು ವ್ಯವಸ್ಥಿತ ಜ್ಞಾನ, ವಿಜ್ಞಾನ ಸಂಸ್ಥೆಗಳು ಒತ್ತಡ ಅನಿವಾರ್ಯತೆಗೆ ಮಣಿದು ಪರ್ಯಾಯಗಳತ್ತ ಕಣ್ಣುಹಾಯಿಸುತ್ತಿರುವ ಸಂಕೇತ ತಾನೆ. ಹೀಗೆ ದೇಶೀಯ ಜ್ಞಾನ, ಪಾರಂಪರಿಕ ಜ್ಞಾನ ಮತ್ತು ವ್ಯವಸ್ಥಿತ ವಿಜ್ಞಾನ, ಈ ಮೂರು ಜ್ಞಾನ ವ್ಯವಸ್ಥೆಗಳು ಜಾಗ್ರುತಗೊಂಡು, ಹತ್ತಿರವಾಗುತ್ತಿರುವ ಸಾಧ್ಯತೆಯನ್ನು ಆ ಮೂಲಕ ಸುಸ್ಥಿರ ಬದುಕಿಗೆ ಹಲವು ಸಾಧ್ಯತೆಗಳನ್ನು ತೆರೆದಿಡುವ ಭರವಸೆಯನ್ನೂ ನೀಡುತ್ತಿವೆ. ಈ ಅಭಿವೃದ್ಧಿಯ ಮಾದರಿಯಲ್ಲಿ ಬರಿದೇ ಸಾಮರ್ಥ್ಯತೆ (Efficiency) ಮಾತ್ರವಲ್ಲ ಸಮಾನತೆ (Eqity), ನೈತಿಕತೆ (Ethics), ಪರಿಸರ (Environment), ಕಾಳಜಿ ಜೊತೆಗೆ ಶ್ರೇಷ್ಠತೆ(Excellency) ಗಳೆಲ್ಲವೂ ಅರಳಬಹುದಾಗಿರುತ್ತದೆ ಎಂಬುದು ಪ್ರೊ.ಗುಪ್ತಾರ ವಾದ.


ಈ ಸಂಚಿಕೆಯಲ್ಲಿ ಪ್ರೊ. ನಾಗರಾಜ್‌ರವರು, ಕೊಡಗಿನಾದ್ಯಂತ ಸಂಚರಿಸಿ ಕಲೆಹಾಕಿದ ಮಾಹಿತಿ, ಅಂಕಿ ಸಂಖ್ಯೆಗಳ ಆದಾರದ *ದೇವರ ಕಾಡಿನ* ಬಗ್ಗೆ ಮತ್ತು ಅಂತಹಾ ಸಂಸ್ಥೆಗಳಿಂದ ಹೇಗೆ ನಮ್ಮ ಪರಿಸರ, ಸಂಸ್ಕೃತಿಗಳು ಉಳಿಯಬಹುದೆಂಬುದಕ್ಕೆ ಸಾಕ್ಷಿಯಾದ ಲೇಖನವಿದೆ. ಇಂತಹಾ ವಿಚಾರಗಳಲ್ಲಿ ನಮ್ಮ ಹಲವು ಪಂಡಿತರು ವಿದೇಶಗಳಲ್ಲಿ ಪ್ರಬಂಧ ಮಂಡಿಸಲು, ಅಲ್ಲಿ ಡಾಕ್ಟರೇಟ್ ಪಡೆಯಲು ಈಗಾಗಲೇ ಯಶಸ್ವಿಯಾಗಿರುವರೇ ಹೊರತು, ತೀವ್ರ ಕಾಳಜಿಯಿಂದ ಇವುಗಳನ್ನು ಪ್ರೊ. ನಾಗರಾಜ್ ತರಹ ಅಭ್ಯಸಿಸಿ, ನಮ್ಮ ನಿಮ್ಮೊಡನೆ ಹಂಚಿಕೊಳ್ಳುವುದು ಈವರೆಗೆ ಯಾರಿಗೂ 'ಲಾಭದಾಯಕ'ವಾಗಿ ಕಂಡಿಲ್ಲ.

ಅದೇ ರೀತಿ ಶ್ರೀ ಹಿಮಕರರವರು ಸರ್ವೋದಯ ಕೃಷಿಕ *ಶ್ರೀ ಚೇರ್ಕಾಡಿ ರಾಮಚಂದ್ರರಾಯರ* ಬದುಕನ್ನೂ ನಮ್ಮ ಮುಂದಿಟ್ಟಿರುವರು. ಗಾಂಧಿ, ವಿನೋಭರ ತತ್ವದ ಮೇಲೆ ಬದುಕು, ವೃತ್ತಿಯನ್ನು ಸವೆಸುತ್ತಲೇ, ಇದರಿಂದ "ಅಪಾರ ಉಳಿತಾಯವೂ ಸಾಧ್ಯ" ಎಂದು ತಮ್ಮ ಬ್ಯಾಂಕ್ ಬ್ಯಾಲೆನ್ಸನ್ನು ಬಹಿರಂಗಪಡಿಸಿರುವ ಶ್ರೀ ರಾಮಚಂದ್ರ ರಾಯರತ್ತ ನಮ್ಮ ಕೃಷಿ ಅರ್ಥಶಾಸ್ತ್ರರೂ ಕಣ್ಣುಹಾಯಿಸುವುದು ಅನಿವಾರ್ಯವಾಗಿದೆ.

ಈ ಸಂಚಿಕೆಯಲ್ಲಿ *ಅಂಬಾಜಿ*ಯಂತಹ ಓರ್ವ ಸಾಮನ್ಯ ಕೃಷಿಕೂಲಿಕಾರ ಹೇಗೆ 30 ಗ್ರಾಮಗಳ ಪಶುಗಳ ಚಿಕಿತ್ಸೆಯ ಬಾರವನ್ನು ನಿಸ್ವಾರ್ಥ ಪರನಾಗಿ ಹೊತ್ತಿರುವನೆಂಬುದರ ಬಗ್ಗೆ ಲೇಖನವಿದೆ. ಹಾಗೇ, ಬಸ್ ಚಾಲಕ *ಸೈಯದ್* ಜನಸಾಮಾನ್ಯರ ಆರೋಗ್ಯ ರಕ್ಷಣೆಗೆ ಕಾಣಿಕೆ ನೀಡುತ್ತಿರುವನೆಂಬುವುದರ ಬಗ್ಗೆ ವಿವರವಿದೆ. ಪರ್ಯಾಯ ಅಭಿವೃದ್ಧಿ ಮಾದರಿಯಲ್ಲಿ ಇವರೇ ಕೇಂದ್ರ ವ್ಯಕ್ತಿಗಳು ತಾನೇ ?

ಇನ್ನು ನಮ್ಮ *ಪ್ರೊ. ನಂಜುಂಡಸ್ವಾ*ಮಿಯವರ ನೇತೃತ್ವದ ಕರ್ನಾಟಕ ರಾಜ್ಯ ರೈತ ಸಂಘ ಇತ್ತೀಚೆಗೆ ರೈತರ ಬೃಹತ್ ಸಮ್ಮೇಳನ ನಡೆಸಿ **"ರೈತರ ಹಕ್ಕುಗಳ ಸನ್ನದ"**ನ್ನು ನಮ್ಮ ಮುಂದಿಟ್ಟಿದೆ. *'ಹಿತ್ತಲಗಿಡ'* ಎತ್ತುತ್ತಿರುವ ವಿಚಾರಗಳಿಗೆ ರೈತರ ಮೂಲದಿಂದಲೇ ಏಳಬೇಕಾಗಿರುವ ಅಭಿವೃದ್ಧಿಗೆ ಕಾಯ್ದೆ, ಕಾನೂನುಗಳ ಚೌಕಟ್ಟು ದೊರೆತು ಕಾರ್ಯರೂಪಕ್ಕೆ ಬರುವುದೇ ಆದಲ್ಲಿ ಅದು "ಈ ರೈತರ ಹಕ್ಕುಗಳ" ಈಡೇರಿಕೆಯಿಂದ ಮಾತ್ರ ಸಾಧ್ಯ. ಈ ಹೋರಾಟವನ್ನು ಪ್ರೊ. ನಂಜುಂಡಸ್ವಾಮಿಯವರ ನೇತೃತ್ವದ ಕರ್ನಾಟಕ ರಾಜ್ಯ ರೈತಸಂಘ ಹೇಗೆ ಮುಂದುವರಿಸುತ್ತದೆ, ಇದಕ್ಕೆ ಕರ್ನಾಟಕ ರಾಜ್ಯದ ಪರಿಸರವಾದಿಗಳು, ಎಡ-ಪ್ರಜಾಸತ್ತಾತ್ಮಕ ಶಕ್ತಿಗಳು ಹೇಗೆ ಸಹಕಾರ ನೀಡುತ್ತವೆ ಎಂಬುದನ್ನು ನಾವು ಕಾದು ನೋಡಬೇಕಾಗಿದೆ.

ಪ್ರಕಾಶ್ ಕಮ್ಮರಡಿ



ದೇಶೀಯ ಹತೋಟಿ ಕ್ರಮಗಳು

1. ಇಲಿ ಹೆಗ್ಗಣಗಳ ನಾಶಮಾಡಲು

90 ಭಾಗ ಎಳ್ಳು, ಕಡಲೆ ಬೀಜ, ಹುಚ್ಚೆಳ್ಳು, ಈ ರೀತಿಯ ಯಾವುದಾದರೊಂದು ಹಿಟ್ಟು + 5 ಭಾಗ ದಪ್ಪ ಕಾಳಿನ ಸಕ್ಕರೆ + 5 ಭಾಗ ಬಲ್ಪಿನಪುಡಿ, ಅಥವಾ ಟ್ಯೂಬ್‌ನ ಪುಡಿಯನ್ನು ಬೆರಸಿ ಇಲಿಗಳ ಬಿಲಗಳ ಹತ್ತಿರ ಇಟ್ಟರೆ ಅವು ತಿಂದು ಒಂದು ವಾರದಲ್ಲಿ ಸಾಯುತ್ತವೆ.

2. ಅಲಸಂದೆ ತುಕ್ಕು (Rust) ರೋಗಕ್ಕೆ :

ಒಂದು ಎಕರೆ ಅಲಸಂದೆ ಬೆಳೆಗೆ 10 ಕೆ.ಜಿ. ಬೇವಿನ ಬೀಜದ ಕಷಾಯ + 4 ಕೆ.ಜಿ. ವಿಷಂಪುರಿ ಸೊಪ್ಪಿನ ಕಷಾಯ + 100 ಗ್ರಾಂ ಪರಂಗಿ ಕಳ್ಳಿ ರಸ (ಸೋಪಿನಂತೆ ನೊರೆ ಬರುತ್ತದೆ.) ಮಿಶ್ರಮಾಡಿ 20 ಮತ್ತು 40 ನೇ ದಿನ ಸಿಂಪಡಣೆಮಾಡಿದರೆ, ತುಕ್ಕು ರೋಗ ಮತ್ತು ಕಾಯಿ ಕೊರೆತ ನಿವಾರಣೆಯಾಗುತ್ತದೆ.

3. ಕಾಫಿ ಕಾಂಡ ಕೊರೆಯುವ ಕೀಟಕ್ಕೆ :

ಕಣಗಲ (Nerium Odorum) ಹೂ ಗಿಡದ ಬೇರನ್ನು (400 ಗ್ರಾಂ) ಸಣ್ಣಪ್ರಮಾಣದಲ್ಲಿ ಕತ್ತರಿಸಿ 1500 ಮಿ.ಲಿ. ನೀರಿನಲ್ಲಿ ನೆನೆಹಾಕಿ (48 ಗಂಟೆಕಾಲ) ಈ ಮಿಶ್ರಣವನ್ನು 20 ಗ್ರಾಂ ಅರಿಸಿನದ ಪುಡಿಯೊಂದಿಗೆ ಮಿಶ್ರಣಮಾಡಿ ತಯಾರಾದ ಲೇಹವನ್ನು ಕಾಂಡ ಕೊರೆಯುವ ಭಾಗಕ್ಕೆ ಲೇಪಿಸಿದರೆ ಈ ಕೀಟ ಹೊರಬಂದು ಸಾಯುತ್ತದೆ. ಈ ಔಷಧಿ ತಯಾರು ಮಾಡಿದ ನಂತರ ಕೈಯನ್ನು ಚೆನ್ನಾಗಿ ತೊಳೆದು ಕೊಳ್ಳಬೇಕು. ಈ ದ್ರಾವಣ ಮಹಾ ವಿಷಕಾರಿ, ಕೀಟನಾಶಕವಾಗಿ ಸಿದ್ಧೌಷದ.

ಬಿ. ಬಸವ ರಾಜು

ಸಂತೇಶಿವರ, ಚನ್ನರಾಯಪಟ್ಟಣ, ಹಾಸನ

4. ಮಂಗಗಳನ್ನು ಓಡಿಸಲು

ದತ್ತೂರು ಗಿಡದ ಕಾಯಿಗಳನ್ನು ಜಜ್ಜಿ, ರಸ ತೆಗೆದು ಅದರಲ್ಲಿ ಅನ್ನ ಕಲಸಬೇಕು, ಸುವಾಸನೆಗೆ ಸ್ವಲ್ಪ ತುಪ್ಪ ಇಲ್ಲವೆ ಎಣ್ಣೆ ಹಾಕಿ, ಮಂಗಗಳು ಬರುವ ದಾರಿಯಲ್ಲಿ ಇಡಬೇಕು. ಇದನ್ನು ತಿಂದ ಮಂಗ, ತಲೆತಿರುಗಿದಂತಾಗಿ, ಒಂದೆರಡು ಕ್ಷಣ ಹಾಗೆಯೇ ಗರಬಡಿದಂತೆ ಬೀಳುತ್ತದೆ. ಆ ನಂತರ, ಮಂಗಗಳು ಆ ಕಡೆ ಸುಳಿಯುವುದಿಲ್ಲ. ಸಾಗರದ ನೀಲೇಶ್ ಕುಮಾರ್ ಜೈನ್ ಈ ವಿಧಾನ ಯಶಸ್ವಿ ಎಂದು ಹೇಳುತ್ತಾರೆ.

5. ಹಂದಿಗಳು ಬಾರದಂತೆ ತಡೆಯಲು

ಹಳೆಯ, ದನದ ಕೊಂಬುಗಳನ್ನು ಆರಿಸಿ ಇಡಬೇಕು. ಈ ಕೊಂಬುಗಳಲ್ಲಿ ಸೀಮೆಎಣ್ಣೆ ತುಂಬಿಸಿ, ಬೆಂಕಿ ಹಚ್ಚಬೇಕು. ಇದರಿಂದ ಬರುವ ವಾಸನೆಗೆ ಹಂದಿಗಳು ಹತ್ತಿರ ಸುಳಿಯುವುದಿಲ್ಲ. ದಾವಣಗೆರೆಯ ಭರಮಪ್ಪನವರ ಗದ್ದೆಯಲ್ಲಿ ಈ ವಿಧಾನವನ್ನು ಅನುಸರಿಸುತ್ತಾರೆ.

ಟಿ.ಎಲ್. ಸತ್ಯ ಪ್ರಕಾಶ್,

ಕೃಷಿ ಕಾಲೇಜು, ಬೆಂಗಳೂರು

6. ಬಂಗಲೆ ಸೊಪ್ಪನ್ನು ನೀರಿನಲ್ಲಿ ಕೊಳೆಸಿ ಅದರ ದ್ರಾವಣವನ್ನು ತರಕಾರಿಗೆ ಸಿಂಪಡಿಸಿದರೆ ಕ್ರಿಮಿಕೀಟಗಳು ಬೀಳುವುದು ಕಡಿಮೆ ಯಾಗುವುದು ಮಲೆನಾಡಿನ ರೈತರು ಕಂಡುಕೊಂಡಿರುವರು.

ಬಿ.ಆರ್. ಗಣೇಶ್ ರಾವ್

ಮಕ್ಕಿ, ಕಮ್ಮರಡಿ, ಶಿವಮೊಗ್ಗ

7. ಮೆಣಸಿನ ಕೊಳೆ ರೋಗಕ್ಕೆ

ಮೆಣಸಿನ ಬುಡಿಗೆ ಇಂಗಿನ ನೀರು ಸಿಂಪಡಿಸಿದರೆ ಕೊಳೆರೋಗ (Wilt) ಕಡಿಮೆಯಾಗುವುದಾಗಿ ದಾರವಾಡದ ಶ್ರೀಭರಮೆಗೌಡರ ಅನುಭವ.

8. ಪಾಮ್‌ರೋಸ ಹುಲ್ಲಿನ ಎಣ್ಣೆಯಿಂದ ಕೀಟನಾಶ

ಪಾಮ್‌ರೋಸ ಹುಲ್ಲಿನಿಂದ ಭಟ್ಟಿ ಇಳಿಸಿದ ಸುವಾಸನಾಯುಕ್ತ ತೈಲಕ್ಕೆ ವಿದೇಶಿ ಬೇಡಿಕೆ ಹೆಚ್ಚಾಗಿದೆ. ತಮಿಳು ನಾಡಿನಲ್ಲಿ ಇದನ್ನು ವ್ಯಾಪಕವಾಗಿ ಬೆಳೆಸಲಾಗುತ್ತಿದೆ. ತೈಲವನ್ನು ಭಟ್ಟಿ ಇಳಿಸಿದ ನಂತರ ಪಾತ್ರೆಯಲ್ಲಿ ಉಳಿದ ಎಣ್ಣೆಯನ್ನು ಮೆಣಸಿನಕಾಯಿ ಮತ್ತು ಹತ್ತಿ ಬೆಳೆಗಳನ್ನು ಬಾಧಿಸುವ ರಸ ಹೀರುವ ಕೀಟಗಳ ವಿರುದ್ಧ ಬಳಸಬಹುದು.

9. ಮೆಣಸಿನಕಾಯಿ ಎಲೆ ಮುದುಡು ರೋಗ ತಡೆಯಲು ಮುಸುಕಿನ ಜೋಳ

ಮೆಣಸಿನ ಕಾಯಿ ಮಲ್ಲೆ ರೋಗ, ಎಲೆ ಮುದುಡು ರೋಗ ಈ ಬೆಳೆಯನ್ನು ಅತಿಯಾಗಿ ಬಾಧಿಸುತ್ತವೆ. ಮೆಣಸಿನ ಬೆಳೆ ಸಾಲುಗಳ ನಡುವೆ ಅಂತರ ಬೆಳೆಯಾಗಿ ಅಥವಾ ಬೆಳೆಯ ಸುತ್ತಾ ಮುಸುಕಿನ ಜೋಳ ಬೆಳೆದಲ್ಲಿ ಈ ಕೀಟ ಹರಡುವುದನ್ನು ತಪ್ಪಿಸಬಹುದು.

ಇದೇ ನಂಜು ರೋಗ ತಡೆಗಟ್ಟಲು ಅಜಮೇರಿನ ಕೆಲವು ರೈತರು ಕೀಂಪ್ (ಲೆಪ್ಟಡೇನಿಯಾ ಪೈರೋಟೆಕ್ನಿಕಾ) ಮತ್ತು ತಂಬಾಕಿನ ರಸಗಳ ಮಿಶ್ರಣವನ್ನು ಸಿಂಪರಿಸಿ ರೋಗ ಹತೋಟಿ ಸಾಧಿಸಿದ್ದಾರೆ.

ಹನಿ ಬೀ 7(1):1996

ಅನುವಾದ *ಡಾ. ಎಸ್. ಸಿ. ಚಂದ್ರಶೇಖರ್*

ಕೃಷಿ ವಿ.ವಿ.ನಿಲಯ, ಬೆಂಗಳೂರು

ರಾಯರ ತೋಟದಲ್ಲಿ ಮರಕ್ಕೆ ಗದ್ದಿಲು !

ತೀರ್ಥಹಳ್ಳಿಯ ಸಾವಯವ ಕೃಷಿ ಋಷಿ ಪುರುಷೋತ್ತಮರಾಯರ ಆರೋಗ್ಯ ವಿಚಾರಿಸಲು ಮೊನ್ನೆತಾನೇ ಅವರ ತೋಟದ ಮನೆಗೆ ಹೋಗಿದ್ದೆ. ನಂತರ ಅವರ ತೋಟದತ್ತ ಕಣ್ಣಾಡಿಸಿದಾಗ ಒಂದು ಆಶ್ಚರ್ಯಕಾದಿತ್ತು. ಒಂದು ನೆಲ್ಲಿ ಗಿಡಕ್ಕೆ ಬುಡದಿಂದ ತಲೆಯವರೆಗೂ ಮಣ್ಣು ಮೆತ್ತಿರುವುದು ಕಂಡು ಬಂದಿತು. ಇದು ಅವರ ಇತ್ತೀಚೆಗಿನ ಶೋಧನೆಯಾಗಿದೆ. ನೆಲ್ಲಿ ಮರಕ್ಕೆ ವಿಪರೀತ ಕಾಂಡಕೊರೆಯುವ ಹುಳುಗಳ ಕಾಟ ತಡೆಯಲು ರಾಯರು ಕತ್ತಾಳೆ ನೀರನ್ನು ಕೆಮ್ಮಣ್ಣಿಗೆ ಸೇರಿಸಿ, ಕೆಸರು ಮಾಡಿ ಬುಡದಿಂದ ತಲೆವರೆಗೂ ಲೇಪಿಸಿದರು. ಒಳಗೆ ಸೇರಿರುವ ಹುಳುಗಳಿಗೆ ಅಲ್ಲೇ ಸಾವು. ಹೊರಗಿನಿಂದ, ಹೋಗುವ ಹುಳುಗಳ ದಾರಿ ಬಂದ್. ಹೇಗಿದೆ ನಮ್ಮ ರಾಯರ ಉಪಾಯ. (ಮರದ ಬೇರು ಮಾತ್ರ ಮಣ್ಣಿನ ಸಹವಾಸ ಇಷ್ಟಪಡುತ್ತದೆ ಎನ್ನುವುದು ಕೃಷಿ ವಿಜ್ಞಾನಿಗಳ ಇದುವರೆಗಿನ ನಂಬಿಕೆ. ಈಗ ಕಾಂಡಕ್ಕೂ ಮಣ್ಣಿನ ಸಹವಾಸ ಹೇಗಾಗುತ್ತದೆಂಬುದನ್ನು ಕಾದು ಪರೀಕ್ಷಿಸಬೇಕಾಗಿದೆ. ಸಂ.)

ಶ್ರೀ ರಾಯರು ಇದೀಗ ತಾನೇ ಹೃದಯಘಾತದಿಂದ ಚೇತರಿಸಿ ಕೊಳ್ಳುತ್ತಿರುವರು. "ನಾನಿನ್ನೂ ಮೂರು ಮುಖ್ಯ ಕೆಲಸ ಮುಗಿಸಬೇಕಾಗಿದೆ ಸಾಗರದ ಸಂಜೀವಿನಿ ಕೃಷಿ ಪ್ರಯೋಗ ಕೇಂದ್ರ, ನಮ್ಮ ಮನೆಯಲ್ಲಿ ಪಾರಂಪರಿಕ ಕೃಷಿ ಬಗೆಗಿನ ಸಾಹಿತ್ಯಗಳ ಗ್ರಂಥಾಲಯ ಹಾಗೂ ಶಿವಮೊಗ್ಗದಲ್ಲಿ ನಾಟಿ ವೈದ್ಯ ಮತ್ತು ದೇಸೀಯ ಹತೋಟಿಗಳ ಬಗೆಗಿನ ಪ್ರಯೋಗಾಲಯ ಇವೇ ಆ ಕೆಲಸಗಳು. ಇದನ್ನು ಮುಗಿಸದೇ ಯಾರೂ ನನ್ನನ್ನು ಮುಟ್ಟುವ ಹಾಗೇ ಇಲ್ಲ" ಎನ್ನುವ ರಾಯರಿಗೆ ಆರೋಗ್ಯ, ತುಂಬು ಆಯಸ್ಸನ್ನು ಹಿತ್ತಲ ಗಿಡ ಹಾರೈಸುತ್ತದೆ.

ಪ್ರಕಾಶ್ ಕಮ್ಮರಡಿ

ಬೆಂಗಳೂರು

ರೈತರ ಹಕ್ಕಿನ ಬಗೆಗಿನ ಸನ್ನದು

ಕರ್ನಾಟಕ ರಾಜ್ಯ ರೈತ ಸಂಘ ಇದೇ ಜನವರಿಯಂದು ಬೆಂಗಳೂರಿನ ಸಮ್ಮೇಳನದಲ್ಲಿ ಹೊರಡಿಸಿರುವ ರೈತರ ಹಕ್ಕಿನ ಬಗೆಗಿನ ಸನ್ನದಿನ ಸಾರಾಂಶ.

ನವ ಜಾಗತೀಕರಣ ಶಕ್ತಿಗಳು ರೈತರ, ಕೂಲಿಕಾರರ, ಬುಡಕಟ್ಟು ಜನ ಗ್ರಾಮೀಣ ಕರಕುಶಲಕರ್ಮಿಗಳ ಜ್ಞಾನ, ಸಂಪನ್ಮೂಲಗಳನ್ನು ಕಾಯಿದೆ, ಕಟ್ಟಳೆಗಳ ಮೂಲಕ ಸ್ವಾಧೀನ ಪಡಿಸಿಕೊಳ್ಳುವುದನ್ನು ತಡೆಯುವುದಾಗಿ ಈ ಸಮ್ಮೇಳನದಲ್ಲಿ ಘೋಷಿಸಲಾಯ್ತು. ಜೊತೆಗೆ, ಕೆಲವೇ ಕೆಲವು ಶಕ್ತಿಗಳ ಕೈಯಲ್ಲಿ ಈ ಜ್ಞಾನ ಮತ್ತು ಸಂಪನ್ಮೂಲಗಳ ಕೇಂದ್ರೀಕರಣವಾಗುವುದರ ಅಪಾಯದ ಬಗ್ಗೆ ಜಗತ್ತಿನ ಎಲ್ಲ ಸರ್ಕಾರಗಳನ್ನು ಎಚ್ಚರಿಸಲಾಯ್ತು. ಮಾನವ, ವ್ಯವಸ್ಥಿತ ರೀತಿಯಲ್ಲಿ ಕೃಷಿ ಕೈಗೊಳ್ಳಲು ಶುರುಮಾಡಿದಂದಿನಿಂದಲೇ ಅಸ್ತಿತ್ವದಲ್ಲಿರುವ ಈ ಹಕ್ಕುಗಳ ಮೂಲಕವೇ ನಮ್ಮ ರೈತರು ಜೀವ ವಿವಿಧತೆಯನ್ನು ಕಾಪಾಡಿಕೊಂಡು ಬಂದಿರುವುದು ಮಾತ್ರವಲ್ಲ, ಹೊಸ ಹೊಸ ತಳಿಗಳನ್ನು ಅಭಿವೃದ್ಧಿ ಪಡಿಸುತ್ತಾ ಈ ಅಗಾಧ ಜೈವಿಕ ಸಂಪನ್ಮೂಲಗಳನ್ನು, ಅದಕ್ಕೆ ಹೊಂದಿಕೊಂಡಿರುವ ಜ್ಞಾನವ್ಯವಸ್ಥೆಯನ್ನೂ ಸಂರಕ್ಷಿಸಿಕೊಂಡು ಬಂದಿರುವರು. ಈ ಮೂಲಭೂತ ಹಕ್ಕುಗಳಿಗೇ ಇಂದು ಚ್ಯುತಿ ಬರುವ ಅಪಾಯವನ್ನು ಮನಗಂಡು, ಈ ಮುಂದಿನ ರೈತರ ಹಕ್ಕಿನ ಬಗೆಗಿನ ಸನ್ನದನ್ನು ಮುಂದಿಡಲಾಗಿದೆ.

೧. ರೈತರ ಹಕ್ಕುಗಳೆಂದರೆ ಸಂಪನ್ಮೂಲಗಳ ಮೇಲಿನ ಹಕ್ಕು ಮತ್ತು ಅವುಗಳಿಗೆ ಹೊಂದಿಕೊಂಡು, ಅವುಗಳಿಂದ ಬೇರ್ಪಡಿಸಲಾರದ ಜ್ಞಾನ ವ್ಯವಸ್ಥೆಯ ಮೇಲಿನ ಹಕ್ಕುಗಳು ಸೇರಿರುತ್ತವೆ. ಅಂದರೆ, ರೈತರ ಪಾರಂಪರಿಕ ಜ್ಞಾನ, ಅವರ ಸಾಂಸ್ಕೃತಿಕ ಹಿನ್ನೆಲೆಗೆ ಗೌರವ ಮತ್ತು ಈ ಮೂಲಕವೇ ಜ್ಞಾನದ ಸೃಷ್ಟಿಗೆ ಬುನಾದಿ ಎಂದು ಒಪ್ಪಿಕೊಳ್ಳುವುದಾಗಿರುತ್ತದೆ.

೨. ಜೈವಿಕ ಸಂಪನ್ಮೂಲಗಳ ಮೇಲೆ ನಿಯಂತ್ರಣ, ಅವುಗಳ ಭವಿಷ್ಯವನ್ನು ನಿರ್ಧರಿಸುವ ಹಕ್ಕು, ಹಾಗೇ ಕಾನೂನಿನ ಚೌಕಟ್ಟಿನೊಳಗೆ ಅವುಗಳ ಮೇಲಿನ ಒಡೆತನದ ಬಗ್ಗೆ ವ್ಯಾಖ್ಯಾನಿಸುವ ಹಕ್ಕು ರೈತರದ್ದೇ ಆಗಿರುತ್ತದೆ.

೩. ರೈತರ ಹಕ್ಕು ಮೂಲತಃ ಸಾಮೂಹಿಕ ಸ್ವರೂಪದ್ದಾಗಿರುತ್ತದೆ. ಹಾಗಾಗಿ ಇಂದು ಖಾಸಗಿ ಆಸ್ತಿಯ ಚೌಕಟ್ಟಿಗಿಂತ ಭಿನ್ನವಾದ ದೃಷ್ಟಿಕೋನದಿಂದ ಈ ಹಕ್ಕುಗಳನ್ನು ಗುರುತಿಸುವುದು ಅನಿವಾರ್ಯವಾಗಿರುತ್ತದೆ.

೪. ಈ ಹಕ್ಕುಗಳು ರಾಷ್ಟ್ರಮಟ್ಟದಲ್ಲಿ ಅನ್ವಯವಾಗುವಂತಾಗಿರಬೇಕು ಮತ್ತು ಈ ನಿಟ್ಟಿನಲ್ಲಿ ರಾಷ್ಟ್ರದ ಸಾರ್ವಭೌಮತ್ವವನ್ನು ಗೌರವಿಸುತ್ತಾ, ಕೇಂದ್ರ ಸರ್ಕಾರ ಶಾಸನಗಳನ್ನು ತರಲು ಮುಂದಾಗಬೇಕು. ಈ ರೀತಿಯ ಶಾಸನ ಸ್ಥಳೀಯ ನಿಯಮಗಳನ್ನು ಎತ್ತಿಹಿಡಿಯುತ್ತಾ, ಜೀವಿಗಳ ಮೇಲೆ ಮತ್ತು ಜ್ಞಾನದ ಮೇಲಿನ ಯಾವುದೇ ರೀತಿಯ "ಬೌದ್ಧಿಕ ಸನ್ನದ್ಧಿನ ಹಕ್ಕ"ನ್ನು (Intellectual Property Rights) ತಿರಸ್ಕರಿಸಬೇಕು.

೫. ಜೀವ ವಿವಿಧತೆಯನ್ನು ಸಂರಕ್ಷಿಸಿ, ಆ ಮೂಲಕ ಆಹಾರದ ಭದ್ರತೆಯನ್ನೂ ಏರ್ಪಡಿಸಿಕೊಳ್ಳುವ ಹಕ್ಕು ಅದೇ ರೀತಿ ಸೀಮಾ ಹಕ್ಕು, ಭೂಮಿಯ ಹಕ್ಕು, ನೀರು ಮತ್ತು ಗಾಳಿಯ ಮೇಲಿನ ಹಕ್ಕುಗಳನ್ನೂ ಇದು ಒಳಗೊಂಡಿರುತ್ತದೆ.

೬. ಸ್ಥಳೀಯ ಮಟ್ಟದಲ್ಲಿರಲಿ ಅಥವಾ ರಾಷ್ಟ್ರ, ಅಂತರ್ ರಾಷ್ಟ್ರ ಮಟ್ಟದಲ್ಲಿರಲಿ, ಜೈವಿಕ ಸಂಪನ್ಮೂಲಗಳನ್ನು ವ್ಯಾಖ್ಯಾನಿಸುವಾಗ, ವಿಸ್ತರಿಸುವಾಗ ಹಾಗೇ ಆ ಬಗ್ಗೆ ಕಾಯಿದೆ ಕಟ್ಟಲೆಗಳನ್ನು ಜಾರಿತರುವಾಗ ರೈತರೂ ಭಾಗವಹಿಸುವ ಹಕ್ಕು.

೭. ಸುಯೋಗ್ಯ ತಂತ್ರಜ್ಞಾನದ ಹಾಗೇ ಆ ನಿಟ್ಟಿನಲ್ಲಿ ಸಂಶೋಧನೆಯ ರೂಪರೇಶೆಗಳನ್ನು ನಿರೂಪಿಸುವಾಗ ಮತ್ತು ನಿರ್ವಹಿಸುವಾಗ ಆ ಚಟುವಟಿಕೆಗಳಲ್ಲಿ ರೈತರು ಭಾಗವಹಿಸುವ ಹಕ್ಕು.

೮. ಸಂಪನ್ಮೂಲಗಳ ಮೇಲಿನ ಒಡೆತನ, ಅವುಗಳ ಉಪಯೋಗ, ಬಳಸುವ ರೀತಿ, ಸಂರಕ್ಷಿಸುವ ಮತ್ತು ನಿರ್ವಹಿಸುವ ರೀತಿಗಳನ್ನು ವ್ಯಾಖ್ಯಾನಿಸುವ ಮತ್ತು ನಿಯಂತ್ರಿಸು ಹಕ್ಕು.

೯. ಜೈವಿಕ ಸಂಪನ್ಮೂಲಗಳನ್ನು ಮುಕ್ತವಾಗಿ ಬಳಸುವ, ಆಯ್ಕೆ ಮಾಡುವ, ಶೇಖರಿಸಿಡುವ ಮತ್ತು ಪರಸ್ಪರ ರೈತರು ವಿನಿಮಯ ಮಾಡಿಕೊಳ್ಳುವ ಹಕ್ಕು.

೧೦. ಜೀವ ವಿವಿಧತೆಯನ್ನು ಸಂರಕ್ಷಿಸಿಕೊಳ್ಳುವಂತಹ ಸುಸ್ಥಿರ ಕೃಷಿ ಅಭಿವೃದ್ಧಿಯ ಯೋಗ್ಯ ಮಾದರಿಗಳನ್ನು ನಿರೂಪಿಸಿಕೊಳ್ಳುವ ಹಕ್ಕು ಮತ್ತು ಈ ನಿಟ್ಟಿನಲ್ಲಿ ಸಹಕರಿಸುವ ಕಾಯ್ದೆಗಳನ್ನು ರೂಪಿಸುವಲ್ಲಿ ಪ್ರಭಾವ ಬೀರುವ ಹಕ್ಕು.

ಆಹಾರದ ಭದ್ರತೆ ಇಂದು ಮಾನವ ಜನಾಂಗವನ್ನು ಅತ್ಯಂತ ಚಿಂತೆಗೆ ಗುರಿಮಾಡಿರುವ ಮುಖ್ಯ ವಿಚಾರಗಳಲ್ಲಿ ಒಂದಾಗಿದೆ. ನಮ್ಮ ಕೃಷಿ ಪದ್ಧತಿ ಈ ಜೀವವಿವಿಧತೆಯನ್ನು ಘೋಷಿಸಿದಲ್ಲಿ ಮಾತ್ರ ಈ ಆಹಾರದ ಭದ್ರತೆ ಸಾಧಿಸುವುದು ಸಾಧ್ಯವಾಗುತ್ತದೆ. ಈ ಅಮೂಲ್ಯ ಜೀವವಿವಿಧತೆಯ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆಗೆ ಈ ಎಲ್ಲಾ ರೈತರ ಹಕ್ಕುಗಳು ಅತ್ಯಗತ್ಯವಾಗಿದೆ ಎಂದು ಈ ಸಮ್ಮೇಳನದಲ್ಲಿ ಘೋಷಿಸಲಾಯಿತು.

ಪ್ರಯೋಗಾಲಯ ಹೊಕ್ಕ

ಹಿತ್ತಲಗಿಡ

ಗಟ್ಟಿಯಾದ ಚಿಪ್ಪು ಹೊಂದಿರುವ ಬಸವನ ಹುಳುವಿಗೆ ಯಾವುದೇ ಕೀಟನಾಶಕ ಕೂಡಾ ತಾಗದಂತೆ ಚಿಪ್ಪಿನಿಂದ ರಕ್ಷಣೆ. ಕೇರಳದ ಕಡೆಯ ರೈತರು ಇದರ ನಿಯಂತ್ರಣಕ್ಕಾಗಿ ಅಡಿಗೆಯ ಉಪ್ಪನ್ನು ಬಳಸುತ್ತಾರೆ. ಅಡಿಕೆ ಅಥವಾ ತೆಂಗಿನ ತೋಟದಲ್ಲಿ ಕಂಡು ಬರುವ ಇದನ್ನು ಹಿಡಿದು ಹೊಂಡದೊಳಗೆ ರಾಶಿ ಹಾಕಿ ಅವುಗಳ ಮೇಲೆ ಒಂದಷ್ಟು ಉಪ್ಪು ಹಾಕಿದರೆ ಹುಳುಗಳು ನಾಶ. ವೀಳ್ಯದೆಲೆಯ ಗಿಡಕ್ಕೆ ಈ ಹುಳು ತಗುಲಿದಾಗ ನೋಡೋಣವೆಂದು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ ವಿಜ್ಞಾನಿಯೋರ್ವರು ರೈತರ ಈ ಪದ್ಧತಿಯ ಆಧಾರವಹಿಸಿ ಗಿಡದ ಬುಡಕ್ಕೆ ಒಂದು ಹಿಡಿಯಷ್ಟು ಉಪ್ಪು ಹಾಕಿದಾಗ ಹುಳು ನಿಯಂತ್ರಣಕ್ಕೆ ಸಿಕ್ಕಿದೆಯೆಂದು ಕೇರಳದ ರೈತರನ್ನು ಅವರು ಸ್ಮರಿಸುತ್ತಾರೆ.

ಪಡಾರು ಕಳೆ ಕಟಾವ್ ಯಂತ್ರ

ಪಡಾರು ರಾಮಕೃಷ್ಣ ಶಾಸ್ತ್ರಿ, ದಕ್ಷಿಣ ಕನ್ನಡ, ಅಹಮದಾಬಾದ್ ಸಮ್ಮೇಳನಕ್ಕೆ ಆಹ್ವಾನಿತ ರೈತ

ಅಡಿಕೆ ತೋಟದಲ್ಲಿ ಹುಲ್ಲು ಕಳೆ ರಾವಣನ ಶಿರದಂತೆ. ವಾರ್ಷಿಕ 300 ರಿಂದ 400 ಸೆಂ.ಮೀ. ಮಳೆ ಬೀಳುವ ಕರಾವಳಿ ಮತ್ತು ಘಟ್ಟ ಪ್ರದೇಶಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ, ಕಾಸರಗೋಡು, ಶಿವಮೊಗ್ಗ, ಚಿಕ್ಕಮಗಳೂರು ತಾಲ್ಲೂಕುಗಳ ಅಡಿಕೆ ತೋಟಗಳಲ್ಲಿ ಕಳೆ ಕೀಳುವ ಕೆಲಸವೆಂದರೆ ದೊಡ್ಡ ತಲೆನೋವು. ಕತ್ತರಿಸಿದಂತೆ ಮತ್ತೆ ಚಿಗುರುತ್ತದೆ. ತೋಟದ ಈಚೆ ಮೂಲೆಯಿಂದ ಹೆರೆಯಲು ಆರಂಭಿಸಿ ಆಚೆ ಮೂಲೆ ತಲುಪುವಷ್ಟರಲ್ಲಿ ಈಚೆಯಲ್ಲಿ ಬೆಳೆದು ಹಾಸಿಯಾಗಿರುತ್ತದೆ. ಅಡಿಕೆ ಕೊಯ್ಲಿನ ಸಮಯದಲ್ಲಿ ಬಿದ್ದಡಿಕೆ ಹುಲ್ಲಿನೆಡೆಯಲ್ಲಿ ಮಂಗಮಾಯ. ಬವಣೆಯಲ್ಲಿ ಬಿದ್ದ ಸೂಜಿ ಹುಡುಕಿದಷ್ಟು ಕಷ್ಟ.

ಪ್ರತಿ ಮರದಿಂದ 5 ಅಡಿಕೆಯಂತೆ ಹುಲ್ಲಿನೆಡೆಯಲ್ಲಿ ಕಾಣೆಯಾದರೂ ಎಕ್ರೆಗೆ 500 ಮರವಿರುವ ಅಡಿಕೆ ತೋಟದಲ್ಲಿ 2500 ಅಡಿಕೆ ಮಂಗಮಾಯ. 3 ಕೊಯ್ಲಿನ ಒಂದು ವರ್ಷದಲ್ಲಿ ಎಕ್ರೆಯಿಂದ 7500 ಅಡಿಕೆ ನಷ್ಟ, ಸುಮಾರು 4000 ರೂ. ಖೋತಾ.

ಹುಲ್ಲು ಕಳೆ ಕೀಳಲು ಕೃಷಿ ಕಾರ್ಮಿಕರನ್ನು ಹೊಂದಿಸುವುದು ಬಹಳ ಕಷ್ಟ. ಆಗಸ್ಟ್ ತಿಂಗಳು ಬಂತೆಂದರೆ ಅಡಿಕೆ ತೋಟದ ಬೇರೆ ಕೆಲಸಗಳಾದ ಮರದ ಬುಡ ಬಿಡಿಸುವುದು, ಗೊಬ್ಬರ ಹಾಕುವುದು, ತೋಟದ ಅಗತೆ ಮಾಡುವುದು, ನೀರಾವರಿಗೆ ತಯಾರಿ ಮುಂತಾದ ಕೆಲಸಗಳಿಗೆ, ಕಾರ್ಮಿಕರ ಕೊರತೆ. ಬಯಲು ಸೀಮೆಯ ಜಿಲ್ಲೆಗಳಿಂದ ಕಾರ್ಮಿಕರನ್ನು ಕರೆಸಿಕೊಂಡರೂ ಮುಗಿಯದ ಕೆಲಸ ಕಾರ್ಯಗಳು. ಪ್ರತಿ ಎಕ್ರೆ ಕಳೆ ಕೀಳಲು, ಒಂದು ಬಾರಿಗೆ ಸುಮಾರು 40 ಕಾರ್ಮಿಕರು, ವರ್ಷಕ್ಕೆ ಮೂರು ಬಾರಿ - ಆಗಸ್ಟ್, ದಶಂಬರ, ಫೆಬ್ರವರಿ, ಕಳೆ ಕೀಳಲು ಒಟ್ಟು 120 ಕಾರ್ಮಿಕರು. ಒಬ್ಬರಿಗೆ 60 ರೂ ನಂತೆ 7,200 ರೂಪಾಯಿಗಳಷ್ಟು ಕಳೆ ಕೀಳಲು ಬೇಕು.

ಮಾರುಕಟ್ಟೆಯಲ್ಲಿ ದೊರಕುವ ಕಳೆ ಕಟಾವ್ ಯಂತ್ರಗಳು ಬರೀ ಹುಲ್ಲುಗಾವಲುಗಳಿಗೆ ಮಾತ್ರ ಪ್ರಯೋಜನಕಾರಿ. ಅಡಿಕೆ ತೋಟಗಳಲ್ಲಿ ಸರಾಗವಾಗಿ ಚಲಾಯಿಸಲು ಸಾಧ್ಯವಿಲ್ಲ. ಯಂತ್ರ ಸಣ್ಣದಾಗಿರಬೇಕು. ಅಡಿಕೆ ತೋಟದೊಳಗೆ ಸಲೀಸಾಗಿ ಚಲಿಸುವಂತಿರಬೇಕು, ಹಗುರವಾಗಿರಬೇಕು, ಎಂದು ಯೋಚಿಸಿ ಹೊಸ ಯಂತ್ರ ಆವಿಷ್ಕರಿಸುವ ನಿರ್ಣಯ ಕೈಗೊಂಡೆ. ಆಗ ನೆರವಾದವರು ಪುತ್ತೂರು ಬೊಳ್ವಾರಿನ ಅಂಬಿಕಾ ಎಂಜಿನಿಯರಿಂಗ್ ವರ್ಕ್ಸ್‌ನ ಅಣ್ಣುಸಪಲ್ಯ. ಅರ್ಧ ಎಚ್.ಪಿ ಶಕ್ತಿಯ ವಿದ್ಯುತ್ ಮೋಟಾರ್, ಮೋಟಾರ್ ಶಾಫ್ಟಿಗೆ ಎರಡಿಂಚು ಅಗಲದ, ಒಂದಡಿ ಉದ್ದದ ಹರಿತ ಬ್ಲೇಡು ಜೋಡಣೆ. ಎರಡು ಚಕ್ರದ, ಒಂದೂವರೆ ಅಡಿ ಅಗಲ, ಎರಡಡಿ ಉದ್ದದ ಕೈಗಾಡಿಯಲ್ಲಿ ಲಂಬವಾಗಿ ಕೂರಿಸಿ ಮೋಟಾರು ಮೇಲೆ, ಶಾಫ್ಟ್ ಅಡಿಯಲ್ಲಿ ಬ್ಲೇಡು ನೆಲದಿಂದ ಎರಡಿಂಚು ಮೇಲಿರುವಂತೆ ಗಾಡಿಯನ್ನು ದೂಡಲು ಎರಡಡಿ ಎತ್ತರದ ಹಿಡಿ, ಹಿಡಿಯ ಸಮೀಪ ಮೋಟಾರು ಸ್ವಿಚ್. ಸ್ವಿಚ್ ಒತ್ತಿದೊಡನೆ ಮೋಟಾರ್ ಚಾಲೂ, ಬ್ಲೇಡು ನಿಮಿಷಕ್ಕೆ 1450 ಸುತ್ತು ತಿರುಗುತ್ತದೆ. ಅಡ್ಡ ಸಿಕ್ಕಿದ ಹುಲ್ಲು ಕಳೆ ಚೂರು ಚೂರು. ಗಾಡಿಯನ್ನು ದೂಡುತ್ತ ಹೋದಂತೆ ದಾರಿಯ ಹುಲ್ಲೆಲ್ಲ ಧ್ವಂಸ. ಒಟ್ಟು ತೂಕ ಸುಮಾರು 25 Kg. ಗಾಡಿ ತಳ್ಳುವುದು, ಕಣಿದಾಟಿಸುವುದು ಅತ್ತಿತ್ತ ಸಾಗಿಸುವುದು ತೀರ ಸುಲಭ. ವಿದ್ಯುತ್ ಸಂಪರ್ಕಕ್ಕೆ ದೀರ್ಘವಾದ ಕೇಬಲ್ ವಯರ್.

ಒಂದೆಕ್ರೆ ಕಳೆ ತೆಗೆಯಲು 3 ರಿಂದ ನಾಲ್ಕು ಆಳು ಕೆಲಸ, ಶೇ.90 ಆಳು ಸಮಯ ಉಳಿತಾಯ. ಮೂರು ವರ್ಷ ಈ ಯಂತ್ರದಲ್ಲಿ ಕೆಲಸ ಮಾಡಿದ್ದೇವೆ.


ವಿದ್ಯುತ್ ಮೋಟಾರು, ಸಾಗಾಟ ಸುಲಭ, ಆದರೆ ತೋಟದುದ್ದಕ್ಕೂ ಕೇಬಲ್ ಎಳೆಯುತ್ತಾ ಸಾಗಬೇಕು. ಕೇಬಲ್ ಶಾರ್ಟ್ ಸರ್ಕ್ಯೂಟ್ ಆದರೆ ಜೀವಕ್ಕೆ ಅಪಾಯ, ಒದ್ದೆಯಾಗಿರುವ ತೋಟದಲ್ಲಿ ಅಪಾಯಕಾರಿ. ತಿರುಗುವಾಗ ಬೋಲ್ಟ್ ಅದಾಗಿ ಬಿಗಿಯುತ್ತಾ ಹೋಗುತ್ತದೆ. ಯಂತ್ರ ಕಾರ್ಯಾಚರಿಸುವ ವೇಳೆ ಬೋಲ್ಟ್ ಸಡಿಲವಾಗಿ ಬ್ಲೇಡು ಕಳಚುವ ಅಪಾಯವಿಲ್ಲ.

ಬೆಲ್ಟು ಸಡಿಲವಾದರೆ ಸುಲಭವಾಗಿ ಗಟ್ಟಿ ಮಾಡಬಹುದು. ಕೈಗಾಡಿಯ ಚಕ್ರಗಳಿಗೆ ಬೇರಿಂಗ್ ಅಳವಡಿಸಿ ಗ್ರೀಸ್ ಹಾಕಿರುವುದರಿಂದ ಕೈಗಾಡಿ ನೂಕುವುದು ತುಂಬಾ ಸುಲಭ. ಯಂತ್ರದ ಒಟ್ಟು ತೂಕ 38 Kg. ಒಬ್ಬ ಆರಾಮವಾಗಿ ನಿರ್ವಹಿಸಬಹುದು.

ಈ ಯಂತ್ರ ವಿದ್ಯುತ್ ಇದ್ದವರಿಗೆ ವಿದ್ಯುತ್ ಇರುವಾಗ ಲಾಯಕ್ಕು.

ಈ ರೀತಿ ಯೋಚಿಸುವಾಗ ಯಾಕೆ ಈ ಕಳೆ ಕಟಾವ್ ಯಂತ್ರಕ್ಕೆ ವಿಲ್ಲಿಯರ್ಸ್ ಇಂಜಿನ್ ಜೋಡಿಸಬಾರದು ಎಂಬ ಯೋಚನೆ ಬಂತು. 1.5 ಎಚ್.ಪಿ. ಯ ವಿಲ್ಲಿಯರ್ಸ್ (1.5 H.P. ಗ್ರೀವ್ಸ್ 12/2 ಪೆಟ್ರೋಲ್ / ಸೀಮೆ ಎಣ್ಣೆ ಇಂಜಿನ್) ಇಂಜಿನ್ ನೀರಾವರಿಗೆ ಬಳಸಲ್ಪಡುವ ಕಾರಣ ಎಲ್ಲೆಡೆ ಲಭ್ಯ. ತೀರ ಹಗುರ, ಸೀಮೆಎಣ್ಣೆಯಲ್ಲಿ ಚಲಾಯಿಸಬಹುದು. ನಿರ್ವಹಣೆ ತೀರ ಸುಲಭ, ಬಿಡಿ ಭಾಗಗಳು ಎಲ್ಲೆಡೆ ಲಭ್ಯ.

ವಿಲ್ಲಿಯರ್ಸ್ ಇಂಜಿನಿನ ವೇಗ ನಿಮಿಷಕ್ಕೆ 3000 ಸುತ್ತು. ಇದನ್ನು 1000 ಸುತ್ತಿಗೆ ಇಳಿಸುವುದು ಅನಿವಾರ್ಯ. ಇದಕ್ಕೆ ಗೇರ್ ಬಾಕ್ಸ್ ಕೊಡುವುದು ಅನಿವಾರ್ಯ. ಅಂಬಿಕಾ ಎಂಜಿನಿಯರಿಂಗ್ ವರ್ಕ್ಸ್‌ನ ಅನುಭವ ಸಮಸ್ಯೆ ನಿವಾರಣೆಯಲ್ಲಿ ಸಹಕಾರಿಯಾಯಿತು.



ಎರಡಡಿ ಉದ್ದ, ಒಂದಡಿ ಅಗಲದ ಕೈಗಾಡಿಯಲ್ಲಿ 1.5 ಎಚ್.ಪಿ. ವಿಲ್ಲಿಯರ್ಸ್ ಇಂಜಿನು ಜೋಡಣೆ. ಪುಲ್ಲಿ ಮತ್ತು ಬೆಲ್ಟ್ ವ್ಯವಸ್ಥೆ. ಗೇರ್ ಬಾಕ್ಸ್ ತುದಿಯ ಶಾಫ್ಟ್‌ಗೆ 18 ಇಂಚು ಉದ್ದ, 3 ಇಂಚು ಅಗಲದ ಬ್ಲೇಡು ಜೋಡಣೆ. ಕತ್ತರಿಸುವ ಬ್ಲೇಡಿನ ವೇಗ ನಿಮಿಷಕ್ಕೆ 1000 ಸುತ್ತು. ಬ್ಲೇಡನ್ನು ಶಾಫ್ಟಿಗೆ ಬೋಲ್ಟ್ ಬಳಸಿ ಜೋಡಿಸಿದೆ. ಬ್ಲೇಡು ಅಪ್ರದಕ್ಷಿಣವಾಗಿ ಸುತ್ತುತ್ತದೆ. ಹೀಗೆ

ತಿರುಗುವಾಗ ಬೋಲ್ಟ್ ಅದಾಗಿ ಬಿಗಿಯುತ್ತಾ ಹೋಗುತ್ತದೆ. ಯಂತ್ರ ಕಾರ್ಯಾಚರಿಸುವ ವೇಳೆ ಬೋಲ್ಟ್ ಸಡಿಲವಾಗಿ ಬ್ಲೇಡು ಕಳಚುವ ಅಪಾಯವಿಲ್ಲ.

ಬೆಲ್ಟು ಸಡಿಲವಾದರೆ ಸುಲಭವಾಗಿ ಗಟ್ಟಿ ಮಾಡಬಹುದು. ಕೈಗಾಡಿಯ ಚಕ್ರಗಳಿಗೆ ಬೇರಿಂಗ್ ಅಳವಡಿಸಿ ಗ್ರೀಸ್ ಹಾಕಿರುವುದ ರಿಂದ ಕೈಗಾಡಿ ನೂಕುವುದು ತುಂಬಾ ಸುಲಭ. ಯಂತ್ರದ ಒಟ್ಟು ತೂಕ 38 Kg. ಒಬ್ಬ ಆರಾಮವಾಗಿ ನಿರ್ವಹಿಸಬಹುದು.

ಗಾಡಿಯ ಹಿಂಬದಿ ಮತ್ತು ಬಲಬದಿಗೆ ರಬ್ಬರ್ ಹಾಳೆ ಜೋಡಿಸಿದೆ. ಬ್ಲೇಡಿಗೆ ಸಿಕ್ಕಿ ಕಟ್ಟುವ ಹುಲ್ಲು, ಕಲ್ಲು, ಮಣ್ಣಿನಿಂದ ಚಾಲಕನಿಗಿದು ರಕ್ಷಣೆ. ದೃಢವಾದ ಗೇರ್‌ಬಾಕ್ಸ್, ಬಿಡಿಭಾಗಗಳು ಎಲ್ಲೆಡೆ ಲಭ್ಯ. ಬ್ಲೇಡಿನ ಬದಲು ಮರ ಕೊಯ್ಯಲು ಬಳಸುವ ವೃತ್ತಾಕಾರಾದ ಗರಗಸವನ್ನು (16 ಇಂಚು ವ್ಯಾಸ) ಜೋಡಿಸಬಹುದು. ಹುಲ್ಲು ಕತ್ತರಿಸುವ ವೇಗ ಕಡಿಮೆ. ಆದರೆ ಹುಲ್ಲು ಚೂರು ಚೂರಾಗದೆ ದೊರಕುತ್ತದೆ. ಜಾನುವಾರು ಬಳಕೆಗೆ ಸೂಕ್ತ. ಮಾರಿಂಚು ವ್ಯಾಸದ ಗಿಡಗಳನ್ನು ಕತ್ತರಿಸಿ ಹಾಕುತ್ತದೆ.

ಯಂತ್ರ ಕೆಲಸ ಮಾಡುತ್ತಿರುವಾಗ ಬೇರೆಯವರು ತೀರಾ ಸಮೀಪ ಹೋಗುವುದು ಒಳ್ಳೆಯದಲ್ಲ. ಕನಿಷ್ಠ ಅಡಿ ದೂರವಿದ್ದರೆ ಏನೂ ಅಪಾಯವಿಲ್ಲ. ಇದೊಂದು ತೀರಾ ಸರಳ ಕಳೆ ಕಟಾವ್ ಯಂತ್ರ. ಒಬ್ಬರು ಆರಾಮವಾಗಿ ನಿರ್ವಹಿಸಬಹುದು. ಅಗತ್ಯವಿದ್ದಲ್ಲಿ ಕೈಗಾಡಿಯ ಎದುರಿಗೆ ಒಂದು ಚಿಕ್ಕ ಚಕ್ರ ಸಿಕ್ಕಿಸಿದಲ್ಲಿ ತಳ್ಳುವುದು ತೀರಾ ಸುಲಭ.

ಈ ಯಂತ್ರದ ಬಗ್ಗೆ ಅಕ್ಟೋಬರ್ 96 ರ ಅಡಿಕೆ ಪತ್ರಿಕೆಯಲ್ಲಿ ಪ್ರಕಟವಾದ ನಂತರ 25 ಯಂತ್ರಗಳು ಮಾರಾಟವಾಗಿವೆ. ಇದನ್ನು ಸ್ವಯಂಚಾಲಿತ ಯಂತ್ರವನ್ನಾಗಿ ಮಾಡಬೇಕೆಂದು ನನ್ನ ಆಸೆ. ಬಹುಷಃ ಮುಂದಿನ ವರ್ಷದೊಳಗೆ ಸ್ವಯಂ ಚಾಲಿತ ಯಂತ್ರವನ್ನಾಗಿ ಮಾಡಬಹುದು. ಈ ಯಂತ್ರವನ್ನು ಆವಿಷ್ಕರಿಸಿದ್ದಕ್ಕೆ ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘವು ತಾ.21.11.96 ರಂದು ಪುತ್ತೂರಿನಲ್ಲಿ ನನ್ನನ್ನು ಸನ್ಮಾನಿಸಿದೆ.

ವಿಠಾಸ ಪಟಾರು ರಾಮಕೃಷ್ಣ ಶಾಸ್ತ್ರಿ
ಅಂಚೆ ಕೋಳ್ನಾಡು, ಬಂಟ್ವಾಳ ತಾಲೂಕು
ದಕ್ಷಿಣ ಕನ್ನಡ

ರೈತ ಅನುಶೋಧನೆ

"ಅರುಣಿ" ಬಾಗುವ ಎತ್ತಿನ ಗಾಡಿ

ಅಮೃತ್‌ಬಾಯ್ ಅಗರಾವತ್- ಅಹ್ಮದಾಬಾದ್ ಸಮ್ಮೇಳನ ಉದ್ಘಾಟಿಸಿದ ಗುಜರಾತಿನ ಕುಶಲಕರ್ಮಿಯ ಶೋಧನೆ

ನಮ್ಮ ಕರ್ನಾಟಕ ಮತ್ತು ಇತರೆಡೆಯಲ್ಲಿರುವಂತೆ ಗುಜರಾತ್ ಪ್ರಾಂತ್ಯದಲ್ಲೂ ಎರಡು ಚಕ್ರಗಳ, ಹೆಚ್ಚುಭಾಗ ಮರದಿಂದ ಮಾಡಿರುವ ಎತ್ತಿನಗಾಡಿ ಪ್ರಚಲಿತದಲ್ಲಿದೆ. ಇದು ನೂರಾರು ವರ್ಷಗಳಿಂದ ಬಳಕೆಯಲ್ಲಿದ್ದರೂ ಇದರ ನ್ಯೂನತೆಗಳ ಕಡೆಗೆ ಗಮನ ಹರಿಸಿ ಇದನ್ನು ಉತ್ತಮ ಪಡಿಸಲು ಯಾರೂ ಪ್ರಯತ್ನಿಸಿರಲಿಲ್ಲ. ಈ ಬಗ್ಗೆ ಯೋಚಿಸಿ ಹೊಸಮಾದರಿಯ ಎತ್ತಿನಗಾಡಿಯೊಂದನ್ನು ಗುಜರಾತಿನ ಜುನಾಗಡ ಜಿಲ್ಲೆಯ ಶೋಧಕ ಪ್ರವೃತ್ತಿಯ ಕುಶಲಕರ್ಮಿ ಅಮೃತಬಾಯಿ ಅಗರಾವತ್ ಆವಿಷ್ಕರಿಸಿರುತ್ತಾರೆ. ಅದರ ಪರಿಣಾಮವಾಗಿಯೇ ಈತನ 'ಅರುಣಿ' ಬಾಗುವ ಎತ್ತಿನಗಾಡಿ ಹೊರಬಂದಿರುತ್ತದೆ.

ಬೇರೆ ಬೇರೆ ರೈತರೊಡನೆ ಚರ್ಚಿಸಿದ ಅಮೃತಬಾಯಿಗೆ ಬಂದ ಯೋಚನೆ ಎಂದರೆ, ಟ್ರ್ಯಾಕ್ಟರ್ ಮಾದರಿಯಲ್ಲಿ ಬಾಗುವ ಟ್ರಾಲಿ ಇರುವ ಮತ್ತು ಅದನ್ನು ಬಾಗಿಸುವಂತೆ ಮಾಡಲು ಹೈಡ್ರಾಲಿಕ್ ವ್ಯವಸ್ಥೆ ಇರುವಂತಹ ನಾಲ್ಕು ಚಕ್ರಗಳ ಕಬ್ಬಿಣದ ಎತ್ತಿನ ಗಾಡಿಯನ್ನು ಏಕೆ ತಯಾರಿಸಬಾರದು ಎಂಬುದು. ಈ ಯೋಚನೆಗೆ ಪುರಸ್ಕಾರ ದೊರೆತದ್ದು ಐ.ಐ.ಎಂ. ಅಹಮದಾಬಾದ್‌ನ ಪ್ರೊ.ಅನಿಲ್ ಗುಪ್ತಾರವರ ನೇತೃತ್ವದ 'ಸೃಷ್ಟಿ' ಸಂಸ್ಥೆಯಿಂದ. ಈ ಸಂಸ್ಥೆಯ ಸಹಕಾರದಿಂದ, 1995 ರಲ್ಲಿ ಈ ಅರುಣಿ ಬಾಗುವ ಎತ್ತಿನಗಾಡಿಯ ಸೃಷ್ಟಿಯಾಗಿರುತ್ತದೆ. ಸುಮಾರು 27,500 ರೂ. ಬೆಲೆಯ ಈ ನವೀನ ಎತ್ತಿನಗಾಡಿಗೆ ಗುಜರಾತ್‌ನಾದ್ಯಂತ ರೈತರಿಂದ ಈಗಾಗಲೇ ಪ್ರಶಂಸೆ, ಬೇಡಿಕೆ ಬರಲು ಶುರುವಾಗಿದೆ. ಈ ಬಾಗುವ ಎತ್ತಿನಗಾಡಿ ಯನ್ನು ಮೊದಲು ಖರೀದಿಸಿದ ಹೆಗ್ಗಳಿಕೆ ನಮ್ಮ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಸಲ್ಲುತ್ತದೆ. ಈ ಗಾಡಿಯನ್ನು ಈ ಬಾರಿಯ ಕೃಷಿ ಮೇಳದಲ್ಲಿ ಪ್ರದರ್ಶನಕ್ಕೆ ಇಟ್ಟು, ಜೊತೆಗೆ, ಇದರ ಅನ್ವೇಷಕ ಅಮೃತಬಾಯಿಯನ್ನೂ ಆಮಂತ್ರಿಸಿ ನಮ್ಮ ರೈತರೊಡನೆ ಈ ಬಗ್ಗೆ ಮಾಹಿತಿ ಅನುಭವಗಳನ್ನು ಹಂಚಿಕೊಳ್ಳುವ ವ್ಯವಸ್ಥೆಯನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಈ ಬಾರಿಯ ಕೃಷಿ ಮೇಳದಲ್ಲಿ ಏರ್ಪಡಿಸಲಾಗಿತ್ತು.

ನಿರ್ಧಿಷ್ಟ ಉಪಯೋಗಗಳು

1. ನಾಲ್ಕು ಚಕ್ರಗಳಿರುವುದರಿಂದ ಎತ್ತಿನ ಮೇಲೆ ಹೊರೆ ಬೀಳದೇ, ಅವುಗಳ ಭಾರ ಎಳೆಯುವ ಸಾಮರ್ಥ್ಯ ದ್ವಿಗುಣಗೊಳ್ಳುವಂತಾಗಿದೆ. ಹಳೆ ಮಾದರಿಯಲ್ಲಿ ಸುಮಾರು 10 ಕ್ವಿಂಟಾಲ್ ಭಾರ ಎಳೆಯಬಹುದಾಗಿದ್ದರೆ, ಇದರ ಮೂಲಕ 20 ಕ್ವಿಂಟಾಲ್ ಸಾಧ್ಯವಾಗುತ್ತದೆ.

2. ಎತ್ತಿನ ಹೆಗಲ ಮೇಲೆ ಆಗಬಹುದಾಗುವ ಹೆಗಲ ಗಾಯಗಳಂತಹ ತೊಂದರೆಗಳು ತಪ್ಪುತ್ತವೆ.

3. ಗಾಡಿಗೆ ಬಾಗುವಂತಹ ವ್ಯವಸ್ಥೆ ಇರುವುದರಿಂದ ಅದರ ಮೂಲಕ ಗೊಬ್ಬರ, ಮಣ್ಣು ಇತ್ಯಾದಿಗಳನ್ನು ಹೊಲಕ್ಕೆ ಹಾಯಿಸುವ ಸಮಯ, ಶ್ರಮಗಳೆರಡರಲ್ಲೂ ಉಳಿತಾಯ ವಾಗುತ್ತದೆ. ಸಮಯದಲ್ಲಿ ಅರ್ಧದಷ್ಟು ಉಳಿತಾಯವಾದರೆ, ಶ್ರಮದ ಮೂಲಕ ಎಕರೆಗೆ ಕನಿಷ್ಠ 500 ರೂಗಳಷ್ಟು ಕೂಲಿ ವೆಚ್ಚ ಕಡಮೆಯಾಗಿರುವುದು ಕಂಡುಬಂದಿರುತ್ತದೆ. ಜೊತೆಗೆ ಮಹಿಳೆಯರೂ ಸುಲಭವಾಗಿ ಇದನ್ನು ಮಾಡಬಹುದಾಗಿದೆ.

4. ಮುಂದಿನ ಭಾಗವನ್ನು ಅದರ ಅಡಿಯಲ್ಲಿ ಬರುವ ಎರಡು ಚಕ್ರಗಳ ಸಮೇತ ಸುಲಭವಾಗಿ ಬೇರ್ಪಡಿಸಿ, ಚಿಕ್ಕ ಕೈಗಾಡಿಯ ತರಹ ಮೇವು, ಮತ್ತಿತರ ಸಣ್ಣಪುಟ್ಟ ವಸ್ತುಗಳ ಸಾಗಾಣಿಕೆಗೆ ಬಳಸಬಹುದು.

5. ಅಗತ್ಯವಿಲ್ಲದಿರುವಾಗ, ಇಡೀ ಗಾಡಿಯನ್ನೇ ಸಂಪೂರ್ಣ ಬಿಚ್ಚಿ ವಿವಿಧ ಭಾಗಗಳನ್ನು ಬೇರ್ಪಡಿಸಿ, ಕೂಡಿಡಬಹುದು. ಹಾಗಾಗಿ ಗಾಡಿ, ನಿಲ್ಲಿಸಲು ಜಾಗದ ಅವಶ್ಯಕತೆ ಕಂಡುಬರುವುದಿಲ್ಲ.

6. ಕಾಲಿನ ಮೂಲಕ ಗಾಡಿಗೆ ಬ್ರೇಕ್‌ಹಾಕುವ ವ್ಯವಸ್ಥೆ ಇದೆ. ಇಳಿಜಾರಿನಲ್ಲಿ ಇದರಿಂದ ಎತ್ತುಗಳ ಮೇಲಿನ ಒತ್ತಡ ಕಡಿಮೆಯಾಗುತ್ತದೆ.

7. ಕಬ್ಬಿಣದಿಂದ ಮಾಡಿರುವುದರಿಂದ ಬಾಳಿಕೆ ಜಾಸ್ತಿ ಬರುತ್ತದೆ.

(ವಿ.ಸೂ. ಬಾರಿಯ ಬೆಂಗಳೂರು ಕೃಷಿ ವಿ.ವಿ. ನಿಲಯದ ಕೃಷಿ ಮೇಳದಲ್ಲಿ ಈ ಎತ್ತಿನ ಗಾಡಿ ಪ್ರದರ್ಶಿತವಾಗಿ ಬಹುಮಾನ ಪಡೆದಿದೆ.)

ವಿವರಗಳಿಗೆ : Prof. Anil K. Guptha, I.I.M, Vastrapura, Ahmedabad - 15

ಪಕ್ಷಿ ನಿಯಂತ್ರಣ ಸಾಧನಗಳು


ಜಿ.ಕೃಷ್ಣ ಪ್ರಸಾದ್, GREEN FOUNDATION, ತಳ್ಳಿ

ಕಾಳು ಕಟ್ಟುವ ಸಮಯದಲ್ಲಿ ಬೆಳೆಗಳಿಗೆ ಪಕ್ಷಿಗಳ ಕಾಟ ಸಾಮಾನ್ಯ. ಜೋಳ, ಸಜ್ಜೆ, ಸೂರ್ಯಕಾಂತಿ ಹಾಗೂ ಭತ್ತ ಮುಂತಾದ ಬೆಳೆಗಳ ಅರ್ಧಕರ್ಧ ಫಸಲು ಪಕ್ಷಿಗಳ ಪಾಲಾಗಬಹುದು. ಕಲ್ಲು ಎಸೆಯುತ್ತ, ಕೂಗು ಹಾಕುತ್ತಾ, ಡಬ್ಬ ಹಿಡಿದುಕೊಂಡು ಪಕ್ಷಿಗಳನ್ನು ಓಡಿಸುವ ಪ್ರಯತ್ನ ಮಾಡುವ ಹಳ್ಳಿಗಾಡಿನ ಮಕ್ಕಳು ಶಾಲೆ ಕೂಡ ತಪ್ಪಿಸಿಕೊಳ್ಳಬೇಕಾಗುತ್ತದೆ.


ಹಳೆಯ ಅಂಗಿ ಪ್ಯಾಂಟಿಗೆ ಹುಲ್ಲು ತುಂಬಿ ನಿಲ್ಲಿಸುವ ಬೆದರು ಬೊಂಬೆ, ಸಾಮಾನ್ಯವಾಗಿ ಬಳಕೆಯಲ್ಲಿರುವ ನಿಯಂತ್ರಣ ಸಾಧನ. ಆಂಧ್ರಪ್ರದೇಶದ ರಂಗಾ ರೆಡ್ಡಿ ಗ್ರಾಮದಲ್ಲಿ ಸಜ್ಜೆಗೆ ಬರುವ ಪಕ್ಷಿಗಳನ್ನು ನಿಯಂತ್ರಿಸಲು "ಲೊಡ್ಡು" ಎಂಬ ಸಾಧನವನ್ನು ಬಳಸುತ್ತಾರೆ. ಇದು ದೊಂಬರು, ಜಾತ್ರೆಗಳಲ್ಲಿ ಬೀಸಿಕೊಳ್ಳುತ್ತಾ ಬಾಸುಂಡೆ ಬರಿಸಿಕೊಳ್ಳುವ ಚಾಟಿಯ ತರಹ ಇರುತ್ತದೆ. ಗಾಳಿಯಲ್ಲಿ ಲೊಡ್ಡನ್ನು ಬೀಸಿದಾಗ ಬರುವ ಛಟೀರನೆ ಶಬ್ದಕ್ಕೆ ಪಕ್ಷಿಗಳು ಹಾರಿ ಹೋಗುತ್ತದೆ. ಹಗ್ಗದ ಬುಡ ದಪ್ಪನಾಗಿದ್ದು, ತುದಿ ನೀಳವಾಗಿರುವಂತೆ ಪುಂಡಿನಾರಿನಿಂದ ಚಾವಟಿ ಹೊಸೆಯಬೇಕು. ಇದನ್ನು ಒಂದು ಅಡಿ ಉದ್ದದ ಕಟ್ಟಿಗೆಯ ಹಿಡಿಗೆ ಕಟ್ಟಬೇಕು. ಹಿಡಿ ಮತ್ತು ಹಗ್ಗದ ನಡುವೆ ಸುಮಾರು 3 ಇಂಚುಗಳ ಜಾಗಬಿಟ್ಟು, ನಾರಿನ ಸಣ್ಣ ಹುರಿಯೊಂದರ ಜೋಡಣೆ ಇರಬೇಕು. ಹಿಡಿಯನ್ನು ಭದ್ರವಾಗಿ ಹಿಡಿದು ಚಾವಟಿಯ ತರಹ ಬೀಸಿದಾಗ ಛಟೀರ್ ಶಬ್ದ ಬರುತ್ತದೆ. ಇದಕ್ಕೆ ಸ್ವಲ್ಪ ಕೌಶಲ್ಯ ಕೂಡ ಅಗತ್ಯ. (ಚಿತ್ರ ೧)

ಇದೇ ಪ್ರದೇಶದಲ್ಲಿ ಬಳಕೆಯಲ್ಲಿರುವ ಇನ್ನೊಂದು ವಿಧಾನವೆಂದರೆ, ಹಳೆಯ ಕ್ಯಾಸೆಟ್ ಟೇಪು ಬಳಸುವುದು. ಹಳೆಯ ಆಡಿಯೋ ಕ್ಯಾಸೆಟ್ ಟೇಪನ್ನು ತೋರಣದ ರೀತಿಯಲ್ಲಿ ನಾಲ್ಕೂ ಮೂಲೆಗಳಲ್ಲಿ ಕಟ್ಟಬೇಕು. ಕ್ಯಾಸೆಟ್‌ಟೇಪು, ಹೊಳೆಯುವುದರ ಜೊತೆಗೆ ಗಾಳಿಗೆ ಬರ್ರ್ರೋ ಎಂದು ಶಬ್ದಮಾಡಿ, ಪಕ್ಷಿಗಳನ್ನು ಓಡಿಸುತ್ತದೆ. ವೀಡಿಯೋ ಕ್ಯಾಸೆಟ್ ಟೇಪು ಇನ್ನಷ್ಟು ಪರಿಣಾಮಕಾರಿ.


ಇಥಿಯೋಪಿಯಾದ ರೈತರು ಜೋಳದ ಬೆಳೆಗೆ ದಾಳಿ ಇಡುವ ಪಕ್ಷಿಗಳನ್ನು ನಿಯಂತ್ರಿಸಲು ಅನುಸರಿಸುವ ವಿಧಾನವನ್ನು ಇಲ್ಲಿ ಪ್ರಸ್ತಾಪಿಸಬಹುದು. ಬೆಳೆಯ ನಡುವೆ ಚಪ್ಪರದ ರೀತಿ ಬಟ್ಟೆಯೊಂದನ್ನು ಕಟ್ಟಿ, ಅಗ್ಗವಾದ ಬೀಜಗಳನ್ನು ಅರಿಶಿಣದಲ್ಲಿ ಕಲಿಸಿ ಚಪ್ಪರದ



ಚಿತ್ರ 1



ಚಿತ್ರ 2



ಚಿತ್ರ 3

ಮೇಲೆ ಹರಡುತ್ತಾರೆ. ಹಕ್ಕಿಗಳು ಜೋಳದ ಬದಲಿಗೆ ಅಗ್ಗವಾದ ಬಣ್ಣದ ಬೀಜಗಳನ್ನು ತಿಂದು ಹೊರಟು ಹೋಗುತ್ತದೆ.

ಪೂರ್ವಘಟ್ಟದ ಗೋದಾವರಿ ಪ್ರಾಂತ್ಯದ ಆದಿವಾಸಿಗಳು ವಿಶಿಷ್ಟ ನಿಯಂತ್ರಣ ಸಾಧನವನ್ನು ಉಪಯೋಗಿಸುತ್ತಾರೆ. ತೊಡೆಗಾತ್ರದ ಟೊಳ್ಳು ಬಿದಿರಿನ ಬೊಂಬನ್ನು ತೆಗೆದುಕೊಂಡು, ಎರಡೂ ತುದಿಗಳನ್ನು ಕೆತ್ತಿ ಬಳುಕುವ ದಬ್ಬೆಯ ತರಹ ಮಾಡಿಕೊಳ್ಳಬೇಕು. ಎರಡು ಗೆಣ್ಣುಗಳ ನಡುವೆ 3 ಅಂಗುಲದ ಸಣ್ಣ ಕಾಲುವೆ ಮಾಡಬೇಕು. ಈಗ ದಬ್ಬೆಯನ್ನು ಬಿಲ್ಲಿನ ತರಹ ಬಗ್ಗಿಸಿ, ಹಗ್ಗದಿಂದ ಕಟ್ಟಿ ತಳದ ಕಡೆ ತಗಡಿನ ರೇಕೊಂದನ್ನು ನೇತುಹಾಕಬೇಕು. ಬಿಲ್ಲಿನ ಮಧ್ಯೆ ಟೊಳ್ಳು ಬೊಂಬಿಗೆ ತಾಕುವಂತೆ ಬಿದಿರಿನ ಕಡ್ಡಿಯೊಂದನ್ನು ಹಗ್ಗದ ನಡುವೆ ತೂರಿಸಬೇಕು. ಬಿಲ್ಲಿನ ಮೇಲ್ಭಾಗದ ತುದಿಯನ್ನು ಸದಾ ಅಲುಗಾಡುವ ಮರದ ಕೊಂಬೆಗೆ ಕಟ್ಟಬೇಕು. ಗಾಳಿಗೆ ತಗಡು ಅಲ್ಲಾಡಿದಂತೆಲ್ಲಾ ದಾರ ತಿರುಗಿ ಕಡ್ಡಿ ಬೊಂಬಿಗೆ ಬಡಿದು ಶಬ್ದ ಮಾಡುತ್ತದೆ. ರಂಪಚೂಡಾವರಂನ ಕುಲಾಗಂಗಿ ರೆಡ್ಡಿಯವರ ಅನುಭವದಲ್ಲಿ ತಲೆತಲಾಂತರದಿಂದ ಈ ಕ್ರಮ ಉಪಯೋಗಿಸಲಾಗುತ್ತಿದೆ.(ಚಿತ್ರ ೨)

ಇದೇ ಪ್ರಾಂತ್ಯದ ಮರಡ ಮಿಲ್ಲಿಯ ಕನ್ನಯ್ಯ ಇನ್ನೊಂದು ವಿಧಾನವನ್ನು ಉಪಯೋಗಿಸುತ್ತಾರೆ. ಗೆಣ್ಣಿನಿಂದ ಗೆಣ್ಣಿಗೆ ಎರಡು ಅಡಿ ಉದ್ದದ ಬಿದಿರಿನ ಬೊಂಬನ್ನು ತೆಗೆದುಕೊಂಡು, ಅದರ ಮೇಲೆ ಎರಡು ಇಂಚು ಅಗಲದ ಕಾಲುವೆ ತೋಡಿ ಬೊಂಬನ್ನು ಟೊಳ್ಳು ಮಾಡಬೇಕು. ಚಿತ್ರ ೩ ರಲ್ಲಿ ತೋರಿಸಿರುವಂತೆ ಎರಡೂ ಮಗ್ಗಲಿಗೆ ದಾರಕಟ್ಟಿ, ಅದರೊಂದಿಗೆ ಒಂದು ಅಡಿ ಉದ್ದದ ಬಿದಿರುಕಡ್ಡಿಗಳನ್ನು ದಾರದ ಮಧ್ಯೆ ಇರುವಂತೆ ಕಟ್ಟಬೇಕು. ಬಿದಿರು ಬೊಂಬಿನ ಒಂದು ತುದಿಯಲ್ಲಿ ತೂತ ಮಾಡಿ, ಉದ್ದನೆಯ ದಾರ ಕಟ್ಟಿ, ಜಮೀನಿನ ಮೂಲೆಯಲ್ಲಿರುವ, ಕೊಂಬೆಗೆ ಇಲ್ಲವೇ 'Y' ಆಕಾರದ ಕವಲಿಗೆ ಇಳಿಬಿಡಬೇಕು. ಉದ್ದನೆಯ ದಾರದ ಇನ್ನೊಂದು ತುದಿಯನ್ನು ಹೊಲದ ಮಧ್ಯೆ ಇರುವ ಅಟ್ಟಕ್ಕೆ ಕಟ್ಟಿ, ಎಳೆದರೆ, ಬಿದಿರು ಕಡ್ಡಿಗಳು ಬೊಂಬಿಗೆ ತಾಗಿ ಶಬ್ದ ಬರುತ್ತದೆ. ಇದರಿಂದ ಒಂದೆಡೆ ಕೂತು ಹಕ್ಕಿಗಳನ್ನು ಓಡಿಸಬಹುದು.

ಸಾವಯವ ಒಣ ಬೇಸಾಯ

ಶ್ರೀ ಎ.ಎನ್. ಚನ್ನಪ್ಪಗೌಂಡರ್, ಅಹ್ಮದಾಬಾದ್ ಸಮ್ಮೇಳನಕ್ಕೆ ಆಹ್ವಾನಿತ ರೈತರು.

ನಾನು 1984-85 ರಲ್ಲಿ ಧಾರವಾಡ ಜಿಲ್ಲೆಯ ಗದಗ ತಾಲೂಕಿನಲ್ಲಿ ಬಿ.ಡಿ.ಓ. ಆಗಿ ಕೆಲಸಮಾಡುತ್ತಿದ್ದಾಗ ಆ ತಾಲೂಕಿನ ರೈತರ ಜೊತೆ ಕೃಷಿಯ ಬಗ್ಗೆ ಆಗಾಗ ಸಮಾಲೋಚನೆ ಮಾಡುತ್ತಿದ್ದೆ. ಬಹಳ ಜನ ರೈತರು ಬರಗಾಲದ ಬವಣೆಯ ಬಗ್ಗೆ ಒತ್ತಿ ಹೇಳುತ್ತಿದ್ದರು. ಆದ ಕಾರಣ ಈ ವಿಷಯದ ನಿಜವಾದ ಸಂಗತಿ ಏನೆಂಬುದನ್ನು ತಿಳಿದು ಕೊಳ್ಳಲು ಸನ್ 1925 ರಿಂದ ಸನ್1965 ರವರೆಗೆ ಅಂದಾಜು 40 ವರ್ಷಗಳ ಹಿಂದಿನಿಂದ ಆದ ಮಳೆಯ ರೀತಿ, ನೀತಿಗಳನ್ನು ತಿಳಿದುಕೊಳ್ಳಲು ಮನಸ್ಸು ಮಾಡಿದೆ. ಮದ್ರಾಸ್ (ಚೆನ್ನಾಯಿ) ನಗರದಲ್ಲಿದ್ದ ರೀಜನಲ್ ಮೀಟ್ರಾಲಾಜಿಕಲ್ ಖಾತೆಯಿಂದ ಗದುಗಿನಲ್ಲಿ ಮಳೆಯಾದ ಪ್ರತಿ ದಿನದ ಅಂಕಿ ಅಂಶಗಳನ್ನು ತರಿಸಿಕೊಂಡು ಅಭ್ಯಾಸಿಸಲಾಗಿ . ಪ್ರತಿವರ್ಷ ಮಳೆಯಾಗುತ್ತಿರುವ ರೀತಿ ನೀತಿಗಳಲ್ಲಿ ಬದಲಾವಣೆಯಾಗುತ್ತ ಬಂದಿರುವುದು ಸ್ಪಷ್ಟವಾಗಿ ತಿಳಿದುಬಂದಿತು. ಆ ಬದಲಾವಣೆಯು ಇತ್ತಿತ್ತಲಾಗಿ ಅತಿ ಹೆಚ್ಚಾಗಿರುವುದು ಇಂದಿನ ನಮ್ಮ ಅನುಭವದಿಂದ ತಿಳಿದು ಬಂದಿದೆ.

ಆದರೆ ಒಂದು ಮುಖ್ಯವಾದ ವಿಷಯ ಆ ಅಭ್ಯಾಸದಿಂದ ತಿಳಿದು ಬಂದದ್ದೇನೆಂದರೆ 40 ವರ್ಷಗಳಲ್ಲಿ ಮಳೆಯಾಗದ ವರ್ಷಗಳು ಮಾತ್ರ ಕಂಡುಬರಲಿಲ್ಲ. ಅಲ್ಲದೆ ಆದ ಮಳೆಯು ವರ್ಷದಲ್ಲಿ ಯಾವಾಗ ಎಷ್ಟು ಮತ್ತು ಹೇಗೆ ಆಗುತ್ತದೆಂಬುದನ್ನು ನಿರ್ದಿಷ್ಟವಾಗಿ ತಿಳಿದು ಕೊಳ್ಳಲು ಸಾಧ್ಯವಾಗಲಿಲ್ಲ. ಆದ ಕಾರಣ ನಮಗೆ ಬೇಕಾದಾಗ ಮಳೆಯಾಗದಿದ್ದರೂ ಮಳೆಯಾದಾಗ ಅದು ಹೇಗೇ ಆದರೂ ಆದ ಮಳೆಯ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ಮಳೆಯಾದ ವೇಳೆಯಲ್ಲಿ ಯಾವ ಬೀಜ ಬಿತ್ತಲು ಸರಿಯಾದ ಕಾಲವಾಗಿರುತ್ತದೆಯೋ ಆ ಬೀಜಗಳನ್ನು ಮಾತ್ರ ಬಿತ್ತಿ ಪೀಕು ತೆಗೆದು ಕೊಳ್ಳಲು ಸಾಧ್ಯವಾಗಬಹುದೆಂದು ವಿಚಾರಿಸಿದ್ದೆ. ನಾನು ನನ್ನ ಸರಕಾರಿ ಸೇವೆಯಿಂದ ನಿವೃತ್ತನಾದ ಮೇಲೆ ಅಂದರೆ 1980 ರಲ್ಲಿ ರಾಯಚೂರ ಜಿಲ್ಲೆಯ ಎಲಬುರ್ಗಾ ತಾಲೂಕಿನ ಬನ್ನಿ ಕೊಪ್ಪದಲ್ಲಿ ನಮ್ಮ ಸ್ವಂತ 12 ಎಕರೆ ಜಮೀನಿನಲ್ಲಿ ಮೇಲೆ ಹೇಳಿದ ವಿಚಾರದಂತೆ ಪ್ರಯತ್ನಿಸಲು ಕಾರ್ಯ ಕೈಕೊಂಡೆ.

> *ನನಗೆ ಹೆಚ್ಚಾಗಿ ಭೂಮಿಯಲ್ಲಿ ತಿರುಗಾಡಿ ಭೂಮಿಯನ್ನು ಪದೆ ಪದೆ ಪರೀಕ್ಷಿಸುವುದು ಬಹಳ ಇಷ್ಟವಾದ ಕೆಲಸ. ಹಾಗೆ ಮಾಡುತ್ತಿರುವಾಗ ಭೂಮಿಯು ನನ್ನೊಡನೆ ಮಾತನಾಡಿ ಭೂಮಿಯಲ್ಲಿ ಯಾವ ಕೆಲಸವನ್ನು ಹೇಗೆ ಮತ್ತು ಯಾವ ವೇಳೆಯಲ್ಲಿ ಮಾಡಿದರೆ ತನಗೂ ಮತ್ತು ನಮಗೂ ಒಳ್ಳೆಯದಾಗುತ್ತ ದೆಂಬುದನ್ನು ಹೇಳುತ್ತದೆಂಬುದು ತಿಳಿದು ಬಂತು.*

ಆದ ಕಾರಣ ಭೂಮಿಯು ಹೇಳಿದಂತೆಯೇ ಮೊದಲು ಭೂ ಸಾರ ಸಂರಕ್ಷಣೆಯ ಮತ್ತು ಆ ಭೂಮಿಯಲ್ಲಿ ಮಳೆಯಿಂದ ಬಿದ್ದ ನೀರಿನ ನಿರ್ವಹಣೆಯ ಕಾರ್ಯವನ್ನು ಕೈಗೆತ್ತಿಕೊಂಡು ನಮ್ಮ ಭೂಮಿಯಲ್ಲಿನ ಮಣ್ಣಿನ ಗುಣ, ಮಣ್ಣಿನ ಆಳ ಮತ್ತು ಭೂಮಿಯ ಇಳಿಜಾರು ಇವುಗಳನ್ನು ವಿಚಾರಿಸಿ **ಭೂಮಿಯನ್ನು ಒಂದೇ ಮಣ್ಣಿನ ಗುಣ, ಒಂದೇ ಮಣ್ಣಿನ ಆಳ ಮತ್ತು ಆದಷ್ಟು ಭೂಮಿಯ ಇಳಿಜಾರು ಕಡಿಮೆಯಾಗುವಂತೆ ಸಣ್ಣ ಸಣ್ಣ ಭಾಗಗಳನ್ನು ಮಾಡಿ, ಆ ಭಾಗಗಳಿಗೆ ಒಡ್ಡುಗಳನ್ನು ಹಾಕಿ, ಆ ಸಣ್ಣ ಸಣ್ಣ ಭಾಗಗಳನ್ನು ಭೂಮಿಯ ಮೇಲ್ಪದರಿನ ಮಣ್ಣು ಬಹಳ ಸರಿಯದಂತೆ ಸಮಪಾತಳಿ ಮಾಡಿದೆ.** ಇದರಿಂದ ನಮ್ಮ ಹೊಲದಲ್ಲಿ ಭೂ ಸಾರ ಸಂರಕ್ಷಣೆಯು ಸಂಪೂರ್ಣ ಆಗಿ. ಆ ಭೂಮಿಯ ಮೇಲೆ ಬಿದ್ದ ಮಳೆಯ ನೀರು ಹರಿದು ಹೋಗದೆ ಅದರ ಉತ್ತಮ ನಿರ್ವಹಣೆಯಿಂದ ಬಿದ್ದಲ್ಲಿಯೇ ಇಂಗಿ ಭೂಮಿಯು ಹೆಚ್ಚಿಗೆ ಶಾಶ್ವತವಾಗಿ ಹಸಿಯಾಗಲು ಸಾಧ್ಯವಾಗಿರುತ್ತದೆ.

17 ವರ್ಷಗಳಿಂದ ಪ್ರತಿ ವರ್ಷ ಮಳೆಯಾದಾಗ ಒಡೆದ ಒಡ್ಡು ಒಡಕಲುಗಳನ್ನು ರಿಪೇರಿ ಮಾಡುತ್ತ ಭೂಸಾರ ಸಂರಕ್ಷಣೆಯನ್ನು ಮತ್ತು ನೀರಿನ ನಿರ್ವಹಣೆಯನ್ನು ಇಂದಿನವರೆಗೂ ತಪ್ಪದೇ ಮಾಡುತ್ತ ಬಂದಿದ್ದೇನೆ. ನಾವು ಎಷ್ಟೆಷ್ಟು ಪ್ರಯತ್ನ ಮಾಡಿದರೂ ಭೂಮಿಯಲ್ಲಿ ನೀರು ಹರಿದು ಹೋಗುವುದು ತಪ್ಪಿದ್ದಲ್ಲ. ತುಂತುರು ಹನಿ ಮಳೆಯಾದರೆ ಮಳೆಯ ನೀರು ಹೆಚ್ಚಾಗಿ ಭೂಮಿಯಲ್ಲಿ ಇಂಗಿ ಸಂಪೂರ್ಣ ಹಸಿಯಾದರೆ ಹೆಚ್ಚಿನ ಮಳೆಯ ನೀರು ಸ್ವಾಭಾವಿಕವಾಗಿ ಹರಿದು ಹೋಗುತ್ತದೆ. ಮಳೆಯು ಬಿರುಸಿನಿಂದ ಆದರೆ ನೀರು ಭೂಮಿಯಲ್ಲಿ ಇಂಗುವುದು ಕಡಿಮೆ ಆಗಿ ಹೆಚ್ಚಿನ ಮಳೆಯ ನೀರು ಭೂಮಿಯ ಮೇಲಿನ ಫಲವತ್ತಾದ ಮಣ್ಣನ್ನು ಕೊಚ್ಚಿಕೊಂಡು ಹೋಗುವುದು. ಇದನ್ನು ತಡೆಯಲು ನಮ್ಮ **ಹೊಲದಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಹೊಂಡ ಕೆರೆಗಳನ್ನು ನಿರ್ಮಿಸಿ ಹರಿದು ಹೋಗುವ ನೀರನ್ನು ಹಿಡಿದಿಟ್ಟು ಪುನಃ ಮರಳಿ ಅವಶ್ಯ ಬಿದ್ದಾಗ ಪೈರಿಗೆ ಉಪಯೋಗಿಸಲು ಶುರು ಮಾಡಿದ್ದೇನೆ.**

ನಮ್ಮ ಭೂಮಿಯಲ್ಲಿ ಈಗ ತೆಗೆದುಕೊಳ್ಳುತ್ತಿರುವುದು ಹಿಂಗಾರು ಪೀಕು ಮಾತ್ರ. 25-30 ವರ್ಷಗಳ ಹಿಂದೆ ಈ ಭೂಮಿಯಲ್ಲಿ ಮುಂಗಾರು ಪೀಕು ತೆಗೆದುಕೊಳ್ಳುತ್ತಿದ್ದರು. ಆದರೆ ಇತ್ತಿತ್ತಲಾಗಿ ಮುಂಗಾರು ಹಂಗಾಮಿನಲ್ಲಿ ಸರಿಯಾಗಿ ಮಳೆಯಾಗುವುದೇ ಅತಿ ಕಡಿಮೆಯಾಗಿ ರುವುದರಿಂದ ಅದನ್ನು ಕೈಬಿಟ್ಟಿದ್ದೇವೆ. ಆದ ಕಾರಣ ಮುಂಗಾರು ಹಂಗಾಮಿನಲ್ಲಿ ರೋಹಿಣಿ ಮತ್ತು ಮೃಗಶಿರ ಮಳೆಗಳು ಸರಿಯಾಗಿ ಆದರೆ ಹಸಿರು ಗೊಬ್ಬರದ ಬೀಜಗಳನ್ನು ಬಿತ್ತಿ ಆರು ವಾರಗಳ ನಂತರ ಭೂಮಿಯಲ್ಲಿ ಸೇರಿಸಲು ಪ್ರಯತ್ನಿಸಿದ್ದೇನೆ. ಇದರಲ್ಲಿ ಸ್ವಲ್ಪ ತಡವಾದರೆ ಅದನ್ನು ಮಘಾ ಮಳೆಯು ಕೂಡುವದರೊಳಗಾಗಿ ಹಸಿರು ಗೊಬ್ಬರದ ಪೈರನ್ನು ತೆಗೆದು, ತೆಗೆದ ದಿವಸವೇ ಅದನ್ನು ಸಣ್ಣದಾಗಿ ಕತ್ತರಿಸಿ ಕಾಂಪೋಸ್ಟ ಗೊಬ್ಬರ ಮಾಡಿ ಅದನ್ನು ಮುಂದಿನ ಪೈರಿನ ಸಲುವಾಗಿ ಉಪಯೋಗಿಸಿದ್ದೇನೆ. ಹೀಗೆ ಮಾಡಲು 17ವರ್ಷಗಳಲ್ಲಿ 5 ಸಾರಿ ಮಾತ್ರ ಸಾಧ್ಯವಾಗಿದೆ. ಎರಡನೆಯದಾಗಿ ಹಿಂಗಾರು ಪೀಕು ತೆಗೆದ ಮೇಲೆ ದನಕರುಗಳಿಗೆ ಬೇಕಾಗದ ಪೀಕಿನ

ಉಳಿದೆಲ್ಲ ಭಾಗವನ್ನು ಅತಿ ಸಣ್ಣದಾಗಿ ಕತ್ತರಿಸಿ ವರ್ಷಗಳಿಂದ ಭೂಮಿಗೆ ಹಾಕುತ್ತ ಬಂದಿದ್ದೇನೆ. ಇದರ ಜೊತೆಗೆ ಮನೆಯಲ್ಲಿನ ದನಕರುಗಳಿಂದ ದೊರೆತ ತಿಪ್ಪೆಯ ಗೊಬ್ಬರವನ್ನು ಸಾಧ್ಯವಾದಷ್ಟು ಭೂಮಿಗೆ ಹಾಕುತ್ತೇನೆ.

ಎರಡು ವರ್ಷಗಳಿಂದ ಎರೇ ಹುಳದ ಗೊಬ್ಬರವನ್ನು ಕೆಲವು ಪ್ಲಾಟುಗಳಲ್ಲಿ ಹಾಕಿದ್ದೇನೆ. ಯಾಕೆಂದರೆ ಒಣ ಭೂಮಿಯಲ್ಲಿ ಸರಿಯಾಗಿ ಸಾವಯುವ ಗೊಬ್ಬರವಿದ್ದ ಪ್ಲಾಟುಗಳಲ್ಲಿ ಎರೆಹುಳು ಗೊಬ್ಬರದಲ್ಲಿದ್ದ ತತ್ತಿಗಳು ಮರಿಯಾಗಿ ಒಣಭೂಮಿಯಲ್ಲಿದ್ದ ಪೈರಿಗೆ ಬೇಕಾದ ಉತ್ತಮ ಸಾರಶಕ್ತಿಯನ್ನು ಉತ್ಪಾದಿಸಲು ಸಾಧ್ಯವಾಗಬಹುದೇನೋ ಎಂಬುದನ್ನು ನೋಡಲು ಪ್ರಯತ್ನಿಸಿದ್ದೇನೆ. ಇದರ ಪರಿಣಾಮವು ಬರುವ ವರ್ಷಗಳಲ್ಲಿ ತಿಳಿಯಬಹುದು.

ಈ ರೀತಿ ಭೂ ಪಲವತ್ತತೆಯನ್ನು ಕಾಯ್ದುಕೊಂಡು ಭೂಮಿಯಲ್ಲಿ ನೀರು ಹಿಡಿಯುವ ಶಕ್ತಿಯನ್ನು ಹೆಚ್ಚಿಸಿ ಭೂಮಿಯ ಆರೋಗ್ಯವನ್ನು ಸ್ಥಿರಗೊಳಿಸಿ ಉತ್ತಮವಾದ ಬೀಜಗಳನ್ನು ಕಾಲಕ್ಕೆ ಸರಿಯಾಗಿ ಬಿತ್ತಿ ಪೀಕು ತೆಗೆದುಕೊಳ್ಳುತ್ತಿದ್ದೇನೆ. ಒಣ ಬೇಸಾಯದಲ್ಲಿ ಮುಂಗಾರಿನಲ್ಲಿ ಸ್ವಲ್ಪ ಮುಂದಾಗಿ ಬಿತ್ತಿದರೆ ಮತ್ತು ಹಿಂಗಾರಿನಲ್ಲಿ ಸ್ವಲ್ಪ ಹಿಂದಾಗಿ ಬಿತ್ತಿದರೆ ರೋಗ ರುಜಿನಗಳ ಮತ್ತು ಹುಳಗಳ ಬಾಧೆಯನ್ನು ತಡೆದುಕೊಳ್ಳುವ ಶಕ್ತಿಯು ಅಂಥ ಹೊಲಗಳಲ್ಲಿ ಹೆಚ್ಚಾಗಿ ಅವುಗಳ ಕಾಟ ಕಡಿಮೆಯಾದದ್ದು ಕೂಡಾ ಕಂಡುಬಂದಿದೆ. ಒಂದು ಹವಾಮಾನವು ಕೆಲವು ಪೈರುಗಳಿಗೆ ಮಾರಕವಾಗಿದ್ದರೆ ಅದೇ ಹವಾಮಾನವು ಬೇರೊಂದು ಪೈರುಗಳಿಗೆ ಪೂರಕವಾಗಿ ರುತ್ತದೆಂದು ತಿಳಿದು ಬಂದಿದೆ.

ವಿಳಾಸ
ಎ.ಎನ್. ಚನ್ನಪ್ಪಗೌಂಡರ್,
ಬನ್ನಿಕೊಪ್ಪ, ಯಲಬುರ್ಗ, ರಾಯಚೂರು ಜಿಲ್ಲೆ.

ಸಾವಯುವ ಗೊಬ್ಬರಗಳ ಬಳಕೆ

ಡಾ. ದೇವಂಗಿ ಆರ್.ಪ್ರಫುಲ್ಲ ಚಂದ್ರ,
ಕೃಷಿಕ ಹೊಸಳ್ಳಿ ಶಿವಮೊಗ್ಗ

ಹಸಿರು ಎಲೆ, ಪ್ರಾಣಿಗಳ ಗೊಬ್ಬರ ಮತ್ತು ಕಬ್ಬಿನ ಸೋಗೆಯಿಂದ ಉತ್ತಮ ಸಾವಯುವ ಗೊಬ್ಬರ ಪಡೆಯಬಹುದು. ಇದೇ ನನ್ನ ಕಳೆದ 25 ವರ್ಷಗಳ ಸಾಧನೆ. ಈ ಅಂಶ ಹಾಗೂ ಸಿದ್ಧಾಂತದಿಂದಲೇ ನಾನು ಈವರೆಗೆ ಸಹಜ ಕೃಷಿ ವಿಧಾನದಲ್ಲಿ ಪ್ರತಿವರ್ಷ ಉಳುಮೆ ಮಾಡದೆ ಕೂಳೆಕಬ್ಬನ್ನು ಬೆಳೆಯುತ್ತಿದ್ದೇನೆ. ಅಂತೆಯೇ ನನ್ನ ತೋಟದಲ್ಲಿ ಬಿದ್ದ ಗರಿ, ಎಲೆಗಳನ್ನು ಹಾಗೆಯೇ ಅಲ್ಲಿಯೇ ಬಿಟ್ಟು ಅವುಗಳು ಸುಲಭವಾಗಿ ಕೊಳೆಯುವಂತೆ ಮಾಡಿ, ತೋಟದ ಉತ್ಪನ್ನಗಳಿಗೆ ಸುಲಭ ಸಾವಯವ ಗೊಬ್ಬರ ಕೊಡುವ ಕ್ರಿಯೆಯಲ್ಲಿ ಯಶಸ್ವಿ ಯಾಗಿದ್ದೇನೆ. ಇದರಿಂದ ಇಳುವರಿ ಬೆಳೆಗಳ ಉತ್ತಮತೆ ಮತ್ತು ಭೂಸಾರ ಸಂರಕ್ಷಣೆಯಲ್ಲಿ ಗಣನೀಯ ಪ್ರಗತಿ ಸಾಧಿಸಲು ಅನುಕೂಲವಾಗಿದೆ.

ಸಸ್ಯಗಳಿಗೆ ದ್ರವರೂಪದ ಗೊಬ್ಬರ

ಸಸ್ಯಗಳಿಗೆ ಸಾವಯುವ ಗೊಬ್ಬರವನ್ನು ದ್ರವರೂಪದಲ್ಲಿ ಕೊಟ್ಟರಂತೂ ಅವುಗಳ ಪ್ರಗತಿ ಅತಿ ಶೀಘ್ರ ಹಾಗೂ ಪರಿಣಾಮಕಾರಿ ಎಂಬ ಅಂಶ ತಿಳಿದು ನನ್ನ ಗದ್ದೆ ತೋಟಗಳಿಗೆ ಗೋಬರ್ ಗ್ಯಾಸ್‌ನಿಂದ ಬಳಸಿದ ಸ್ಲರಿಯನ್ನು ನೀರಿನ ಕಾಲುವೆಗಳಿಗೆ ಹಾಯಿಸಿ ದ್ರವರೂಪದಲ್ಲಿಕೊಡುವ ಪ್ರಯತ್ನ ಮಾಡುತ್ತಿದ್ದೆ. ಈಗ ನನ್ನ ಮಗ ಡಿ.ಪಿ. ಸವ್ಯಸಾಚಿ ಇದನ್ನು ಇನ್ನೂ ಉತ್ತಮವಾಗಿ ಮಾರ್ಪಡಿಸಿ ಪ್ರಾಣಿಗಳ ತ್ಯಾಜ್ಯವಸ್ತುಗಳು ಹಾಗೂ ಸ್ಲರಿಯನ್ನು ದ್ರವ ರೂಪದಲ್ಲಿ ಸ್ಪಿಂಕ್ಲರ್ ವಿಧಾನದಲ್ಲಿ ಕೊಡುವ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾನೆ. ಇದರಿಂದ 1 ಗಂಟೆಗೆ 13,500 ಲೀಟರ್ ದ್ರವಸಾವಯವ ಗೊಬ್ಬರವನ್ನು ಬೆಳೆಗಳಿಗೆ ಕೊಡಬಹುದು ಹಾಗೂ ರಾಸಾಯನಿಕ ಗೊಬ್ಬರದ ಒತ್ತಡವನ್ನು ಗಣನೀಯವಾಗಿ ಕಡಿಮೆ ಮಾಡಲು ಸಹಾಯಕವಾಗಿದೆ.

ಸಾವಯುವ ಕೃಷಿಯಲ್ಲಿ ಭತ್ತದ ಬೆಳೆ

ದಿನೇಶ್ ಬಿ.ಎಸ್. ಅಹ್ಮದಾಬಾದ್ ಸಮ್ಮೇಳನಕ್ಕೆ
ಆಹ್ವಾನಿತ ಯುವ ರೈತ

ಕಳೆದೆರಡು ವರ್ಷದಿಂದ, ಏಳು ಎಕರೆ ಜಾಗಕ್ಕೆ, ಮುಂಗಾರು ಶುರುವಾಗುವ ಹೊತ್ತಿಗೆ (April end) ಒಂದು ಕ್ವಿಂಟಾಲ್ ಸೆಣಬಿನ ಬೀಜ ಬಿತ್ತನೆ ಮಾಡಿದೆವು. ಜೂನ್ ಕೊನೆಯಲ್ಲಿ ಆರು ಅಡಿ ಎತ್ತರಕ್ಕೆ ಒತ್ತಟ್ಟಿಗೆ ಬೆಳೆದ ಸೆಣಬನ್ನು ಮಣ್ಣಿಗೆ ಹೂಟಿ ಮಾಡಿ ಸೇರಿಸಿದೆವು. ಎತ್ತುಗಳಿಂದ ಇದು ಕಷ್ಟವಾಗುತ್ತದೆ. ಮೊದಲು ಗದ್ದೆಯಲ್ಲಿ ನೀರು ನಿಲ್ಲಿಸಿಕೊಂಡು ಟಿಲ್ಲರ್‌ನ್ನು ಗದ್ದೆಯಲ್ಲಿ ಓಡಾಡಿಸಬೇಕು. ಅದರ ಭಾರಕ್ಕೆ ಪೂರ್ತಿ ಸೆಣಬು ನೀರಿನಲ್ಲಿ ಮುಳುಗಿ 4-5 ದಿವಸಗಳಲ್ಲಿ ಕೊಳೆಯುತ್ತದೆ. ಈ ಕೆಲಸವನ್ನು ಸೆಣಬಿನ ಹೂ ಕಾಣುವುದರೊಳಗೆ ಮಾಡಿ ಮುಗಿಸಬೇಕು. ಈ ರೀತಿ ಮಾಡುವುದರಿಂದ ಮಣ್ಣಿಗೆ ವಿಪರೀತ ಹಸಿರಲೆಗೊಬ್ಬರ ಸೇರಿಸಿದಂತಾಗುತ್ತದೆ. ಅಲ್ಲದೆ ಸೆಣಬಿನ ಗಿಡದ ಬೇರು ಗಂಟುಗಳನ್ನು ಹೊಂದಿರುವ ಕಾರಣ ಗಾಳಿಯಲ್ಲಿನ ಸಾರಜನಕವೂ ಮಣ್ಣಿಗೆ ಸೇರುತ್ತದೆ. ಹಾಗಾಗಿ ಹೋದ ವರ್ಷದಿಂದ ನಾವು ಯಾವುದೇ ಗುಂಡಿಗೊಬ್ಬರ ಮತ್ತು ರಸಗೊಬ್ಬರ ಬಳಕೆ ಮಾಡಿಲ್ಲ. ಆದಾಗ್ಯೂ ಭತ್ತದ ಇಳುವರಿ ಕಡಿಮೆಯಾಗಿಲ್ಲ.

ವಿಶೇಷವೆಂದರೆ ಈ ವರ್ಷ ನಾವು ಮುಕ್ಕುಡಕದ (Laisosiphon Eriocephalus) ಸ್ಪ್ರೇ ಸಹ ಮಾಡಿಲ್ಲ. [ದಿನೇಶ್‌ರವರ ಮುಕ್ಕಡಕ ಪ್ರಯೋಗಕ್ಕೆ ಹಿತ್ತಲಗಿಡದ ಹಿಂದಿನ ಸಂಚಿಕೆ ನೋಡಿರಿ.ಸಂ||] ಬಿಳಿ ಚಿಟ್ಟೆ, ಹಾಗೂ ತೆನೆ ತಿಗಣೆಗಳ ಕಾಟ ಇತ್ತು. ಆಶ್ಚರ್ಯವೆಂದರೆ ಅದು ತನ್ನಿಂದ ತಾನೆ ಇಲ್ಲವಾಯಿತು. ಮತ್ತೊಂದು ಗಮನಿಸಬೇಕಾದ ಅಂಶವೆಂದರೆ, ಗೀಜುಗ ಎಂಬ ಹಕ್ಕಿ ಮುಂಚೆ ಅಷ್ಟಾಗಿ ಇರಲಿಲ್ಲ. ಕಳೆದ ವರ್ಷದಿಂದೀಚೆಗೆ ನಮ್ಮ ಗದ್ದೆಯ ಬಳಿಯೇ ಇವುಗಳ ಗೂಡುಗಳು ಸಾಕಷ್ಟಿವೆ. ಬಹುಶಃ ಇವುಗಳಿಂದಲೇ ಕೀಟ ಹತೋಟಿ ನಡೆಯುತ್ತಿರಬೇಕು. ಈಗ ನಮ್ಮ ಗದ್ದೆಯಲ್ಲಿ ಎರೆ ಹುಳುಗಳ ಸಂಖ್ಯೆ ಮುಂಚೆಗಿಂತ ತುಂಬಾ ಜಾಸ್ತಿಯಾಗಿದೆ. ಭತ್ತದಲ್ಲಿ ಜೊಳ್ಳಿನ ಅಂಶ ತುಂಬಾ ಕಮ್ಮಿಯಾಗಿದೆ. ನಮ್ಮ ಗದ್ದೆಯ ಮಣ್ಣು ಬಹಳಷ್ಟು ಮೃದುವಾಗುತ್ತಲಿದೆ. ನಾನು ಈಚೆಗೆ ಆದಷ್ಟೂ ಹಳೆಯ ತಳಿಗಳನ್ನು ಬಳಸಲು ಶುರುಮಾಡಿದ್ದೇನೆ. ಹಳೆಯ ತಳಿಯಾದ ರತ್ನಚೂಡಿ ಉತ್ತಮ ಫಸಲು ನೀಡುತ್ತಿದೆ. ಇದರ ಜೊತೆಯಲ್ಲೇ ಇಂಟಾನ್ ಸಹ ಏನೂ ತೊಂದರೆ ಇಲ್ಲದೆ ಚೆನ್ನಾಗಿ ಬರುತ್ತಿದೆ.

ದಿನೇಶ್ ಬಿ.ಎಸ್.
ಸುರು ಅಂಚೆ, ತೀರ್ಥಹಳ್ಳಿ ತಾ||
ಶಿವಮೊಗ್ಗ ಜಿಲ್ಲೆ - **577422**

ಕೊಡಗಿನ ದೇವರ ಕಾಡುಗಳ ಸಂರಕ್ಷಣೆಯಲ್ಲಿ ಸಂಘರ್ಷ ಹಾಗೂ ಪರಿಹಾರದ ಸಾಂಘಿಕ ಪ್ರಯತ್ನಗಳು

ಎಂ.ಜಿ. ನಾಗರಾಜ್, ಎಂ.ಜಿ. ಪದ್ಮ, ಎಂ.ಜಿ. ಚಂದ್ರಕಾಂತ್ ಮತ್ತು ಟಿ.ಎಸ್. ಪ್ರಕಾಶ್, ಅಹಮದಾಬಾದ್ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧ

ದೇವರ ಕಾಡು ಎಂಬುದು ಪರಂಪರೆಯಿಂದ, ಬಂದ ಪರಿಸರ ನಿರ್ವಹಣೆಯ ಮಾಧ್ಯಮ ಎನ್ನಬಹುದು. ದೇವರ ಕಾಡು ಒಂದು ಸಣ್ಣ ಅರಣ್ಯವಾಗಿದ್ದು ಆಯಾ ಗ್ರಾಮ ಅಥವಾ ಊರ ದೇವತೆಯ ಆರಾಧನೆಗೆ ಮೀಸಲಾದ ನೆಲೆಯನ್ನು ಹೊಂದಿರುತ್ತದೆ. ಈ ನೆಲೆಯಲ್ಲಿ ದೇವರ ಲಿಂಗ ಶಿಲೆಗಳನ್ನೋ, ಶೂಲಗಳನ್ನೋ, ಕರಿಯ ಬಳೆಗಳನ್ನೋ, ನಾಮದ ರೂಪಗಳನ್ನೋ ಇಟ್ಟು ದೇವರೆಂದು ಆರಾಧಿಸುವುದುಂಟು. ವಾರ್ಷಿಕವಾಗಿ ಈ ದೇಗುಲ ಅಥವಾ ದೇವ ನೆಲೆಯ ದೇವರುಗಳಿಗೆ ಪಬ್ಬದಾಚರಣೆ ನಡೆಸುತ್ತಾ, ಧಾರ್ಮಿಕ ಮೌಲ್ಯವನ್ನೂ ಗ್ರಾಮೀಣರು ಕಾಪಾಡಿಕೊಂಡು ಬಂದಿದ್ದಾರೆ.

ಕೊಡಗಿನಲ್ಲಿ ವಿಶೇಷತಃ ಇಂತಹ ವ್ಯವಸ್ಥೆಯು ಪ್ರಾಚೀನ ಕಾಲದಿಂದಲೂ ಕಂಡು ಬರುತ್ತದೆ. ಪ್ರತಿ ಗ್ರಾಮೀಣ ಸಮುದಾಯಗಳು ಸ್ವಯಂ ಕಟ್ಟುಪಾಡುಗಳನ್ನು ಹಾಕಿಕೊಂಡು ದೇವರ ಕಾಡುಗಳನ್ನು ಸಂರಕ್ಷಿಸುತ್ತ ಬಂದಿವೆ. ಈ ಪ್ರವೃತ್ತಿಯು ಕೊಡಗಿನ ದೇವರಕಾಡುಗಳಿಗೆ ಸಂರಕ್ಷಣಾರ್ಥ ಒಂದು "ಸಾಮಾಜಿಕ ಬೇಲಿ" ಯನ್ನು ಒದಗಿಸಿದೆ ಎನ್ನಬಹುದು. ಇದು ಪ್ರಜ್ಞಾಪೂರ್ವಕ ಪ್ರಯತ್ನವೂ ಅಹುದು.

ಮಡಿಕೇರಿ ಶಾಸನವು 5 ನೇ ಶತಮಾನದಲ್ಲಿ ಜಿನಾಲಯಕ್ಕೆ ಹೊಂದಿಕೊಂಡಿದ್ದ ಜಿನ ಕಾಡುಗಳ ರಕ್ಷಣೆಗೆ ನಿಯಮಗಳಿದ್ದ ಸೂಚನೆಗಳನ್ನು ನೀಡುತ್ತದೆ. ಕ್ರಿ.ಶ.888 ರ ಶಾಸನದಲ್ಲಿ "ಪೆಣ್ಣೆ ಕಡಂಗ" ಎಂಬ ಶಬ್ದವಿದೆ. ಇದು ಬನದ ಗದ್ದೆಯನ್ನು ಸೂಚಿಸಿ ಅದಕ್ಕೆ ಸುತ್ತ ಮಣ್ಣಿನ ದಿಬ್ಬದಂತಹ ಕಡಂಗದ ರಕ್ಷಣೆ ಇದ್ದ ಬಗ್ಗೆ ಹೇಳಿದೆ. ಗದ್ದೆಯ ಸುತ್ತ ಕಾಡು ಇರುವಂತಹ ವ್ಯವಸ್ಥೆಯಾಗಿ ಕೊಡಗಿನಲ್ಲಿ ಬನದ ಗದ್ದೆಗಳು ಕಾಣ ಬರುತ್ತವೆ. ಈ ಶಾಸನದ ಬನದ ಗದ್ದೆಯು ಜಿನಾಲಯಕ್ಕೆ ದಾನ ನೀಡಿದುದೇ ಆಗಿದೆ.

ಅದನ್ನು ರಕ್ಷಿಸುವ ಹೊಣೆ ಮಲೆಪರು, ಮಲೆ ಸಾಸಿರ್ವರು, ಮಯ್ಯಾಮರಿಗರು (ಗಿರಿ ವಾಸಿಗಳು, ಬೇಸಾಯಗಾರರು, ಕೃಷಿ ಆಳುಗಳು) ಅವರದಾಗಿದೆ ಎಂದು ಶಾಸನ ಸೂಚಿಸಿದೆ. ಕ್ರಿ.ಶ. 978ರ ಪೆಗ್ಗೂರು ಶಾಸನದಲ್ಲಿ ಹೀಗೆಯೇ ಜಿನಾಲಯಕ್ಕೆ ದಾನಕೊಟ್ಟ ಸಂಗತಿ ಹಾಗೂ ರಕ್ಷಣೆಯ ಸಂಗತಿ ಇದೆ. ಕ್ರಿ.ಶ.1278ರ ನಿಡುತ ಶಾಸನದಲ್ಲಿ ಸಿರಹದ ಮಲ್ಲಿಕಾರ್ಜುನ ದೇವರಿಗೆ ದಾನಕೊಟ್ಟ ದೇವರ ಕೆರೆ, ದೇವರ ಗದ್ದೆ, ದೇವರ ಹೂ ಕಾಡುಗಳ ಬಗ್ಗೆ ಸೂಚನೆ ಇದ್ದು ಅದನ್ನು ಕೆಡಿಸಬಾರದೆಂಬ ಸೂಚನೆಯೂ ಇದೆ. ಕ್ರಿ.ಶ.1371 ರ ಪಾಲೂರು ಶಾಸನದಲ್ಲಿ ಮಹಾದೇವರಿಗೆ ರಾಜನು ಹೂ ಕಾಡುಗಳನ್ನು ನೀಡಿರುವ ಬಗ್ಗೆ ಹೇಳಿದೆ. ಅವುಗಳನ್ನು ಕಾಪಾಡುವ ಹೊಣೆ ಹದಿನೆಂಟು ದೇಶದ ಶ್ರೀವೈಷ್ಣವರು, ವರ್ತಕರು ಹಾಗೂ ಬ್ರಾಹ್ಮಣರಿಗೂ ಇದೆ ಎಂದು ಹೇಳಿದೆ. ಹೀಗೆಯೇ 1810ರ ಪಾಡಿ ಶಾಸನವು ಇಗ್ಗು ತಪ್ಪ ದೇವರಿಗೆ ನೂರ ಹತ್ತು ಎಕರೆ ದೇವರ ಕಾಡು ಇದ್ದ ಬಗ್ಗೆ ಸೂಚಿಸುತ್ತದೆ. 1840-41ರ ಇರ್ಪು ರಾಮೇಶ್ವರ ಗುಡಿಯ ಶಾಸನದಲ್ಲಿ ಕಿಗ್ಗಟ್ಟು ಹತ್ತುನಾಡಿನ ರೈತರು ಆ ದೇವರಿಗೆ ನೀಡಿದ ದಾನದ ಪ್ರಸ್ತಾಪ ಮಾಡಿದೆ. ಅಂದರೆ ಇಂದು ಅದಕ್ಕಿರುವ ಸುಮಾರು ನೂರ ಮೂವತ್ತು ಎಕರೆ ದೇವರ ಕಾಡು ಹಾಗೆ ಗ್ರಾಮೀಣರು ಆಗಾಗ ಕೊಟ್ಟ ಅಥವಾ ಸೇರ್ಪಡೆಗೊಳಿಸಿದ ಕಾಡುಗಳೇ ಆಗಿರಬೇಕು. ಇದೇ ರೀತಿಯಲ್ಲಿ ಕೊಡಗಿನ ಮಠಗಳು, ಮಸೀದಿಗಳು, ಮಠ ಹಾಗೂ ಪಳ್ಳಿ ಕಾಡುಗಳನ್ನು ಹೊಂದಿವೆ. ಈ ಬಗೆಯಲ್ಲಿ ಕೊಡಗಿನಲ್ಲಿ ಹನ್ನೆರಡು ಬಗೆಯ ಕಾಡುಗಳನ್ನು ವಿಂಗಡಿಸಿರುವುದುಂಟು, ಅದರ ಪೈಕಿ ಪವಿತ್ರವನ, ಕಟ್ಟೆ, ಹೊಲೆದೇವರ ಕಾಡು, ಕೈಮಡ ಕಾಡು ಅಥವಾ ಕಾರೋಣ ಕಾಡು, ಸುಗ್ಗಿದೇವರ ಬನಗಳು, ವೀರರ ವನಗಳೂ ಸೇರಿವೆ.

ರಕ್ಷಣೆಯ ಮಾನಗಳು :

ಕೊಡಗಿನ ಇಂತಹ ಪರಂಪರೆಯ ದೇವರ ಕಾಡುಗಳ ನಿರ್ವಹಣೆಯಲ್ಲಿ ವ್ಯತ್ಯಾಸವಾಗದಿರಲೆಂದು ಅಥವಾ ಆಕ್ರಮಿತವಾಗದಿರಲೆಂದು ಅಂದಿನ ಜನ ಮಾನಿಸುತ್ತಿದ್ದ ಶಾಪದ ಬಗ್ಗೆ. **ಆ ಶಾಪಗಳ ಆಧುನಿಕ ರೂಪವೇ ಇಂದಿನ ದಂಡ, ಸಾಮಾಜಿಕ ಗ್ರಾಮೀಣರ ಬಹಿಷ್ಕಾರ, ಜೈಲು, ಹಾಗೂ ಮಾಡಿದ ಕೆಟ್ಟ ಕೆಲಸದ ಬಗೆಗಿನ ಸಮೂಹ ಮಾಧ್ಯಮದಲ್ಲಿನ ಪ್ರಸಾರವೇ ದೇವರ ಕಾಡುಗಳ ಕೆಡಿಸುವಿಕೆಗೆ ಒದಗುವ ಶಿಕ್ಷೆ ಎನ್ನಬಹುದು.**

ಶಾಸನಗಳ ರೀತ್ಯ ಶಾಪ ಶಿಕ್ಷೆಯ ಸಂಬಂಧವನ್ನೂ ನೇರವಾಗಿ ದೇವರ ಕಾಡುಗಳನ್ನು ಹೆಸರಿಸಿ ಹೇಳಿಲ್ಲ. ಆದರೆ ಕೊಟ್ಟ ದಾನದಲ್ಲಿ ಒಳಗೊಂಡ ಯಾವುದನ್ನೇ ಆಗಲಿ ಅತಿಕ್ರಮಿಸಲಿ, ಅಥವಾ ಆಕ್ರಮಿಸಲಿ ಅದಕ್ಕೆ ಒದಗುವ ಶಾಪಾಶಯವನ್ನು ಹೇಳಿದೆ. ಕೊಡಗಿನ ಸಂದರ್ಭದಲ್ಲಿ ಅದು ದೇವರ ಕಾಡುಗಳ ಆಕ್ರಮಣ ಅತಿಕ್ರಮಣಕ್ಕೂ ಸಂಬಂಧಗೊಂಡಿರುವುದೇ ಆಗಿದೆ. ಅವುಗಳಲ್ಲಿ ಕೆಲವು ಹೀಗಿವೆ.

ಸ್ವದತ್ತಾಂ ಪರದತ್ತಾಂ ವಾ ಯೋ ಹರೇತಂ ವಸುಂಧರಾಂ । ಷಷ್ಟಿಂ ವರ್ಷಂ ಸಹಸ್ರಾಣಿ ವಿಷ್ಟಾಯಾಂ ಜಾಯತೇ ॥

ತಾನಾಗಲಿ ಅಥವಾ ಇತರರಾಗಲಿ ಕೊಟ್ಟ ಭೂಮಿಯ ದಾನವನ್ನು ಯಾರೇ ಅಪಹರಿಸಿದರೂ ಅರವತ್ತು ಸಹಸ್ರ ವರ್ಷಗಳವರೆಗೆ ಕ್ರಿಮಿಯಾಗಿಯೆ ಹುಟ್ಟುತ್ತಾರೆ.

ಅಮೃ ಪಡಿಗೆ ಬಿಟ್ಟಂ ಧಂಮ್ಮವಾರು ಅಳಿಪಿಡದೆ ಗಂಗೆಯ ತಡಿಯಲಿ ಕವಿಲೆಯ ಕೊಂದ ಪಾಪ (ನಿಡುತ ಶಾಸನ)

ದೇವರ ಅಮೃತಪಡಿಗೆಂದು ಕೊಟ್ಟ ದಾನಧರ್ಮವನ್ನು ಕೆಡಿಸಿದರೆ ಗಂಗಾತೀರದಲ್ಲಿ ಹಸುವನ್ನು ಕೊಂದ ಪಾಪ ಒದಗುತ್ತದೆ.

ಕಾವರ್ನ್ನಾಲ್ವಮ್ಮಲೆಪರು, ಮಯೂರ್ಬ್ಬರು ಮಯ್ಯಾಮರಿಗರು ಶ್ರೀ ಪುರುಷ ಮಹಾರಾಜರ ದತ್ತಿಯನಾವೊನೊರ್ಬ್ಬನಳಿಂದೊ। ಬಾಣ ರಾಸಿಯಂ ಸಾಸಿರ್ಬ್ಬ ಬ್ರಾಹ್ಮಣರುಂ ಸಾಸಿರ ಕವಿಲೆಯು ಮನಳಿದ ಪಞ್ಚ ಮಹಾ ಪಾತಳನಕ್ಕುಂ ॥

ಇದನಾರೊರ್ಬ್ಬರ್ಕಾದವರ್ಗೆ ಪಿರಿದು ಪುಣ್ಯಂ
(ಪೆಗ್ಗೂರು ಶಾಸನ)

ದಾನವನ್ನು ಕಾಯಬೇಕಾದವರು ಗಿರಿವಾಸಿಗಳು, ಜನೂರ್ವರು, ಸೇವಕರು. ಶ್ರೀ ಪುರುಷ ಮಹಾರಾಜರು ಜಿನಾಲಯಕ್ಕೆ ಕೊಟ್ಟ ದತ್ತಿಯನ್ನು ಯಾವನೇ ಕೆಡಿಸಿದರೂ, ವಾರಣಾಸಿಯಲ್ಲಿ ಸಾವಿರ ಬ್ರಾಹ್ಮಣರನ್ನು, ಸಾವಿರ ಹಸುಗಳನ್ನು ಕೊಂದ ಪಂಚ ಮಹಾಪಾತಕ ಒದಗುತ್ತದೆ. ಇದನ್ನು ರಕ್ಷಿಸಿದವರಿಗೆ ಹಿರಿಯ ದಾನ ಪುಣ್ಯ ಒದಗುತ್ತದೆ.

ವಸ್ತು ಸ್ಥಿತಿ :

ಇಂತೆಲ್ಲ ಭಾವನೆಗಳ ಹಿನ್ನೆಲೆಯಲ್ಲಿ ಶತಶತಮಾನಗಳಿಂದ ಕೊಡಗಿನಲ್ಲಿ ಉಳಿದುಕೊಂಡು ಬಂದ ದೇವರಕಾಡುಗಳ ನಿರ್ವಹಣಾ ವ್ಯವಸ್ಥೆಯು ಉತ್ತಮವಾಗಿತ್ತು. ಅದು ಇಂದಿಗೂ 'ಅಸ್ತಿತ್ವ ಮೌಲ್ಯ' ಅಥವಾ (Survival Value) 'ಉಳಿಪಿನ ಮೌಲ್ಯ' ಹೊಂದಿದೆ ದಿಟ. ಜೊತೆಗೆ ಕಾಲ ಸರಿದ ಸಂದರ್ಭದಲ್ಲಿ ಏಲಕ್ಕಿ ಹಾಗೂ ಕಾಫಿ ಬೆಳೆಗಳಿಗೆ ಒದಗಿದ ಆಕರ್ಷಕ ಬೆಲೆಯು ಭೂ ಮಾಲೀಕರಲ್ಲಿ ಮಹತ್ವಾಕಾಂಕ್ಷೆಗಳನ್ನು ಪುಟಿದೇಳಿಸಿತು. ಅಂದರೆ ಪ್ರಬಲ ಮಾರುಕಟ್ಟೆಯ ವ್ಯವಹಾರಿಕ ಶಕ್ತಿಯು ಈ ಪ್ರಾಚೀನ ದೇವರ ಕಾಡುಗಳ ವ್ಯವಸ್ಥೆಯ ಅಸ್ತಿತ್ವದ ಮೌಲ್ಯಕ್ಕೆ ಮುಖಾಮುಖಿ ಆಯಿತು. ಇದರಿಂದ ಪರಿಸರ ಸಂರಕ್ಷಣೆಯ ಪ್ರಾಚೀನ ವ್ಯವಸ್ಥೆ ಹಾಗೂ ಮಾರುಕಟ್ಟೆಯ ಆಕರ್ಷಕ ಆರ್ಥಿಕ ಶಕ್ತಿಯ ನಡುವೆ ಸಂಘರ್ಷ ಬೆಳೆದುದು ಕಾಣುತ್ತದೆ.

ಕೇರಳದಲ್ಲಿಯೂ ಕೃಷಿಯ ವ್ಯಾಪಾರೀಕರಣ ಬೆಳೆದಂತೆ ಪವಿತ್ರ ಕಾಡುಗಳು, ಸಂಖ್ಯೆ ಹಾಗೂ ವಿಸ್ತಾರದಲ್ಲಿ ಕ್ಷೀಣಿಸಿದುವು. ಕೊಡಗಿನಲ್ಲಿಯೂ ಹೀಗಾಗಿ ದೇವರ ಕಾಡುಗಳನ್ನು ಅನೇಕ ಕಡೆ ಆಕ್ರಮಿಸುವ ಪ್ರವೃತ್ತಿ ಬೆಳೆದುದು ಕಾಣುತ್ತದೆ.

ದೇವರ ಕಾಡುಗಳ ಸರ್ವೆಯು ಸಾಧಾರಣ ರೀತಿಯಲ್ಲಿ 2ನೆಯ ಲಿಂಗರಾಜ ಒಡೆಯನ ಕಾಲದಲ್ಲಿ ಅಂದರೆ ಕಿ.ಶ.1811 ಮತ್ತು 1817 ರಲ್ಲಿ ಮೊದಲಾಗಿ ನಡೆಯಿತು. ಕ್ರಿ.ಶ. 1863 ರಲ್ಲಿ ಮದರಾಸು ಟೋಪೋಗ್ರಾಫಿಕಲ್ ಸರ್ವೆ ಮಂಡಲಿಯು ಸರ್ವೆ ಮಾಡಿತು. 1871 ಮತ್ತು 1881 ರ ಲಿಂಡ್ಸೆಯ ಪ್ರಪ್ರಥಮ ಸೆನ್ಸಸ್ ವರದಿ ಹಾಗೂ ಮಾರತ್‌ನ ಸೆನ್ಸಸ್ ವರದಿಗಳನ್ನು ಗಮನಿಸಿದರೆ ಪ್ರತಿಗ್ರಾಮದಲ್ಲಿ ಕನಿಷ್ಠ ಒಂದು ದೇವರ ಕಾಡು ಇರುವ ಕೊಡಗಿನ ಪರಂಪರಾಗತ ಪದ್ಧತಿಯಂತೆ 520 ದೇವರ ಕಾಡುಗಳು, 520 ಗ್ರಾಮಗಳಿದ್ದವೆಂದಾಗುತ್ತದೆ. ಇದೂ ಸ್ಥೂಲ ಚಿತ್ರವೇ ಆಗಿತ್ತು. .ಆ ದೃಷ್ಟಿಯಿಂದ ಅಂತಿಮವಲ್ಲದಿದ್ದರೂ ಹೆಚ್ಚು ಸಮರ್ಪಕವೆನ್ನಬಹುದಾದ ಮಾಕ್ಲೆಜಾನನ 1900 ರ ಸುಮಾರಿನ ದೇವರ ಕಾಡುಗಳ ಪಟ್ಟಿಯ ರೀತ್ಯಾ ಆ ಸಂಖ್ಯೆ 755 ಆಗಿತ್ತು. ಸದ್ಯಕ್ಕೆ ಸರ್ವೆ ಆಗಿರುವ ದೇವರ ಕಾಡುಗಳ ಸಂಖ್ಯೆಗೆ ಹೋಲಿಸಿದರೆ ದೇವರ ಕಾಡುಗಳು ಆಕ್ರಮಿತವಾಗಿ ಸಂಖ್ಯೆ ಕ್ಷೀಣವಾಗಿರುವುದು ತಾಲೂಕುವಾರು ಗಮನಿಸಿದರೆ ತಿಳಿಯುತ್ತದೆ. ಇಂದಿಗೆ ಅದರ ಸಂಖ್ಯೆ 346.

1990 ರ ಮೊದಲು

ತಾಲೂಕುಗಳು	ಸಂಖ್ಯೆ	ವಿಸ್ತೀರ್ಣ (ಎಕರೆ)
ಸೋಮವಾರಪೇಟೆ	143	1013
ಮಡಿಕೇರಿ	230	6256
ವೀರರಾಜೇಂದ್ರ ಪೇಟೆ	382	3074
ಒಟ್ಟು	755	10343

1996 ರಲ್ಲಿ

ತಾಲೂಕುಗಳು	ಸಂಖ್ಯೆ	ವಿಸ್ತೀರ್ಣ (ಎಕರೆ)
ಸೋಮವಾರಪೇಟೆ	138	619
ಮಡಿಕೇರಿ	60	1418
ವೀರರಾಜೇಂದ್ರ ಪೇಟೆ	148	2147
ಒಟ್ಟು	346	4184

ಅತ್ಯಂತ ಹೆಚ್ಚಿನ ಆಕ್ರಮಣ ಮಡಿಕೇರಿ ತಾಲೂಕಿನಲ್ಲಿ ಆಗಿರುವುದಕ್ಕೆ ಕಾರಣ ಅದು ಕೊಡಗಿನ ರಾಜಧಾನಿಯಾಗಿ ತನ್ನ ತಾಲೂಕು ಸೇರಿದಂತೆ ವಲಸೆಗಾರರಿಗೆ ಹೆಚ್ಚು ತೆರೆದುಕೊಂಡು ಆಸರೆ ನೀಡುವುದಾಗಿರಬೇಕು. ವಲಸೆಗಾರರಿಗೆ, ಸ್ಥಳೀಯರಲ್ಲಿರುವ ದೇವರ ಕಾಡುಗಳ ಬಗೆಗಿನ ಪರಂಪರಾಗತ ಮೌಲ್ಯವು ಅದೇ ಪ್ರಮಾಣದಲ್ಲಿ ಇರುವುದೆನ್ನಲಾಗದು. 1910ರ ರೆವೆನ್ಯೂ ಸೆಟಲ್‌ಮೆಂಟ ಆಕ್ಟಿನ ರೀತ್ಯಾ, ದೇವರ ಕಾಡಿನಲ್ಲಿ ಮೇವು, ನೀರು ಹಾದಿ, ಸಣ್ಣ ರೆಂಬೆಗಳ ಕಡಿತಕ್ಕೆ ಅವಕಾಶ ನೀಡಿದ್ದರಿಂದ ದೇವರ ಕಾಡಿನ ಅತಿಕ್ರಮಣದ ಸಾಧ್ಯತೆಗೆ ಒಂದು ಕಾರಣವೆನಿಸುತ್ತದೆ.

ಮೌಲ್ಯ ದೃಷ್ಟಿ

ಕೊಡಗಿನ ಜನತೆಯೇನೋ ದೇವರ ಕಾಡುಗಳ ಬಗ್ಗೆ ಸ್ವಪ್ರೇರಣೆಯಿಂದ ಸ್ವಯಿಚ್ಛಿತವಾಗಿ ಸಂರಕ್ಷಣೆಯ ಸಂದರ್ಭವಾಗಿ ಕಟ್ಟುಗಳನ್ನು ಹಾಕಿಕೊಂಡು ಧಾರ್ಮಿಕ ಹಾಗು ಪರಿಸರಪ್ರೇಮದ ಪ್ರವೃತ್ತಿಯು ಕಾರಣ ತಲೆಮಾರುಗಳಿಂದ ಅದನ್ನು ರಕ್ಷಿಸಿಕೊಂಡು ಬಂದಿದೆ ದಿಟ. ಅದರಿಂದಾಗಿ ಆ ದೇವರ ಕಾಡುಗಳ 'ಉಳಿಸಿಕೊಳ್ಳುವ ಮೌಲ್ಯ ಅಥವಾ ಉಳಿವಿನ ಮೌಲ್ಯ(Existence Value)' ಉಳಿದು ಬರಲೇನೋ ಕಾರಣವಾಗಿದೆ. ಅದೊಂದು ರೀತಿ ಸ್ವಯೇಚ್ಛಿತ ನಿಷೇಧದ ಸಾಮಾಜಿಕ ಬೇಲಿಯೂ ಆಗಿದೆ. ಧಾರ್ಮಿಕ ಹಬ್ಬಗಳು ದೇವರ ಕಾಡುಗಳೊಡನೆ ಸಮ್ಮಿಳನಗೊಂಡಿರುವ ಕಾರಣ, ಧಾರ್ಮಿಕ ನಂಬಿಕೆ ಅಳಿದರೆ ದೇವರ ಕಾಡುಗಳ ಅಸ್ತಿತ್ವ ಮೌಲ್ಯವು ಅಳಿದು ಅವೂ ಅಳಿಯುತ್ತವೆ ಎನ್ನುವವರಿದ್ದಾರೆ. ಆದರೆ ಕೊಡಗಿನಲ್ಲಿ ಶೈಕ್ಷಣಿಕ ಮಟ್ಟ ಅತ್ಯಂತ ಹೆಚ್ಚಿನದಿದೆ. ಇಂತಲ್ಲಿ ಕೇವಲ ಧಾರ್ಮಿಕ ಮೂಢ ನಂಬಿಕೆಯನ್ನು ಆರೋಪಿಸುವುದಕ್ಕಿಂತ, ಅವರಲ್ಲಿ ಪರಿಸರನಾಶದ ಪರಿಣಾಮದ ಅರಿವು ಹಾಗು ಸಾಮಾಜಿಕ ಎಚ್ಚರವೆ ದೇವರ ಕಾಡುಗಳ ಬಗ್ಗೆ ರಕ್ಷಣಾ ದೃಷ್ಟಿ ಬೆಳೆಸಿದೆ ಎಂಬುದು ಸೂಕ್ತ. ಮೊದಲಿನ ಕಾಲಕ್ಕೆ ಧಾರ್ಮಿಕ ನೆಲೆಯಲ್ಲಿ, ಹಬ್ಬದಾಚರಣೆಗಳು ಅಂದಿನ ಮೌಲ್ಯಕ್ಕನುಗುಣವಾಗಿ ಬೆಸೆದು ದೇವರ ಕಾಡುಗಳು ನಿರ್ವಹಣೆಯಾದವು. ಅದರ ಜೊತೆಗೆ ಸಾಮಾಜಿಕ ಆಯಾಮಗಳು ಸೇರಿಕೊಂಡು ಕೊಡಗಿನಲ್ಲಿ ಬೆಳೆದುದೂ ಸತ್ಯ. ಒಂದು ರೀತಿಯಲ್ಲಿ ಅತ್ಯಂತ ಆಧುನಿಕ ಪ್ರಜ್ಞೆಯ ಹೆಸರಿನಲ್ಲೂ ಉಳಿಸಿಕೊಂಡು ಬರಲಾಗದ ಅರಣ್ಯಗಳು ಕ್ಷೀಣಿಸಿರುವಲ್ಲಿ ಆ ಮಟ್ಟಿಗೆ

ಧರ್ಮ ಸಾಮಾಜಿಕ ಮೌಲ್ಯಗಳು ದೇವರ ಕಾಡುಗಳ 'ಅಸ್ತಿತ್ವ ಮೌಲ್ಯ'ವನ್ನು ಉಳಿಸಿಕೊಂಡು ಬಂದುವು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಕೇವಲ ಗರಿಷ್ಠ ಲಾಭದ ಆರ್ಥಿಕದೃಷ್ಟಿ ಒಂದೆಡೆ, ಸಾಮಾಜಿಕ ಹಾಗು ನೈತಿಕ ಒಲವಿನ ದೃಷ್ಟಿ ಇನ್ನೊಂದೆಡೆ, ಇವುಗಳ ನಡುವೆ ಸಂಘರ್ಷದ ಕಾರಣ ದೇವರ ಕಾಡುಗಳ ಸಂರಕ್ಷಣಾ ಪ್ರಯತ್ನಗಳು ತೆಳುವಾದಂತೆ ಕಾಣುತ್ತಿರಬಹುದು.

ದೇವರ ಕಾಡು ಆಕ್ರಮಣವಾದ ಸಂದರ್ಭದ ಬಗ್ಗೆ ದೂರು ಬಂದಾಗ ಸರ್ಕಾರವು ಅದನ್ನು ಸರ್ವೆಮಾಡಿ ಆಕ್ರಮಿತವಾಗಿದ್ದ ಸಂದರ್ಭದಲ್ಲಿ ಪುನಃ ವಶಮಾಡಿಕೊಂಡದ್ದು ಇದೆ. ಅಲ್ಲದೆ ಕಾಫಿ ಬೆಳೆ ಬೆಳೆದು ದೇವರ ಕಾಡನ್ನು ಆಕ್ರಮಿಸಿದ್ದರೆ ಅಂತಹ ಪ್ರಕರಣಗಳನ್ನು ರೆವೆನ್ಯೂ ಇಲಾಖೆಯು ಕಂಡು ಹಿಡಿಯುವ ಹೊಣೆಯನ್ನು ಹೊಂದಿದೆ. ಆದರೆ ತನ್ನ ಕಾರ್ಯ ಬಾಹುಳ್ಯದ ಒತ್ತಡದಿಂದಾಗಿ ಆ ದಿಸೆಯಲ್ಲಿ ಅದು ಪೂರ್ಣವಾಗಿ ತೊಡಗಿಕೊಳ್ಳಲು ಕಾಲಾವಕಾಶ ಬೇಕಿದೆ. ಇಂತಹ ಆಕ್ರಮಿತಗೊಂಡ ದೇವರ ಕಾಡಿನ ಕಾಫಿ ಬೆಳೆಯ ಸಂದರ್ಭವನ್ನು ಸಕ್ರಮ ಗೊಳಿಸುವುದೂ ಇಲ್ಲ. ಈ ಎಲ್ಲ ಸಂದರ್ಭಗಳಲ್ಲಿ ಕೊಡಗಿನ ಗ್ರಾಮೀಣ ಸಮುದಾಯವು ದೇವರ ಕಾಡುಗಳನ್ನು ಉಳಿಸುವಲ್ಲಿ ಇಂದು ಮಾಡುತ್ತಿರುವ ಪ್ರಯತ್ನಗಳನ್ನು ಗಮನಿಸಬಹುದು.

ಗ್ರಾಮೀಣ ಪ್ರಬಲ ಸಂರಕ್ಷಣಾ ಪ್ರಯತ್ನಗಳು

ಸೋಮವಾರ ಪೇಟೆ ತಾಲ್ಲೂಕಿನ ತಲ್‌ತರೆಶೆಟ್ಟಿ, ಹಳ್ಳಿಯಲ್ಲಿ ಸುಗ್ಗಿಯ ದೇವರ ಕಾಡು 99 ಎಕರೆ 98 ಸೆಂಟುಗಳಷ್ಟಿದೆ. ಈ ದೇವರ ಕಾಡಿನಲ್ಲಿ ನಡೆಯುವ ಸುಗ್ಗಿ ದೇವರ ಹಬ್ಬವನ್ನು ಶಾಂತಳ್ಳಿ, ಹರಗ, ಬಾಚಳ್ಳಿ, ಹಾಗೂ ತಲ್‌ತರೆಶೆಟ್ಟಿ ಹಳ್ಳಿಯವರು ಸೇರಿ ಆಚರಿಸುತ್ತಾರೆ. ಈ ದೇವರ ಕಾಡಿನ 23 ಎಕರೆಯಷ್ಟು ಜಾಗವನ್ನು ಈ ಗ್ರಾಮದ ಹತ್ತು ರೈತರುಗಳು ಏಲಕ್ಕಿ ಮತ್ತು ಕಾಫಿ ಬೆಳೆಯಲು 20 ವರುಷಗಳ ಅವಧಿಯಲ್ಲಿ ಆಕ್ರಮಿಸಿಕೊಳ್ಳುತ್ತಾ ಬಂದರು. ಅವರ ತೋಟಗಳಿಗೆ ಈ ದೇವರ ಕಾಡಿನ ಜಾಗವು ಹೊಂದಿ ಕೊಂಡಂತೆ ಇದ್ದುದರಿಂದ ಅತಿಕ್ರಮಿಸಲು ಅವರಿಗೆ ಸುಲಭವಾಗಿತ್ತು. ಮೊದಲು ಬೇಲಿ ಕಡ್ಡಿಗಳನ್ನು ನಿಲ್ಲಿಸುವುದರ ಮೂಲಕ ನಂತರ ತಂತಿಬೇಲಿಯನ್ನು ಕ್ರಮೇಣ ಹಾಕಿಕೊಳ್ಳುವುದರ ಮೂಲಕ ಅತಿಕ್ರಮಿತ ಭಾಗವನ್ನು ತಮ್ಮದನ್ನಾಗಿ ಮಾಡಿಕೊಂಡಿದ್ದರು. ಆಗ ಶಾಂತಳ್ಳಿಯ ಉಳಿದ ಗ್ರಾಮೀಣರು ಅತಿಕ್ರಮಣಕಾರರನ್ನು ದೇವರ ಕಾಡಿನ ಭಾಗವನ್ನು ತೆರವು ಮಾಡಲು ವಿನಂತಿಸಿದ್ದರು. ಆದರೆ ಅದು ವ್ಯರ್ಥವಾಯಿತು. ಆಗ ಶಾಂತಳ್ಳಿ, ಹರಗ, ಬಾಚಳ್ಳಿ, ತಲತೆರೆಗ್ರಾಮದವರೆಲ್ಲ ಸೇರಿ ಅರಣ್ಯ ಇಲಾಖೆಯ ಗಮನಕ್ಕೆ ಈ ಸುಗ್ಗಿ ದೇವರ ಕಾಡಿನ ಅಕ್ರಮ ಅತಿಕ್ರಮಣವನ್ನು ತಂದರು. ಆಗಲೂ ಪ್ರಯೋಜನವಾಗಲಿಲ್ಲ. ಆಗ ಸುಗ್ಗಿ ದೇವರ ಸಮಿತಿಯು ಅತಿಕ್ರಮಿತ ಜಾಗದಲ್ಲಿ ಹಾಕಿದ್ದ ತಂತಿಬೇಲಿಯ ಕೆಲವು ಭಾಗವನ್ನು ತೆಗೆದು ಹಾಕುವುದರ ಮೂಲಕ ಪ್ರತಿಭಟಿಸಿತು. ಇದರಿಂದ ಅತಿಕ್ರಮಣಕಾರರು ನ್ಯಾಯಾಲಯದಲ್ಲಿ ದಾವೆ ಹೂಡಿದರು. ಅದರ ಫಲವಾಗಿ ಜನರು ಬಂಧಿತರಾದರು. ಜಿಲ್ಲಾಧಿಕಾರಿಗಳ ಗಮನಕ್ಕೂ ಹಾಗೂ ಉನ್ನತಾಧಿಕಾರಿಗಳ ಗಮನಕ್ಕೂ ಈ ಅತಿಕ್ರಮಣದ ವಿಷಯವು ಹೋದಾಗ ತೆರವು ಮಾಡುವ ಆಜ್ಞಾಪತ್ರವನ್ನು ನೀಡಲಾಯಿತು. ಆದರೆ ಹೇಗೋ ಕರ್ನಾಟಕ ಅಪಿಲೇಟ್ ಟ್ರಿಬ್ಯುನಲ್‌ನಿಂದ ಅತಿಕ್ರಮಣಕಾರರು ಇದಕ್ಕೆ ತಡೆಯಾಜ್ಞೆ ತರುವಲ್ಲಿ ಸಫಲರಾದರು.

ಈ ನಂತರ ಮುಂದೆ ಯಾವ ತೆರವು ಮಾಡಿಸುವ ಕಾರ್ಯವೂ ನಡೆಯದಿದ್ದುದರಿಂದ ಗ್ರಾಮದ ಸುಮಾರು 120 ಜನರು ತಂತಿ ಬೇಲಿಯೆಲ್ಲವನ್ನು ತೆಗೆದು ಹಾಕಿದರು. ಹಾಗೂ ಅದರೊಳಗಿದ್ದ ಬೆಳೆಯನ್ನು ಕಿತ್ತು ಹಾಕಿ ತಮ್ಮ ತೀವ್ರ ಪ್ರತಿಭಟನೆಯನ್ನು ತೋರಿದರು. ಆಗ ಪೋಲೀಸರಿಂದ ಬಂಧಿತರಾಗಿ ನ್ಯಾಯಾಲಯದ ಮುಂದೆ ನಿಲ್ಲಬೇಕಾಯಿತು. ಈ ಹೊತ್ತಿಗೆ ಇಡೀ ಗ್ರಾಮ ಹಾಗೂ ಕೊಡಗು ಏಕೀಕರಣ ರಂಗವು ಬಂಧಿತರಿಗೆ ಬೆಂಬಲವಾಗಿ ನಿಂತವು. ಇದರ ಜೊತೆಗೆ ಗ್ರಾಮೀಣರು ಅತಿಕ್ರಮಣಕಾರರ ಮನೆಯಲ್ಲಿ ನಡೆಯುವ ಸಾಮಾಜಿಕ ಸಮಾರಂಭಗಳಾದ ಹುಟ್ಟು, ಮದುವೆ ಇತ್ಯಾದಿಗಳಲ್ಲಿ ಗ್ರಾಮದ ಇತರರಾರೂ ಭಾಗವಹಿಸದೆ ಬಹಿಷ್ಕಾರ ಹಾಕಿದರು. ನಂತರ ಪೋಲೀಸರ ಮಧ್ಯಸ್ಥಿಕೆಯಿಂದ ಗ್ರಾಮೀಣರು ಆಕ್ರಮಣಕಾರರ ತಪ್ಪಿಗೆ ನಿಗದಿ ಮಾಡಿದ್ದ 12,000 ರೂಗಳ ದಂಡಕ್ಕೆ ಬದಲಾಗಿ 5,000 1,000 ಹೀಗೆ ಆಕ್ರಮಿತ ಭಾಗದ ಪ್ರಮಾಣಕ್ಕೆ ಅನುಗುಣವಾಗಿ ದಂಡ ವಿಧಿಸಲಾಯಿತು. ಈ ಪ್ರಯತ್ನದಲ್ಲಿ ಹತ್ತು ಜನರ ಪೈಕಿ 9 ಜನ ಆಕ್ರಮಣಕಾರರು ದಂಡವನ್ನು ನೀಡಿ ಆಕ್ರಮಣವನ್ನು ತೆರವು ಮಾಡಿಸುವಷ್ಟು ಮಟ್ಟಿಗೆ ಗ್ರಾಮೀಣರು ಸಫಲರಾದರು. ಆದರೆ ಉಳಿದ ಒಬ್ಬರಿಗೆ ಇರುವ ರಾಜಕೀಯ ಬೆಂಬಲ ಹಾಗೂ ಆರ್ಥಿಕ ಶಕ್ತಿಯಿಂದಾಗಿ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿರುವುದರಿಂದಾಗಿ ಸುಮಾರು 4 ಎಕರೆಯಷ್ಟು ಆಕ್ರಮಿತ ದೇವರ ಕಾಡನ್ನು ತೆರವು ಮಾಡಿಸಲಾಗಿಲ್ಲ. ಆದರೆ ಆತ ಮತ್ತೆ ಬೇಲಿಯನ್ನು ಆಕ್ರಮಿತ ಭಾಗಕ್ಕೆ ಗ್ರಾಮೀಣರ ಪ್ರತಿಭಟನೆಯಿಂದಾಗಿ ಹಾಕಿಕೊಂಡೂ ಇಲ್ಲ. ಗ್ರಾಮೀಣರ ಈ ಎಲ್ಲ ಪ್ರಯತ್ನಗಳು ಅರಣ್ಯ ಇಲಾಖೆಯ ಗಮನಕ್ಕೆ ಹೋಗಿ ಆ ದೇವರ ಕಾಡನ್ನು ಸರ್ಕಾರದಿಂದ ಸರ್ವೆ ಮಾಡಿಸಿ ದೇವರ ಕಾಡಿನ ಸುತ್ತ ಹಳ್ಳ ತೋಡಿಸಿ ಇಲಾಖೆಯಿಂದ ಬೇಲಿ ಹಾಕಿಸುವಷ್ಟು ಮಟ್ಟಿಗೆ ಗ್ರಾಮೀಣರು ಹಾಗೂ ಕೊಡಗು ಏಕೀಕರಣ ರಂಗ ಯಶಸ್ವಿಯಾಗಿವೆ. ಶಾಂತಳ್ಳಿ ಗ್ರಾಮದ ಜನರ ಈ ಪ್ರಯತ್ನವು ನೆರೆಯ ನಗರ ಹಳ್ಳಿಯ ಜನತೆಯಲ್ಲಿ ದೇವರ ಕಾಡಿನ ಆಕ್ರಮಣವನ್ನು ತೆರವು ಮಾಡಿಸುವುದಕ್ಕೆ ಪ್ರೇರಣೆಯಾಗಿ ಪ್ರಯತ್ನಗಳು ನಡೆಯುತ್ತಿವೆ. ಅರವತ್ತೊಕ್ಕಲು ಗ್ರಾಮದಲ್ಲಿ ಕೇರಳದವರಿಂದ ಆಕ್ರಮಿತವಾಗಿದ್ದ ಸುಮಾರು 20 ಎಕರೆಯಷ್ಟು ಅಯ್ಯಪ್ಪದೇವರ ಕಾಡನ್ನು ಕೊಡಗು ಏಕೀಕರಣ ರಂಗದ ಪ್ರಯತ್ನದಿಂದ ತೆರವಾಗಿದೆ ಎಂದು ತಿಳಿದು ಬಂದಿದೆ.

ದೇಗುಲ ನಿರ್ವಹಣೆಗಾಗಿ ದೇವರ ಕಾಡಿನ ಬಳಕೆ

ಗರ್ವಾಲೆಯ ಬಳಿಯ ಶಿರಂಗಳ್ಳಿಯಲ್ಲಿ 8 ಎಕರೆಯಷ್ಟು ಈಶ್ವರ ದೇವರ ಕಾಡಿದೆ. ಇಲ್ಲಿ

ಏಲಕ್ಕಿ ತೋಟವನ್ನು ಕಾಡಿನ ಸ್ವಲ್ಪ ಭಾಗದಲ್ಲಿ ಬೆಳೆದು ಅದರ ಉತ್ಪನ್ನವನ್ನು ದೇಗುಲ ನಿರ್ವಹಣೆಗಾಗಿ ಮೀಸಲಿರಿಸಲಾಗಿದೆ. ಕಕ್ಕಬೆ ಗ್ರಾಮದ ಬಳಿ ಯುವಕ ಪಾಡಿಯ ನೆಟ್ಟು ಮಾಮ ಭಗವತಿಯ ದೇವರ ಕಾಡಿನ ಸ್ವಲ್ಪ ಭಾಗದಲ್ಲಿ ಕಾಫಿಬೆಳೆ ಬೆಳೆದು ಉತ್ಪನ್ನವನ್ನು ದೇವಾಚಾರಗಳಿಗೆ ಮೀಸಲಿರಿಸಿದ್ದಾರೆ. ಕಂಡಂಗಾಲದ ಬಳಿಯ ಪಾರಣಮಾನಿ ಕುದುರೆ ಹಬ್ಬಕ್ಕೆ ಹಾಗೂ ರುದ್ರಗುಪ್ಪೆಯಮ್ಮ ದೇವತೆಗಳ ಧ್ವಜ ಸ್ತಂಭಕ್ಕೆ ಅಗತ್ಯವಾದ ಬೊಂಬನ್ನು ಬಾಡಗದ ದೇವರ ಕಾಡಿನಿಂದ ದೇವರಿಗೆಂದು ಮಾತ್ರ ಬಳಸುತ್ತಾರೆ. ಅರಮೇರಿಯ ಜಾನ್‌ಕಲ್ ಅಯ್ಯಪ್ಪ ದೇವರ ಕಾಡಿನಲ್ಲಿ ಜೇನುಸಾಕಾಣಿಕೆ ಮಾಡಿ ದೇವರ ಗುಡಿ ನಿರ್ವಹಣೆಗೆ ಉತ್ಪನ್ನವನ್ನು ಮೀಸಲಿರಿಸಿದ್ದಾರೆ. ಕೊಟ್ಟಗೇರಿಯ ದೇವರ ಕಾಡಿನಲ್ಲೂ ಭಾಗಶಃ ಬೆಳೆದ ಬೆಳೆಯ ಉತ್ಪನ್ನಗಳು ಅಲ್ಲಿನ ದೇಗುಲಗಳ ನಿರ್ವಹಣೆಗೆ ಮೀಸಲಾಗಿದೆ. ಈ ಯಾವ ದೇವರ ಕಾಡುಗಳನ್ನು ಯಾರೂ (ವೈಯಕ್ತಿಕ ಬಳಕೆಗೆ) ಅತಿಕ್ರಮಿಸಲು ಅವಕಾಶವಿಲ್ಲ.

ಭೂ ಸಂರಕ್ಷಣ ಮಾಧ್ಯಮವಾಗಿ ದೇವರ ಕಾಡಿನ ನಿರ್ವಹಣೆ

ಗರ್ವಾಲೆಯ ಬಳಿಯ ಕೋಟೆ ಬೆಟ್ಟದ ತಪ್ಪಲಿನಲ್ಲಿ ಈಶ್ವರ ದೇವರಿಗೆ ಹೊಸದಾಗಿ ದೇವರ ಕಾಡನ್ನು ಅಲ್ಲಿಯ ಗ್ರಾಮೀಣರು ಭೂ ಸಂರಕ್ಷಣಾ ದೃಷ್ಟಿಯಿಂದ ಬೆಳೆಸಿದ್ದಾರೆ. ಕುಟ್ಟದ ಕರಿಂಗಾಳಿ ದೇವರ ಕಾಡಿನ ಆವರಣದಲ್ಲಿ ಹರಕೆಯ ರೂಪದಲ್ಲಿ ಗ್ರಾಮೀಣರು ವಾರ್ಷಿಕವಾಗಿ ಹೊಸ ಗಿಡಗಳನ್ನು ನೆಟ್ಟು ಪೋಷಿಸುತ್ತಾರೆ.

ದೇವರ ಕಾಡುಗಳ ಸೇರ್ಪಡೆಗೆ ಗ್ರಾಮೀಣರ ಕೊಡುಗೆ

ಗರ್ವಾಲೆಯಲ್ಲಿ ರೈತರುಗಳಿಗೆ ದೇವರ ಕಾಡಿಗೆ ಅಂಟಿದಂತೆ ಅವರ ಬಾಣೆ ಕಾಡುಗಳಿವೆ. ಅಲ್ಲದೆ ಅವರ ಗದ್ದೆಗಳ ಬದಿಗಿರುವ ಕಾಡುಗಳನ್ನು ದೇವರ ಕಾಡಿನ ವಿಸ್ತಾರಕ್ಕೆ ಸೇರಿಸಿ ಅಭಿವೃದ್ಧಿಗೊಳಿಸಿದ್ದಾರೆ. ಇರ್ಪುರಾಮೇಶ್ವರ ದೇವರ ಕಾಡು ಇಂದು 130 ಎಕರೆಯಷ್ಟು ವಿಸ್ತಾರ ಹೊಂದಲು ರೈತರ ಇಂತಹ ಪ್ರಯತ್ನವೇ ಕಾರಣವಾಗಿದೆ. ಪಾಲೂರು ಮಹಾದೇವರ ಕಾಡೂ ಕೂಡ ಹೀಗೆಯೇ ವಿಸ್ತೃತ ದೇವರ ಕಾಡಾಗಿತ್ತು. ಇವೆಲ್ಲ, ಗ್ರಾಮೀಣರು ಹರಕೆಯ ರೂಪದಲ್ಲಿ ದೇವರ ಕಾಡನ್ನು ಬೆಳೆಸಿದ ಪ್ರಯತ್ನಗಳಾಗಿವೆ. ಈ ಪ್ರಯತ್ನಗಳು ಬೇರೆಡೆ ಆಗಿರುವ ದೇವರ ಕಾಡುಗಳ ಅತಿಕ್ರಮಣ ಪ್ರವೃತ್ತಿಗೆ ವಿರೋಧವಾಗಿರುವ ಸಂದರ್ಭವನ್ನು ಇಲ್ಲಿ ಕಾಣಬಹುದು.

ದೇವರ ಕಾಡಿನ ಆಕ್ರಮಣಗಳಿಗೆ ಸ್ಥಳೀಯ ಪ್ರತಿಭಟನೆಗಳು

ಹೈಸೊಡ್ಲೂರಿನ ಬಳಿಯ ದೇಗುಲಕ್ಕೆ ನಾಲ್ಕು ಮೈಲು ದೂರದಲ್ಲಿ ಐಕೊಳ ಎಂಬಲ್ಲಿ ದೇವರ ಕಾಡಿದೆ. ದೇಗುಲದ ಸನಿಹಕ್ಕೆ ಸುಮಾರು ಒಂದು ಎಕರೆಯಷ್ಟು ದೇವರ ಕಾಡು ಇತ್ತು. ದೇಗುಲದ ಬಳಿಯೇ ದೇವರ ಕೆರೆ ಇದೆ. ದೇಗುಲದ ಬಳಿಯ ದೇವರ ಕಾಡಿನ ಭಾಗವನ್ನು ಗ್ರಾಮದ ಒಬ್ಬಾತ ಅತಿಕ್ರಮಿಸಿದಾಗ ಗ್ರಾಮೀಣರು ಹೇಗೋ ಸುಮ್ಮನಿದ್ದರು. ಅಲ್ಲದೆ ಆಕ್ರಮಣವನ್ನು ತೆರವು ಮಾಡಲು ಹೇಳಿದ್ದರು. ಆದರೆ ಆಕ್ರಮಿತ ಭಾಗಕ್ಕೆ ದೇವರ ಕೆರೆಯ ನೀರನ್ನು ಬಳಸಿಕೊಳ್ಳಲು ಪಂಪು ಹಾಕಿದಾಗ ಆತನ ಪ್ರಯತ್ನಕ್ಕೆ ಗ್ರಾಮದ ಉಳಿದವರೆಲ್ಲ ಪ್ರತಿಭಟಿಸಿ ದೇವರ ಕೆರೆಯ ನೀರನ್ನು ಬಳಸಿಕೊಳ್ಳುವುದನ್ನು ನಿಲ್ಲಿಸಿದರು.

ಆಕ್ರಮಣ ತೆರವಿಗೆ ಗ್ರಾಮ ಸಭೆಯ ಪ್ರಯತ್ನಗಳು

ಗರ್ವಾಲೆಯ ಭಗವತಿ ಮತ್ತು ಭದ್ರಕಾಳಿಯ ದೇವರ ಕಾಡುಗಳ ನಿರ್ವಹಣೆಗೆ ಗ್ರಾಮ ಸಭೆಯು ಅತಿಕ್ರಮಣದ ವಿರುದ್ಧ ಮಾಡಿರುವ ಪ್ರಯತ್ನ ಗಮನಾರ್ಹವಾಗಿದೆ. ಕೆಲವು ಪ್ಲಾಂಟರ್‌ಗಳು ಈ ದೇವರ ಕಾಡುಗಳ ಭಾಗಗಳನ್ನು ಆಕ್ರಮಿಸಿದರು. ಆಗ ಇಡೀ ಗ್ರಾಮ ಸಭೆಯು ಒಟ್ಟಾಗಿ ಆಕ್ರಮಣಕಾರರ ಸಾಮಾಜಿಕ ಸಮಾರಂಭಗಳನ್ನು ಬಹಿಷ್ಕರಿಸುವ ನಿರ್ಣಯ ಮಾಡಿತು. ದಂಡವನ್ನು ನಿಗದಿ ಮಾಡಿತು. ಅದನ್ನು ಗ್ರಾಮ ಸಭೆಯ ದಾಖಲೆಗಳಲ್ಲೂ ಬರೆಯಲಾಯಿತು. ಏಕೆಂದರೆ ಅಂದು ದೇವರ ಕಾಡಿನ ಇದ್ದ ವಿಸ್ತೀರ್ಣ, ಅತಿಕ್ರಮಿತವಾದ ಭಾಗ ತೆರವು ಮಾಡಿಸಿದ್ದು ಹಾಗೂ ದಂಡ ವಸೂಲು ಮಾಡಿದ ದಾಖಲೆ, ಮುಂದಿನವರಿಗೆ ಮಾರ್ಗದರ್ಶಕವಾಗಲಿ ಎಂಬುದೇ ಅವರ ಇಚ್ಛೆ. ಇನ್ನು ಪಾಡಿ ಇಗ್ಗು ತಪ್ಪನ ದೇವಸ್ಥಾನಕ್ಕೆ ಸುಮಾರು 110 ಎಕರೆಯಷ್ಟು ದೇವರ ಕಾಡು ಇತ್ತು. ಅಲ್ಲಿನ ದೇವರ ಕಾಡು ಆಕ್ರಮಿತವಾದಾಗ ಸುತ್ತ ಮುತ್ತಲಿನ ನಾಡಿನ ಜನರು ಮತ್ತು ಮುಖ್ಯಸ್ಥರು ಸೇರಿ ಆಕ್ರಮಣ ತಡೆಗಟ್ಟಿ ರಕ್ಷಿಸಬೇಕೆಂಬ ತೀರ್ಮಾನದ ಬಗ್ಗೆ 1985ರಲ್ಲಿ **ಶಕ್ತಿ ಮತ್ತು ಕೊಡಗು** ದೈನಿಕ ಪತ್ರಿಕೆಗಳಲ್ಲಿ ವಿವರವಾಗಿ ಬರೆದು ತಿಳಿಸಿದ್ದರು. ಆದರೆ ಕೆಲವು ಕಾಲಮಾನ ಕಾನೂನುಗಳ ಕಾರಣ ದೇವರ ಕಾಡಿನ ಭಾಗಗಳು ಹೋಗಿವೆ. ಆ ಭಾಗಗಳನ್ನು ಮರಳಿ ವಶಪಡಿಸಿಕೊಳ್ಳಲು ಸಾಧ್ಯವಾದರೆ ವಶಪಡಿಸಿಕೊಳ್ಳುವ ಪ್ರಯತ್ನ, ಅಲ್ಲಿ ತೋಟ ಮಾಡಿದವರಿದ್ದರೆ ಆ ಉತ್ಪನ್ನದಿಂದ ದೇವಸ್ಥಾನದ ಖರ್ಚಿಗೆ ವರ್ಷಂಪ್ರತಿ ನಿರ್ದಿಷ್ಟ ಮೊತ್ತದ ಅಕ್ಕಿಯನ್ನು ಕೊಡಬೇಕೆಂಬ ತೀರ್ಮಾನವು ಆಗುವಂತಹ ಪ್ರಯತ್ನಗಳು ನಡೆದಿವೆ.



ದೇವರ ಹಬ್ಬಗಳಲ್ಲಿ ತಪ್ಪೊಪ್ಪಡಕ ಪಡೆಯುವ ಮೂಲಕ ಎಚ್ಚರಿಕೆ

ದೇವರ ಕಾಡಿನ ದೇವರ ಹಬ್ಬಗಳಲ್ಲಿ ತಪ್ಪು ಮಾಡಿದವರಿಗೆ ದಂಡವನ್ನು ವಿಧಿಸುವ ಪದ್ಧತಿ ಇದೆ. ಕೊಡಗು ರಾಜರ ಕಾಲದಿಂದ ಅದು ಇದ್ದು ಇಂದಿಗೂ ನಡೆದು ಬಂದಿದೆ. ಆ ದಂಡವು ಆ ನಾಡ ದೇಗುಲದ ಭಂಡಾರಕ್ಕೆ ಸೇರಬೇಕೆನ್ನುವ ನಿಯಮವು ಆ ಸೂಚನೆಯಲ್ಲಿದೆ. ಸೂರ್ಲಬಿ ನಾಡಿನ ಮುಟ್ಲು ಗ್ರಾಮದ ಮಂಜುನಾಥನ ಹಬ್ಬದಲ್ಲಿ ಇಂತಹ ಉದಾಹರಣೆ ಕಂಡು ಬರುತ್ತದೆ. ಅಲ್ಲಿ ಹಬ್ಬದ ಕೊನೆಯಲ್ಲಿ ಕೋಲು, ಬೆತ್ತದ ಗುರಾಣಿ ಹಿಡಿದು ಆಡುವ ಆಟದಲ್ಲಿ ತಪ್ಪೊಪ್ಪಡಕ ಕೇಳುವುದಿದೆ.

> **ಅದರ ರೀತ್ಯ ಸುಮಾರು 14 ನಾಡಿನವರಿಗೆ ಕೊಡುವ ಎಚ್ಚರ ಹೀಗಿದೆ. ನಾಡನ್ನು ಕೆಡಿಸಿದವರು 40 ಹಣ, 40 ಭಟ್ಟಿ ಅಕ್ಕಿ, 40 ಪೊನ್ನು ತಪ್ಪೊಪ್ಪಡಕ ಕೊಡಬೇಕು. ಊರನ್ನು ಕೆಡಿಸಿದವರು 30 ಭಟ್ಟಿ ಅಕ್ಕಿ, 30 ಪೊನ್ನು ಕೊಡಬೇಕು.**

ಅಂದರೆ ನಾಡು ಊರು ಹಾಳುಮಾಡುವಲ್ಲಿ ದೇವರಿಗೆ ಸಂಬಂಧಿಸಿದ ಕಾಡನ್ನು ಹಾಳು ಮಾಡಿದರೂ ಇಂತಹ ದಂಡ ತೆರುವ ಪದ್ಧತಿಯನ್ನು ಹೇಳುವುದು ಇಂದಿಗೂ ನಡೆದು ಬಂದಿದೆ.

ಗ್ರಾಮೀಣರ ಕಾವಲುಗಾರಿಕೆ

ಕೆಲವೆಡೆ ಅರಣ್ಯದ ವೃಕ್ಷಪಾಲಕರು ಕಾಡುಗಳ ಬಗ್ಗೆ ನಿರ್ಲಕ್ಷ್ಯವಹಿಸಿದಾಗ ಮೇಲಧಿಕಾರಿಗಳಿಗೆ ತಿಳಿಸುವ ಪ್ರಯತ್ನ ಮಾಡಿದ್ದಾರೆ. ಮುಕ್ಕೊಡ್ಲು ಗ್ರಾಮದ ಕಾಟೋಳಪ್ಪ ದೇವರ ಕಾಡಿನಲ್ಲಿ ಸರ್ವೇ ಆದಾಗ ಅತಿಕ್ರಮಿತ ಭಾಗವನ್ನು ಗಮನಿಸದ ಅಧಿಕಾರಿಯ ವರ್ತನೆ ಗ್ರಾಮೀಣರಿಗೆ ಅಸಮಾಧಾನ ತಂದಿತು. ಇದನ್ನು ಅರಣ್ಯ ಅಧಿಕಾರಿಗಳ ಗಮನಕ್ಕೂ ಅನೇಕ ಬಾರಿ ತರಲಾಯಿತು. ಕೊನೆಗೆ ಬೇಸರವಾಗಿ ಗ್ರಾಮೀಣರು ಊರಿನಲ್ಲಿ ಪತ್ರಿಕಾಗೋಷ್ಠಿ ಕರೆದು ವಸ್ತು ಸ್ಥಿತಿಯನ್ನು ವಿವರಿಸಿದರು. ಒಬ್ಬ ಮರ ವ್ಯಾಪಾರಿಯು ಆ ಕಾಡಿನ ಮರಗಳನ್ನು ಅಕ್ರಮವಾಗಿ ಉರುಳಿಸಿದ್ದರೆಂದು ಅವರ ಆರೋಪವಾಗಿತ್ತು. ಆ ಸಮಯದಲ್ಲಿ ಗ್ರಾಮೀಣರೆಲ್ಲ ಒಟ್ಟಾಗಿ ಈ ಅಕ್ರಮ ಮರ ಕಡಿತಕ್ಕೆ ಶರತ್ತುಗಳನ್ನು ವಿಧಿಸಿದರು. *ಮರ ಕಡಿದ ಜಾಗದಲ್ಲಿ ಆ ವ್ಯಾಪಾರಿಯು ವಿವಿಧ ರೀತಿಯ ಗಿಡದ ಸಸಿಗಳನ್ನು ನೆಡಬೇಕು. ದೇವರ ಕಾಡಿನಿಂದ ಕಡಿದಾಗಿದ್ದ ಮರಗಳನ್ನು ಸರ್ಕಾರಿ ಡಿಪೋವಿಗೆ ಸಾಗಿಸಿ ಮಾರಬೇಕು. ಅದರಿಂದ ಬಂದ ಹಣವನ್ನು ದೇಗುಲ ನಿರ್ವಹಣೆಗಾಗಿ ಅದರ ಭಂಡಾರಕ್ಕೆ ಕೊಡಬೇಕು.* ಇಲ್ಲವಾದರೆ ಕೊಡಗು ಏಕೀಕರಣ ರಂಗದ ಸಹಾಯದಿಂದ ಜಿಲ್ಲೆಯಲ್ಲಿ ಆತನ ಮರದ ವ್ಯಾಪಾರ ವಹಿವಾಟುಗಳಿಗೆ ಅಡ್ಡಿ ಮಾಡಿ ಅಕ್ರಮ ಚಟುವಟಿಯನ್ನು ಸಾರ್ವಜನಿಕರೆದುರು ಜಾಹೀರಾತು ಮಾಡಲಾಗುವುದು ಎಂಬ ಎಚ್ಚರಿಕೆ ನೀಡಿದರು.

ಇಡೀ ಕೊಡಗಿನಲ್ಲಿ ಸುಮಾರು ಏಳೆಂಟು ದೇವಸ್ಥಾನಗಳು ಮಾತ್ರ ಕೊಡಗು ದೇವಾಲಯಗಳ ನಿಧಿ ಸಮಿತಿಯ ನಿರ್ವಹಣೆಗಿದ್ದು ಮುಜರಾಯಿ ಸಂಬಂಧವನ್ನು ಹೊಂದಿವೆ. ಉಳಿದ ಬಹು ಸಂಖ್ಯೆಯ ದೇವರ ಕಾಡುಗಳ ದೇಗುಲಗಳು ಆಯಾ ಗ್ರಾಮದ ಗ್ರಾಮೀಣರಿಂದಲೇ ನಿರ್ವಹಿಸಲ್ಪಡುತ್ತವೆ. ಇಂತಹ ಹಿನ್ನಲೆಯಲ್ಲಿ ಅವರು ರೂಪಿಸಿರುವ ಸಾಮಾಜಿಕ ಬೇಲಿಯು ನಿಜಕ್ಕೂ ಪರಿಣಾಮಕಾರಿಯೇ ಸರಿ. ವಿಶ್ವಬ್ಯಾಂಕ್, ಭಾರತ ಸರ್ಕಾರ ಅಥವಾ ವಿವಿಧ ರಾಜ್ಯ ಸರ್ಕಾರಗಳು ಮಾಡುವ ಕೇವಲ ಗಿಡ ನೆಡುವ ಪ್ರಯತ್ನಗಳಿಗೆ ಒತ್ತು ನೀಡುತ್ತಿರುವಲ್ಲಿ ಗ್ರಾಮೀಣರ ಈ ಪ್ರಯತ್ನಗಳು ಹೆಚ್ಚು ಮೌಲಿಕವಾಗಿ ಕಾಣಸುತ್ತವೆ. ಜಗತ್ತಿನ ಜೀವ ವೈವಿಧ್ಯದ ತುಂಬ ಕ್ರಿಯಾಶೀಲ ಚಟುವಟಿಕೆಯ ಗರ್ಭಸ್ಥ ನೆಲೆಯಾದ ಪಶ್ಚಿಮ ಘಟ್ಟಗಳ ಹರಿದ್ವರ್ಣ ಕಾಡುಗಳ ಪರಿಸರ ವ್ಯವಸ್ಥೆಯಲ್ಲಿ ಸ್ಥಾನಗೊಂಡಿರುವ ಕೊಡಗಿನ ದೇವರ ಕಾಡುಗಳ ಮಹತ್ವವನ್ನು ಅರಿಯಬೇಕು. ದೇವರ ಕಾಡುಗಳನ್ನು 'ಉಳಿಸಿ ಕೊಳ್ಳುವ ಮೌಲ್ಯವು' ಈ ಗ್ರಾಮೀಣರಲ್ಲಿ 'ಸಾಮಾಜಿಕ ಬೇಲಿಯ' ಮಾಧ್ಯಮದಲ್ಲಿ ಇಂದಿನ ಪರಿಸರಕ್ಕೆ ಅನುಗುಣವಾಗಿ ಮಾಡುತ್ತಿರುವ ಪ್ರಯತ್ನಗಳು ಮುಂದುವರೆದಷ್ಟು ದೇವರ ಕಾಡುಗಳು ತಮ್ಮ ಅಸ್ತಿತ್ವ ಮೌಲ್ಯವನ್ನು ಉಳಿಸಿಕೊಳ್ಳುತ್ತವೆ.

ಹೊರದೇಶದಿಂದ

ನೇಪಾಳದ ರೈತರ ನಂಬಿಕೆಗಳು

1. ಭೂಮಿ ಪಲವತ್ತತೆ : ಘಾಡಿ (Ageratum Sp), ಸಿಸ್ನೂ (Urtica dicica), ಟೆಟಿಡಟೆ (Artemesia vulgaries) ಮುಂತಾದ ಕಳೆಗಳು ಯಾವಭೂಮಿಯಲ್ಲಿ ಸಂಮೃದ್ಧವಾಗಿ ಬೆಳೆಯುತ್ತದೆಯೋ ಅಂತಹ ಭೂಮಿ ಫಲವತ್ತತೆಯ ಸಂಕೇತವೆಂದು ಭಾವಿಸಲಾಗಿದೆ.

2. ಮಳೆಯ ಮುನ್ಸೂಚನೆ :- ಕಪ್ಪು ರೆಕ್ಕೆಯ ಗೆದ್ದಲು ಹುಳುಗಳ ಹಾರಾಟ, ಕಾಮನಬಿಲ್ಲು ಮತ್ತು ದನಕರುಗಳು ಬಾಲ ಮೇಲೆತ್ತಿಕೊಂಡು ನೆಗೆದಾಡುತ್ತಿದ್ದರೆ ಅದು ತಕ್ಷಣದಲ್ಲಿ ಮಳೆ ಬೀಳುವ ಸಂಕೇತವಾಗಲಿದೆ.

3. ಬಿತ್ತನೆ ಸಮಯ :- ಕೆಲವು ಹಕ್ಕಿಗಳು ಹಾಡುವ ಸ್ವರದ ಆಧಾರದ ಮೇಲೆ ಜೋಳದಂತಹ ಬೆಳೆಗಳ ಬಿತ್ತನೆಗೆ ಸೂಕ್ತ ಕಾಲವನ್ನು ನಿರ್ಧರಿಸಲಾಗುತ್ತಿತ್ತು. ಭತ್ತದ ಹೊಲದಲ್ಲಿ ಕಪ್ಪೆಗಳು ಒಟರುಗುಟ್ಟುವಿಕೆ ಶುರುವಾದರೆ ಭತ್ತದ ಬಿತ್ತನೆಗೆ ಸೂಕ್ತ ಸಮಯವೆಂದು ತಿಳಿಯಲಾಗುತ್ತಿತ್ತು.

4. ಬರಗಾಲದ ಮುನ್ಸೂಚನೆ : ಬಿಳಿ ರೆಕ್ಕೆಯ ಗೆದ್ದಲು ಹುಳುಗಳ ಹಾರಾಟ, ಎತ್ತರದ ಕ್ಷೀಣವಾದ ಕಾಮನಬಿಲ್ಲು, ಬಿಚೆರೆ ಎಂಬ ಹಕ್ಕಿಯ ಹಾಡು, ಹುಳುಗಳ ಕಿರಿಚಾಟ ಇದು ಬರಗಾಲದ ಮನ್ಸೂಚನೆಯಾಗಿರುತ್ತದೆ.

5. ಆನೆಕಲ್ಲು (ಮಳೆ ಕಲ್ಲು - HAILSTORM) ಆಗಸ್ಟ್ ಕೊನೆಯ ವಾರದಲ್ಲಿ ಮಿಂಚು, ಸಿಡಿಲುಗಳು ಅತೀಯಾಗಿದ್ದಲ್ಲಿ ಮುಂಬರುವ ಮಾಸಗಳಲ್ಲಿ ಅದೇ ದಿಕ್ಕಿನಲ್ಲಿ ಮಳೆ ಕಲ್ಲು ಬೀಳುವುದಾಗಿ ನೇಪಾಳದ ರೈತರ ಅನುಭವ.

6. ಕೀಟಹಾವಳಿ :- ಅಮವಾಸ್ಯೆಯ ನಂತರದ ದಿನಗಳಲ್ಲಿ ಬೆಳೆ ಕಟಾವು ಮಾಡಿದಲ್ಲಿ ಅವುಗಳ ಶೇಖರಣೆ ಸಮಯದಲ್ಲಿ ಹುಣ್ಣಿಮೆ ನಂತರದಲ್ಲಿ ಕಟಾವು ಮಾಡಿರುವ ಬೆಳೆಗಳಿಗಿಂತ ಅಧಿಕ ಕೀಟ ಹಾವಳಿ ಬರುವುದು.

7. ಬೀಜದ ಆಯ್ಕೆ :- ಆರೋಗ್ಯ ಪೂರ್ಣ ಜೋಳದ ತೆನೆಯಲ್ಲಿನ ಮಧ್ಯದಲ್ಲಿ ($^{1}/_{3}$ ಭಾಗದಲ್ಲಿ) ಇರುವ ಕಾಳುಗಳು ಬಿತ್ತನೆಗೆ ಅತ್ಯಂತ ಯೋಗ್ಯವಾಗಿರುತ್ತದೆ.

ಪ್ರೇಮ ಗುರಂಗ್
ಅನ್ನಪೂರ್ಣ ಸಂರಕ್ಷಣಾ ಕೇಂದ್ರ,
ಗಂಡಕ್ಕೆ, ನೇಪಾಳ

ಸರ್ವೋದಯ ಕೃಷಿಕ : ಶ್ರೀ ಚೇರ್ಕಾಡಿ ರಾಮಚಂದ್ರರಾಯರು

ಪರಿಚಯಾತ್ಮಕ ಬರಹ: ಎ.ಕೆ. ಹಿಮಕರ, ಬಂಟಮಲೆ

ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ತೀರದ ಬ್ರಹ್ಮಾವರದ ಒಂದು ಮಗ್ಗುಲಲ್ಲಿ ಖಾದಿ ಧಾಮ ಎಂಬ ವಿಶಿಷ್ಟ ನೆಲವಿದೆ. ಅರಬಿ ಸಮುದ್ರದಿಂದ ನಾಲ್ಕಾರು ಮೈಲಿ ದೂರದಲ್ಲಿ ಹಬ್ಬಿಕೊಂಡಿರುವ ಸವಕಳಿ ದಿಬ್ಬ / Erosional Flatform ದ ಗಟ್ಟಿ ಕೆಂಪು ಮಣ್ಣಿನ ನೆಲ (ಲ್ಯಾಟರೈಟ್ ವರ್ಗದ್ದು) ದಲ್ಲಿ ಹುಲುಸಾಗಿ ಭತ್ತ ಬೆಳೆಯುತ್ತಿರುವುದನ್ನು ನಾವು ಕಾಣಬಹುದು. ನಮ್ಮ ರೈತರು ಎದುರಿಸುತ್ತಿರುವ ನಾನಾ ರೀತಿಯ ಅಡ್ಡಿ ಆತಂಕಗಳನ್ನು ತಾವೇ ನಿವಾರಿಸಿಕೊಳ್ಳುವುದಾದರೆ ಈ ನೆಲ ಅವರಿಗೊಂದು ಕೈಪಿಡಿ. ಇದರ ಹಿಂದಿನ ಪ್ರಯೋಗಶೀಲತೆ, ಪರಿಶ್ರಮ ಶ್ರೀ ಚೇರ್ಕಾಡಿ ರಾಮಚಂದ್ರ ರಾಯರದ್ದು.

> *ನೆಲದ ಮೇಲೆ ಯಾವುದೇ ದಬ್ಬಾಳಿಕೆ ಸಲ್ಲದೆನ್ನುವ ಇವರು, ಸಮತೋಲನ ಕಾಪಾಡುವ ಸದಾ ಸ್ಥಿರವಾಗಿ ಬೆಳೆ ನೀಡುವ ರೀತಿಯಲ್ಲಿ ನೆಲವನ್ನು ಒಲಿಸಿಕೊಂಡಿದ್ದಾರೆ.*

ಎಲ್ಲಾ ಬೆಳೆಗಳೂ ಬೆಳೆಯುವುದಲ್ಲದೇ ಅಧಿಕ ಇಳುವರಿ ಮತ್ತು ಅಧಿಕ ಉಳಿಕೆ ನೀಡುತ್ತವೆ. ಯಾವುದೇ ರಾಸಾಯನಿಕ ಪದಾರ್ಥಗಳ ಬಳಕೆ ಇಲ್ಲ. ನಿರಂತರ ಪ್ರಯೋಗ ನಡೆಸುತ್ತಲೇ ಶ್ರೀ ರಾಮಚಂದ್ರರಾಯರು ಈ ಮಾದರಿಯನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಈ ಕೃಷಿ ಪದ್ಧತಿಯನ್ನು ಸರ್ವೋದಯ ಕೃಷಿ ಎಂತಲೂ ಕರೆಯುತ್ತಾರೆ. ನಾಲ್ಕಾರು ಜನರಿರುವ ಕುಟುಂಬಕ್ಕೆ ಒಂದು ಎಕ್ರೆ ಜಮೀನಿದ್ದರೆ ಸುಖವಾಗಿ ದುಡಿದುಣ್ಣಬಹುದು. ಅಧಿಕ ಬಂಡವಾಳ ಕಬಳಿಸುವ ಕೃಷಿ ಸಲಕರಣೆ, ಸಾಧನಗಳಾಗಲೀ, ರಾಸಾಯನಿಕ ಗೊಬ್ಬರ, ಕೀಟನಾಶಕಗಳ ಬಳಕೆಯೇ ಇಲ್ಲದ ಈ ವಿಧಾನದಲ್ಲಿ ಎಲ್ಲವೂ ಲಾಭದಾಯಕ. ಸಾಮಾನ್ಯವಾಗಿ ಎಲ್ಲಾ ಬೆಳೆ ಬೇಸಾಯಗಳಲ್ಲೂ ಅನುಸರಿಸಬಹುದಾದ ಈ ವಿಧಾನದಲ್ಲಿ, ಬೆಂಡೆ, ಬದನೆ, ಬಾಳೆ, ಕಾಳು ಮೆಣಸು, ಚಿಕ್ಕು, ಪೇರಳೆ, ಗೇರು, ಪಪಾಯ, ಅನಾನಸು, ಹತ್ತಿ, ತೆಂಗು, ಶುಂಠಿ, ಅರಶಿಣ, ಹಲಸು, ಮಾವು, ಸುವರ್ಣಗೆಡ್ಡೆ, ಕೋಸು, ಮೊದಲಾದ ತೋಟದ ಬೆಳೆ, ತರಕಾರಿ ಸೇರಿದಂತೆ ಎಲ್ಲವೂ ಹುಲುಸಾಗಿ ಫಲಕೊಡುತ್ತವೆ. ಮಳೆಗಾಲದಲ್ಲಿ ನೆಲಗಡಲೆಯೂ ಚೆನ್ನಾಗಿ ಬೆಳೆಯುತ್ತದೆ. ಕರಾವಳಿಪ್ರದೇಶದಲ್ಲಿ ಅಪರೂಪವಾಗಿರುವ ರಾಗಿ, ಜೋಳ ಕೂಡಾ ಬೆಳೆದು, ಕೇವಲ ಸಣ್ಣ ಜಮೀನಿನಲ್ಲಿ ಎಲ್ಲವೂ ದೊರೆಯುವಂತಾಗಿದೆ. ಅದೇನಿದ್ದರೂ, ದೇಶದ ಪ್ರಮುಖ ಆಹಾರದ ಬೆಳೆಯಾದ ಭತ್ತವನ್ನು ಸರಳ, ಸುಲಭ ಹಾಗೂ ಲಾಭದಾಯಕವಾಗಿ ಬೆಳೆಯುವುದನ್ನು ಪ್ರಾಯೋಗಿಕವಾಗಿ ಸಾಧಿಸಿದವರು ಶ್ರೀ ಚೇರ್ಕಾಡಿಯವರು ಹಾಗಾಗಿ ಈ ವಿಧಾನವು 'ಚೇರ್ಕಾಡಿ' ವಿಧಾನವೆಂದೂ ಗುರುತಿಸಲ್ಪಟ್ಟಿದೆ.

ಭತ್ತ ಬೆಳೆಯುವ ವಿಧಾನ

ಭೂಮಿಯ ಲಕ್ಷಣ : ಸಾಮಾನ್ಯವಾಗಿ ನೀರಾಶ್ರಯವಿಲ್ಲದ ಎತ್ತರದ ಗುಡ್ಡಪ್ರದೇಶಗಳಲ್ಲೂ ಭತ್ತ ಬೆಳೆಯುವುದು ಸಾಧ್ಯ. ಫಲವತ್ತಾದ ಮೆಕ್ಕಲು ಮಣ್ಣೇ ಬೇಕೆಂದಿಲ್ಲ. ಕ್ರಮೇಣ ಗಟ್ಟಿ ನೆಲವನ್ನು ಮೆದು ಮಣ್ಣಾಗಿ ಪರಿವರ್ತಿಸಲಾಗುತ್ತದೆ. ಮಣ್ಣಿನಲ್ಲಿ ಕನಿಷ್ಟ ತೇವಾಂಶವಿದ್ದರೆ ಸಾಕು, ನೆಲ ಸಮತಟ್ಟಾಗಿರಬೇಕಾಗಿಲ್ಲ. ಯಾಕೆಂದರೆ ನೀರು ನಿಲ್ಲಿಸುವ ಕ್ರಮವಿಲ್ಲ. ಕೃತಕ ನೀರಾವರಿ ಬೇಕಾಗಿಲ್ಲ. ಮುಂಗಾರು ಮಳೆಯ ಲಯಕ್ಕನುಗುಣವಾಗಿ ಬೇಸಾಯ ತೊಡಗಿಕೊಳ್ಳುತ್ತದೆ. ಬೆಟ್ಟು ಗದ್ದೆ, ಮಕ್ಕಿ, ಮಜಲು, ಬೋಳು ಗುಡ್ಡ ಪ್ರದೇಶಗಳಲ್ಲೂ ಉತ್ಕೃಷ್ಟ ಇಳುವರಿ ಪಡೆಯಬಹುದು. ಮರದಿಂದ ಜಿನುಗುವ ಮಳೆಹನಿ, ನೆರಳಿನ ನೆಲ ಉಚಿತವಲ್ಲ.

ಸಾಧನ-ಸಲಕರಣೆಗಳು : ಹಾರೆ, ಗುದ್ದಲಿ, ಕತ್ತಿ ಮೊದಲಾದ ಸರಳ ಸಾಧನಗಳು.

ಬೀಜ : ರಾಜಕೈಮೆ, ಕೊತ್ತಮರಿ ನೆಲ್ಲು, ಕುಟ್ಟಿಕೈಮೆ, ರಾಜ ಮಣಿ, ಮೊದಲಾದವುಗಳು ಒಂದು ಎಕರೆ ಪ್ರದೇಶಕ್ಕೆ ಒಂದು ಕಿಲೋ ಬೀಜ ಸಾಕಾಗುತ್ತದೆ.

ಬೇಸಾಯ ಕ್ರಮದ ವಿವಿಧ ಹಂತಗಳು

ನೆಲವನ್ನು ಹಾರೆ, ಗುದ್ದಲಿಗಳ ಸಹಾಯದಿಂದ ಸ್ವಚ್ಛಗೊಳಿಸಿ ಹದಬರಿಸುವುದರ ಹೊರತು ಎತ್ತು, ನೇಗಿಲು ಬಳಸಿದ ಉಳುಮೆ ಬೇಕಾಗಿಲ್ಲ. ಒಟ್ಟಿನಲ್ಲಿ ಭೂಮಿಯ ಮೇಲ್ಪದರದ ಸುಮಾರು 4 ಇಂಚು ಮಾತ್ರ ಬಳಸಲ್ಪಡುತ್ತದೆ. ಅನಗತ್ಯದ ಬೇರು, ಕಸ ಕಡ್ಡಿಗಳನ್ನು ತೆಗೆದು ಮಣ್ಣನ್ನು ಶುಚಿಗೊಳಿಸಿ, ಬಳಿಕ ಸಿದ್ಧಗೊಳಿಸಲಾದ ಗೊಬ್ಬರ, ಬೂದಿ ಹರಡಿ, ಮಣ್ಣಿನಲ್ಲಿ ಬೆರೆತುಕೊಳ್ಳುವಂತೆ ಮಾಡುವುದು. ಸಾಮಾನ್ಯವಾಗಿ ಒಮ್ಮೆ ಬಳಸಲ್ಪಟ್ಟ ನೆಲವು ಮುಂದಿನ ಬೆಳೆಗೆ ಅನುಕೂಲವಾಗಿರುತ್ತದೆ. ಬಳಿಕ ಸುಮಾರು 2 ಇಂಚು ಆಳವುಳ್ಳ ಸಾಲುಗಳನ್ನು ರಚಿಸುವುದು. ಸಾಲುಗಳ ಅಂತರ, ಪ್ರಮಾಣ ಈ ರೀತಿಯಾಗಿ ಇರಬಹುದು. ಅಂದರೆ ಒಂದು ಸೆಂಟ್ ಜಾಗದಲ್ಲಿ 15 ಅಡಿ ಉದ್ದವಿರುವ ಸುಮಾರು 16 ಸಾಲುಗಳನ್ನು ರಚಿಸಬಹುದಾಗಿರುತ್ತದೆ. ಒಂದು ಸಾಲಿನಿಂದ ಇನ್ನೊಂದು ಸಾಲಿಗಿರುವ ಅಂತರ ಸುಮಾರು ಎರಡು ಅಡಿಗಳು ಗೊಬ್ಬರದ ಹುಡಿ, ಬೂದಿ ಹಾಕಿ ಸಾಲುಗಳನ್ನು ಕೊಚ್ಚಿ ಇರಿಸಬೇಕು.

ಸಸಿ ಮಾಡುವಿಕೆ

ನೆಡಲು ಯೋಗ್ಯವಾದ ಭತ್ತದ ಸಸಿಗಳನ್ನು ಪ್ರತ್ಯೇಕವಾಗಿ ಪಾತಿಗಳಲ್ಲಿ ಬೆಳೆಸಿರಬೇಕು. ದಕ್ಷಿಣ ಕನ್ನಡ ಕರಾವಳಿಯಲ್ಲಿ ಮುಂಗಾರು ಮಳೆಯ ಆಗಮನವನ್ನು ಗಮನದಲ್ಲಿರಿಸಿಕೊಂಡು ಮೇ ತಿಂಗಳ ಮೊದಲವಾರದಲ್ಲಿ ಬೀಜ ಹಾಕಿ ಮೊಳಕೆ ಬರಿಸಬೇಕು. ಸುಮಾರು 30 ದಿನಗಳ ಬಳಿಕ ಮಳೆ ಆರಂಭಗೊಳ್ಳುವ ಹೊತ್ತಿಗೆ ಭತ್ತದ ಸಸಿ ನೆಡುವುದಕ್ಕೆ ಸಿದ್ಧವಾಗಿರುತ್ತದೆ.

ಸುಲಭವಾಗಿ ಕೀಳಬಹುದಾದ ರೀತಿಯಲ್ಲಿ ಪಾತಿ ರಚಿಸಿಕೊಂಡಿರುವುದರಿಂದ ಬೇರುಗಳಿಗೆ [illegible]. ಈ [illegible]ಗಳನ್ನು ಸುಮಾರು 8 ಇಂಚುಗಳಿಗೆ [illegible]

ಸಜ್ಜುಗೊಳಿಸಲಾದ ಸಾಲುಗಳಲ್ಲಿ ನೆಡುವುದು. ಒಣ ನೆಲದಲ್ಲಿ ಮೊಳೆತ ಸಸಿಗಳಿಗೆ ಈಗ ಹೆಚ್ಚಿನ ನೀರು ಹಾಗೂ ಗೊಬ್ಬರ ಅವಕಾಶ ದೊರೆಯುವುದರಿಂದ ಹುಲುಸಾಗಿ ಮೇಲೇಳುತ್ತವೆ.

ಹದಿನೈದು ದಿನಗಳ ಬಳಿಕ, ಹಸಿರು ಸೊಪ್ಪು ಇರಿಸುವುದು, ಗ್ಲಿರಿಸಿಡಿಯಾ, ಸುಬಾಬುಲ್ ಮೊದಲಾದುವುಗಳನ್ನು ಬಳಸಬಹುದು. ಆ ಬಳಿಕ ಸೆಗಣಿ ನೀರು ಕೊಡುವುದು. ಸೆಗಣಿ ನೀರು ಕನಿಷ್ಠ ಎರಡು ದಿನ ಹಳೆಯದಾಗಿರಬೇಕು.

ನಾಟಿ ಮಾಡಿದ ಸುಮಾರು 45 ದಿನಗಳಲ್ಲಿ ಹಿಂಡಿ ನೀರು ಕೊಡುವುದು, ನೆಲಕಡಲೆ ಹಿಂಡಿಯನ್ನು ತೆಳ್ಳಗೆ ನೀರು ಮಾಡಿರಬೇಕು. ಪ್ರಮಾಣ ಸುಮಾರು 1/4 ಕಿಲೋ ಹಿಂಡಿ 16 ಸಾಲುಗಳಿಗೆ ಬರುವಂತೆ ಬಳಸಬಹುದು.

ಈ ರೀತಿಯ ಗೊಬ್ಬರ ಬಳಕೆ ನಂತರ ಮಣ್ಣು ಮುಚ್ಚುವುದು. ಸಸಿಗಳು ಬಲಿತಿರುವುದರಿಂದ ಬುಡ ಭದ್ರವಾಗುವ ಅವಶ್ಯಕತೆ ಇರುತ್ತದೆ. ಅಂತೆಯೇ ಹಸಿರುಗೊಬ್ಬರ ಕೊಳೆತು ಬೇರು ಪಸರಿಸಲೂ ಇದು ಸಹಕಾರಿಯಾಗುತ್ತದೆ. ಈಗ ತುಸು ಆಳವಿದ್ದ ಭತ್ತದ ಸಾಲು ಬದಿಯ ಮಣ್ಣನ್ನು ಹರಡಿದ ಬಳಿಕ ನೆಲ ಒಂದು ರೀತಿಯ ಸಮತಟ್ಟು ಮಾಡಿದಂತಾಗುತ್ತದೆ. ಆ ಬಳಿಕ ಕೆಲವೇ ದಿನಗಳಲ್ಲಿ ಸುಮಾರು 8 ರಿಂದ 10 ಎಗ್ಗೆ / ಹಿಳ್ಳೆ ಬರುವುದನ್ನು ಕಾಣಬಹುದು. ನೆಟ್ಟಿ 60 ರಿಂದ 70 ದಿನಗಳಲ್ಲಿ ಬೂದಿ, ನೆಲಗಡಲೆ ಹಿಂಡಿಯನ್ನು ಮಿಶ್ರಣ ಮಾಡಿ ಬುಡಕ್ಕೆ ಹಾಕುವುದು. ಬಳಿಕ ಮತ್ತೆ ಮಣ್ಣನ್ನು ಸಮಗೊಳಿಸಿದರೆ, ಈ ಹಿಂದೆ ಮಣ್ಣು ಕೊಡುವಾಗ ಸಮತಟ್ಟಾಗದಿದ್ದರೆ ಈಗ ಸಮಗೊಳಿಸಬಹುದು. ಆಗಾಗ ಏರಿ ಸರಿಗೊಳಿಸಿ ಮಣ್ಣು ಹರಡುವ ಕಾರಣ ಅನಗತ್ಯದ ಹುಲ್ಲು, ಕಾಡು, ಕಳೆ, ಕಾಣಿಸಿಕೊಳ್ಳುವುದಿಲ್ಲ.

ರೋಗ ನಿಯಂತ್ರಣ

ರೋಗ ಬಾಧೆ ಇಲ್ಲದಿರುವುದೇ ಈ ಬೇಸಾಯದ ವಿಶೇಷತೆ. ಒಂದು ವೇಳೆ ಕದಿರೊಡೆಯುವ ಕಾಲದಲ್ಲಿ ಗಂಟು ರೋಗ ಬಾಧೆ ಇದ್ದಲ್ಲಿ 50 ಗ್ರಾಂನಷ್ಟು ಮೆಣಸಿನ ಹುಡಿಗೆ 2 ಸೇರು ಬೂದಿ ಮತ್ತು ಸುಣ್ಣದ ಹುಡಿ ಬೆರೆಸಿ ಹೊಲದಲ್ಲಿ ಬೀಸಿ ಹಾರಿಸಿದರೆ ತೊಂದರೆ ನಿವಾರಣೆಯಾಗುವುದು. ಅಕ್ಟೋಬರ ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ.

ನೀರಿನ ನಿರ್ವಹಣೆ

ಕೃತಕ ನೀರಾವರಿಯ ಅಗತ್ಯವಿರುವುದಿಲ್ಲ ವಾದುದರಿಂದ, ಮಳೆಗಾಲದ ಮಿಗತೆ ನೀರನ್ನು ನಿಯಂತ್ರಿಸುವುದೇ ನೀರಿನ ನಿರ್ವಹಣೆಯ ಮುಖ್ಯ ವಿಧಾನ ಮರದಿಂದ ಉದುರುವ ಮಳೆ ಹನಿ ಇರಬಾರದು.

ಬೆಳೆಗಳ ಪರ್ಯಾಯ ಸೂತ್ರ

ಒಮ್ಮೆ ಭತ್ತ ಬೆಳೆದ ಜಾಗದಲ್ಲಿ ತರಕಾರಿ, ಗೆಡ್ಡೆಗೆಣಸು ಮೊದಲಾದ ಯಾವುದೇ ಬೆಳೆಗಳನ್ನು ಎರಡನೇ ವರ್ಷದಲ್ಲಿ ಬೆಳೆಯಬೇಕು. ಹಾಗೆ ಮಾಡಿದಲ್ಲಿ ಮೂರನೇ ವರ್ಷಕ್ಕೆ ಮತ್ತೆ ಭತ್ತ ಬೆಳೆಯಬಹುದು.

ಗೊಬ್ಬರ ಸಿದ್ಧಪಡಿಸುವಿಕೆ

ಹಸಿಸೊಪ್ಪು, ಹುಲ್ಲು, ತರಗೆಲೆ, ಕಸಕಡ್ಡಿಗಳನ್ನು ಸಂಗ್ರಹಿಸಿ ಮನೆಯಲ್ಲೇ ತಯಾರಾಗುವ ಬೂದಿಯೊಂದಿಗೆ ಬೆರೆಸಿ ರಾಶಿ ಮಾಡಿಡುವುದು. ಈ ರೀತಿಯಲ್ಲಿ ಸಾವಯವ ಪದಾರ್ಥಗಳನ್ನು ಕೊಳೆಯಲು ಬಿಡುವುದು. ಈ ರಾಶಿಯಿಂದ ಅವಶ್ಯಕತೆಗೆ ತಕ್ಕಂತೆ ಬಳಸುತ್ತಾ ಬರುವುದು. ಇವುಗಳು ಒಣ ಹುಡಿಯ ರೂಪದಲ್ಲಿರುತ್ತವೆ. ದಿನಗಳೆದಂತೆ ಹೆಚ್ಚು ಸತ್ವಭರಿತವಾಗುತ್ತದೆ.

ಚೇರ್ಕಾಡಿಯವರ ಬೇಸಾಯಕ್ರಮ ಕೇವಲ ಆಹಾರ ಉತ್ಪಾದನೆಯ ಚಟುವಟಿಕೆಯಲ್ಲ, ಅದೊಂದು ಜೀವನಕ್ರಮವಾಗಿದೆ.

ಮಾನವನ ಮನಸ್ಸು, ದೇಹ ಮತ್ತು ಪರಿಸರದೊಂದಿಗೆ ನಿಕಟವಾಗಿ ಬೆಸೆದು ಕೊಂಡಿದೆ. ಹಾಗಾಗಿ ಬೇಸಾಯ ರೈತನ ಪ್ರತ್ಯೇಕ ಕಸುಬಾಗುವುದಿಲ್ಲ. ಬದಲಿಗೆ ನಿತ್ಯಕರ್ಮಗಳು, ಆಹಾರ ತಯಾರಿ ಮತ್ತು ಸೇವನೆ, ಹತ್ತಿ ಉತ್ಪಾದಿಸುವುದು ಮತ್ತು ಸ್ವಂತ ನೂಲುವುದು, ಗೃಹಬಳಕೆಯ ಅವಶ್ಯಕ ಸಾಮಾಗ್ರಿಗಳನ್ನು ತಾವೇ ಸೃಷ್ಟಿಸಿಕೊಳ್ಳುವುದು ಹೀಗೇ, ಎಲ್ಲವೂ ಪರಸ್ಪರ ಸುಸಂಬದ್ಧವಾಗಿ ಬೆಸೆದುಕೊಂಡಿದೆ. ಈ ಬೆಸುಗೆ ವಿವಿಧ ಚಟುವಟಿಕೆಗಳೊಂದಿಗೆ ಮಾತ್ರವಲ್ಲದೇ ನೈಸರ್ಗಿಕವಾಗಿ ವರ್ಷಾವಧಿ ಋತುಮಾನ ಧರ್ಮಗಳಾದ ಬೇಸಿಗೆ, ಮಳೆ ಚಳಿಗಾಲಗಳೊಂದಿಗೂ ಸೇರಿಕೊಂಡಿದೆ. ಈ ಸಮತೋಲನದಲ್ಲಿ ಪರಿಸರದ ಸಮಷ್ಟಿಯ ಕಲ್ಪನೆಯಿದೆ.

ಚೇರ್ಕಾಡಿ ವಿಧಾನದಲ್ಲಿ ಯಾವುದೂ ಅತಿಯಾಗಿ ಬಳಕೆಯಾಗಿ ಬರಿದಾಗುವುದಿಲ್ಲ, ಇದು ಹಿತ ಮಿತ ಪ್ರಮಾಣದ್ದು, ಭೂಮಿಯ ವಿಸ್ತಾರವಾಗಲಿ, ಬಂಡವಾಳವಾಗಲಿ ಅಪ್ರಸ್ತುತ. ಹಿಂದೊಮ್ಮೆ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಎಚ್.ಎಲ್.ನಾಗೇಗೌಡರು ಚೇರ್ಕಾಡಿ ಯವರ ಪುಟ್ಟ ಜಮೀನಿಗೆ ಭೇಟಿ ನೀಡಿದ್ದರು. ಇಷ್ಟು ಪರಿಶ್ರಮಪಡುವ ವ್ಯಕ್ತಿಗೆ ತುಂಡು ಭೂಮಿಯೇ ಮಿತಿಯಾಯಿತಲ್ಲಾ ಎಂದು, ಪಕ್ಕದಲ್ಲಿರುವ ವಿಸ್ತಾರವಾದ ಉತ್ತಮ ಸರಕಾರಿ ಜಮೀನನ್ನು ಉಚಿತವಾಗಿ ಮಂಜೂರು ಮಾಡುವುದಾಗಿ ಹೇಳಿಕೊಂಡರು. ವಿಸ್ತಾರವಾದ ದೊಡ್ಡ ಜಮೀನಿನಲ್ಲಿ ಸುಖವಾಗಿರಲೆಂದು ಅವರ ಆಶಯವಾಗಿತ್ತು. ಜಿಲ್ಲಾಧಿಕಾರಿಗಳ ಔದಾರ್ಯವನ್ನು ಮೆಚ್ಚಿಕೊಂಡರೂ ತಾನು ಈ ಸಣ್ಣ ಭೂಮಿಯಲ್ಲೇ ಸುಖವಾಗಿದ್ದೇನೆ. ತನ್ನ ಅವಶ್ಯಕತೆಗೆ ಮೀರಿದ ದೊಡ್ಡ ಜಮೀನು ಬೇಡವೆಂದು ಕೊಡುಗೆಯನ್ನು ನಿರಾಕರಿಸಿದರು. ದೊಡ್ಡ ಭೂಮಿ, ಅಧಿಕ ಹಿಡುವಳಿ, ಅಧಿಕ ಬಂಡವಾಳಗಳು ರೈತರಿಗೆ ಸುಖ ನೀಡಲಾರದು ಹೊರತಾಗಿ ರೈತರ ಸಾರ್ಥಕತೆ ಬೇರೆಯೇ ಮೂಲದಲ್ಲಿದೆ ಎಂಬುದನ್ನು ಶ್ರೀ ಚೇರ್ಕಾಡಿ ಯವರು ಕಂಡುಕೊಂಡವರಾಗಿದ್ದಾರೆ. ಮಾನವ ಇರುವುದರಲ್ಲಿ ತೃಪ್ತಿ ಕಾಣಬೇಕೇ ಹೊರತು ಅತಿಯಾದ ಬಯಕೆ ಸುಖಕೊಡಲಾರದೆಂದು ಅವರ ನಂಬಿಕೆ. ಇಂತಹದ್ದೇ ಪ್ರಸಂಗ ಚೇರ್ಕಾಡಿಯವರ ಕೃಷಿ ತಂತ್ರಸಾಧನದ ಬಗ್ಗೆ ನಡೆದುಹೋಯಿತು. ಇವರ ಕುರಿತಾಗಿ ಚಿತ್ರ ವಿಚಿತ್ರ ಮಾತುಕತೆ, ಅಭಿಪ್ರಾಯ ಮಾತುಕತೆಗಳು ಹೊರವಲಯದಲ್ಲಿ ನಡೆಯುತ್ತಿದ್ದಂತೆ ದೂರದೂರದ ಗಣ್ಯ ಆಸಕ್ತರೂ ಭೇಟಿ ನೀಡುವುದು ಹೆಚ್ಚಾಯಿತು,

ಸಿಂಡಿಕೇಟ್ ಬ್ಯಾಂಕ್ ಪ್ರತಿಷ್ಠಾನದ ಶ್ರೀ ಟಿ.ಎ.ಪೈಯವರೂ ತಮ್ಮ ತಂಡದೊಂದಿಗೆ ಚೇರ್ಕಾಡಿಯವರ ತೋಟಕ್ಕೆ ಭೇಟಿ ನೀಡಿದರು. ದೇಶದಲ್ಲೆಲ್ಲಾ ಹಸಿರು ಕ್ರಾಂತಿಯ ಅಬ್ಬರದ ಕಾಲವದು. ತಾವೇ ರಚಿಸಿಕೊಂಡ 'ಸರ್ವೋದಯ ರಾಟೆ' ಯನ್ನು ಬಳಸಿ ಸುಮಾರು 45 ಅಡಿ ಆಳದ ತಮ್ಮ ಬಾವಿಯಿಂದ ನೀರೆತ್ತುತ್ತಿದ್ದರು. ಇಳಿ ವಯಸ್ಸಿನ ವ್ಯಕ್ತಿ ತಮ್ಮ ಮುರುಕಲು ರಾಟೆಯೊಂದಿಗೆ ಕಷ್ಟ ಪಡುವುದನ್ನು ಕಂಡ ಪೈಗಳು, ಬದಲಿಯಾಗಿ ಒಂದು ನೀರಾವರಿ ಪಂಪು ಸೆಟ್ಟನ್ನು ಉಚಿತವಾಗಿ ಅಳವಡಿಸಿ ಕೊಡುವುದಾಗಿ ಮುಂದೆ ಬಂದರು. ತಮ್ಮ ರಾಟೆಯನ್ನು ಅಪಾರ್ಥವಾಗಿ ಪರಿಗಣಿಸಲ್ಪಟ್ಟಿದ್ದನ್ನು ಕಂಡು, ಪಂಪು ಸೆಟ್ಟಿನ ಕೊಡುಗೆಯನ್ನು ವಿನಯದಿಂದಲೇ ತಿರಸ್ಕರಿಸಿದರು. ಹೀಗೆ ಉಚಿತವಾಗಿ ಜಮೀನು ಕೊಡುವವರು, ಪಂಪು ಸೆಟ್ಟು ಕೊಡುವವರು ಮುಂದೆ ಬಂದರೆ, ಯಾರಾದರೂ ಭೂ ರಹಿತರಿಗೆ, ಬಡವರಿಗೆ ಅವುಗಳನ್ನು ಕೊಡಮಾಡಬೇಕೆಂದು ಕೇಳಿಕೊಳ್ಳುತ್ತಾರೆ. ಯಾಕೆಂದರೆ ನನ್ನಲ್ಲಿ ಬೇಕಾಗುವಷ್ಟಿದೆ. ಉಚಿತವಾಗಿ ನನಗ್ಯಾವ ಸವಲತ್ತೂ ಬೇಕಾಗಿಲ್ಲ ತಮ್ಮ 'ಸರ್ವೋದಯ ರಾಟೆಯು' ಒಂದು ಅನಿವಾರ್ಯ ಪರಿಸ್ಥಿತಿಯಲ್ಲಿ ಆವಿಷ್ಕಾರ ವಾದದ್ದು, ಅದಕ್ಕೆ ಅದರದ್ದೇ ಆದ ಮಹತ್ವವಿದೆ. ಅದು ತನ್ನದೆಂಬ ಅಭಿಮಾನ ಅಚಲವಾಗಿದೆ. ಎರಡನೆಯದಾಗಿ ನೀರೆತ್ತುವ ಪಂಪಿಗೆ ಬೇಕಾದ ಇಂಧನಕ್ಕಾಗಿ ನಾನೆಲ್ಲಿಗೆ ಹೋಗಲಿ, ಅದಕ್ಕಾಗಿ ಯಾಕೆ ಖರ್ಚು ಮಾಡಬೇಕು ಅಲ್ಲದೇ ಎಷ್ಟು ಕಾಲ ಮಾನವ ಅದನ್ನು ನಂಬಿ ಕೃಷಿಮಾಡುತ್ತಿರಬಹುದೆಂಬ ಮೂಲಭೂತ ಪ್ರಶ್ನೆಯನ್ನೇ ನಮ್ಮ ಮುಂದಿಡುತ್ತಾರೆ. *ಹಾಗಾಗಿ ಸ್ವಾವಲಂಬೀ ಕೃಷಿ ಸ್ಥಳೀಯ ನೈಸರ್ಗಿಕ ಸಂಪನ್ಮೂಲಗಳನ್ನೇ ಆಧರಿಸಿರಬೇಕು. ಆಧುನಿಕ ಕೃಷಿಯ ಪರಾವಲಂಬಿ ಸಂಸ್ಕೃತಿಯನ್ನು ಚೇರ್ಕಾಡಿಯವರು ತಿರಸ್ಕರಿಸುತ್ತಾರೆ. ಆಧುನಿಕ ಮಾರುಕಟ್ಟೆ, ಆರ್ಥಿಕತೆ ರೈತರನ್ನು ಹಾಳುಮಾಡಿದೆ ಎನ್ನುತ್ತಾರೆ. ಪ್ರಪಂಚ ಸರಕು ಸಂಸ್ಕೃತಿಯ ಪ್ರವಾಹದೊಳಗೆ ಬಳಲುತ್ತಿದೆ. ಕೃಷಿರಂಗ ತನ್ನತನ ಕಳೆದುಕೊಂಡಿದೆ.*

ಬ್ಯಾಂಕು, ಕಾರ್ಖಾನೆಗಳಿಗೆ ಬಡ ರೈತರ ಉತ್ಪನ್ನದ ದೊಡ್ಡಮೊತ್ತವೇ ವರ್ಗಾವಣೆಯಾಗುತ್ತದೆ ಹಾಗಾಗಿ ಕೃಷಿಕರು ಸೋತು ಹೋಗುತ್ತಿದ್ದಾರೆ. ಸದಾ ಸಾಲಗಾರರಾಗಿಯೇ ಉಳಿದು ಕೊಳ್ಳುತ್ತಾರೆ ಎಂದು ಅಭಿಪ್ರಾಯಪಡುತ್ತಾರೆ ಚೇರ್ಕಾಡಿಯವರು. ಒಮ್ಮೆ ಕುಂದಾಪುರ ಕಡೆಯಲ್ಲಿ ದೊಡ್ಡ ವ್ಯಕ್ತಿಯೊಬ್ಬರು ಚೇರ್ಕಾಡಿಯವರನ್ನುದ್ದೇಶಿಸಿ. "ನಿಮ್ಮ ಬಗ್ಗೆ ಕೇಳಿದ್ದೇನೆ, ನಿಮಗೆ ಎಷ್ಟು ಜಮೀನಿದೆ" ಎಂದು ಕೇಳಿದರು. ಅದಕ್ಕುತ್ತರವಾಗಿ ನನ್ನಲ್ಲಿ ಒಂದೆರಡು ಎಕ್ರೆ ಮಾತ್ರ ಇದೆ, ಎಂದರು. ಪರಸ್ಪರ ಮಾತು ಕತೆಗಳ ಬಳಿಕ ತಾನೂ ಜಮೀನುದಾರನೆಂದು ಆ ವ್ಯಕ್ತಿ ಹೇಳಿಕೊಂಡರು, ಎಷ್ಟು ಎಕ್ರೆ ಜಮೀನಿದೆ ಎಂಬ ಚೇರ್ಕಾಡಿಯವರ ಪ್ರಶ್ನೆಗೆ ಆತ "ಸುಮಾರು ಹತ್ತು ಹದಿನೈದು ಎಕ್ರೆ" ಅಂದರು. ಹಾಗಾದರೆ ಎಷ್ಟು ಲಾಭ ಪಡೆಯುತ್ತೀರಿ? ಎಂದರೆ ಆತ "ಇಲ್ಲ.. ನಷ್ಟದಲ್ಲೇ ಸಾಗುತ್ತಿದೆ" ಅಂದರು "ಹಾಗಾದರೆ ನೀವ್ಯಾಕೆ ಕೃಷಿ ಮಾಡುತ್ತೀರಿ ?" ಎಂದು ಮರು ಪ್ರಶ್ನೆ ಹಾಕಿದಾಗ ಅವರಲ್ಲಿ ಉತ್ತರವಿರಲಿಲ್ಲ. ಇದು ನಮ್ಮ ಬಹುತೇಕ ಕೃಷಿಕರ ಪರಿಸ್ಥಿತಿ.

> **ಕೃಷಿ ಲಾಭದಾಯಕವಾಗಬೇಕಾದರೆ ಹೆಚ್ಚು ಜಮೀನು ಹೊಂದಿರಬೇಕಾಗಿಲ್ಲ ಎಂಬುದೇ ಚೇರ್ಕಾಡಿಯವರ ಸಾಧನೆ. ಹೆಚ್ಚು ವಿಸ್ತಾರವಾದ ಸಾಗುವಳಿ ಅಂದರೆ ಹೆಚ್ಚು ಸಾಲ, ಹೆಚ್ಚು ಭೂಬಳಕೆ, ಹೆಚ್ಚು ಶ್ರಮದ ವಿನಿಯೋಗ, ಹೆಚ್ಚು ಬಂಡವಾಳ ತೊಡಗಿಸುವಿಕೆ, ಹೆಚ್ಚು ಸಾಲ, ಹೆಚ್ಚು ಬಡ್ಡಿ ಹೊರೆ, ನಿರ್ವಹಣಾ ಒತ್ತಡ, ಹೆಚ್ಚಿನ ಮಾನಸಿಕ ಆತಂಕ ಹೀಗೇ ಎಲ್ಲೆಮೀರಿದ ಪರಿಸ್ಥಿತಿಯಲ್ಲಿ ಅಂತಿಮ ಲಾಭಗಳಿಕೆ ಕನಿಷ್ಠವಾಗುತ್ತಾ ಬರುತ್ತದೆ.**

ಬದಲಿಗೆ ನಮ್ಮ ರೈತರ ಸಣ್ಣ ಜಮೀನು ಅಧಿಕ ಗಳಿಕೆ ಮತ್ತು ಉಳಿಕೆ ಒದಗಿಸಬಲ್ಲದು. ಹಾಗಾಗಿ ಸಣ್ಣ ಹಿಡುವಳಿದಾರರಿಗೆ, ಬಡ ರೈತರಿಗೆ, ಸ್ವಂತ ದುಡಿಮೆಗಾರರಿಗೆ ಚೇರ್ಕಾಡಿ ವಿಧಾನ ಅತ್ಯಂತ ಸೂಕ್ತವಾದುದು.

ಏಕೆಂದರೆ ರೈತ ಮತ್ತು ನೆಲದ ನಡುವೆ ಬೆಳೆದಿರುವ ಆತಂಕಕಾರಿ ಮಧ್ಯವರ್ತಿಗಳ ಹಿಡಿತದಿಂದ ಹೊರಗುಳಿಯುವುದು ಸಾಧ್ಯವಿದೆ. ಇದೇ ಸ್ವಾವಲಂಬಿ ಕೃಷಿ ಎಂಬುದಾಗಿ ಚೇರ್ಕಾಡಿಯವರು ವಿವರಿಸುತ್ತಾರೆ.

ಚೇರ್ಕಾಡಿ ವಿಧಾನವು ಬಂಡವಾಳರಹಿತ ವ್ಯವಸಾಯ ಮಾತ್ರವಲ್ಲದೇ ಕನಿಷ್ಠ ನೈಸರ್ಗಿಕ ಸಂಪನ್ಮೂಲ ಹೊಂದಿರುವ ಬರಡು ಭೂಮಿಯಲ್ಲೂ ಬೇಸಾಯ ಸಾಧ್ಯ ಎಂಬುದನ್ನು ಸಾಬೀತುಪಡಿಸುತ್ತದೆ. ಇದರಿಂದಾಗಿ ಬಂಜರು ಭೂಮಿಯೂ ಫಲವತ್ತಾಗಿ ಕೃಷಿಯೋಗ್ಯ ಜಮೀನಾಗಿ ಪರಿವರ್ತನೆಯಾಗುತ್ತದೆ.

ನಮ್ಮಲ್ಲಿ ಭತ್ತ ಬೇಸಾಯವೆಂದರೆ ನೀರು ನಿಲ್ಲಿಸಿ ಕೃಷಿ ಮಾಡುವುದು. ಹೆಚ್ಚು ನೀರಾಶ್ರಯವುಳ್ಳ ತಗ್ಗು ಭೂಮಿಯ ಒಂದನೇ ವರ್ಗದ ಗದ್ದೆಗಳೇ ಆಗಬೇಕು. ನೀರಾಶ್ರಯವಿಲ್ಲದ ಮಕ್ಕಿ/ಮಜಲು ಗದ್ದೆಗಳಾದರೆ ಮಳೆಗಾಲದಲ್ಲಿ ಮಾತ್ರ ಭತ್ತ ಬೆಳೆಸಬಹುದು ಎಂಬುದು ನಮ್ಮ ರೈತರ ಸಾಮಾನ್ಯ ನಂಬಿಕೆ. ಈ ಹಿನ್ನಲೆಯನ್ನು ಗಮನದಲ್ಲಿಟ್ಟುಕೊಂಡಾಗ ಚೇರ್ಕಾಡಿ ಪದ್ಧತಿ ಭಿನ್ನವಾಗಿ ತೋರುತ್ತದೆ. *ನೀರು ನಿಲ್ಲಿಸದೇ ಭತ್ತ ಬೆಳೆಯುವುದನ್ನು ಸಾಧಿಸಿ ತೋರಿಸಿದವರೇ ಅವರು. ಅಲ್ಲದೇ ನೆಲ ಸಮತಟ್ಟಾಗಿರಬೇಕಾಗಿಯೂ ಇಲ್ಲ. ಅಸಮಾನ ಮೇಲ್ಮೈಯ, ಏರುತಗ್ಗಿನ ನೆಲವೂ ಇಲ್ಲಿ ಉಪಯುಕ್ತ. ಹಾಗಾಗಿ ಚೇರ್ಕಾಡಿ ನಿಯಮ 'ಗದ್ದೆಯ ಕಲ್ಪನೆ' ಗಿಂತ ಭಿನ್ನವಾದದ್ದು.*

ಚೇರ್ಕಾಡಿ ವಿಧಾನದಲ್ಲಿ ಅದೇ ನೆಲದಲ್ಲಿ ವರ್ಷಬಿಟ್ಟು ವರ್ಷಕ್ಕೆ ಭತ್ತ ಬೆಳೆಯುವುದು ಸಾಧ್ಯ ಅಲ್ಲದೇ ನಡುವೆ ತರಕಾರಿ, ಗೆಡ್ಡೆಗೆಣಸು ಕೂಡಾ ಬೆಳೆಯಬಹುದಾಗಿದೆ. ಇದರಿಂದಾಗಿ ಮಣ್ಣಿನ/ಭೂ ಸಾರ ಹೆಚ್ಚುವುದು. ವೈವಿಧ್ಯಮಯ ಬೆಳೆಯೇ ಚೇರ್ಕಾಡಿ ಲಕ್ಷಣ. ಇದಕ್ಕಾಗಿ, ಚೇರ್ಕಾಡಿಯವರು ತಮ್ಮ ಜಮೀನನ್ನು ಎರಡು ಸಮಭಾಗಮಾಡಿ ಒಂದರ್ಧಕ್ಕೆ ಭತ್ತ ಬೆಳೆಸಿ ಉಳಿದರ್ಧದಲ್ಲಿ ಇತರ ತರಕಾರಿ, ಗೆಡ್ಡೆಗೆಣಸು ಮಾಡುತ್ತಾರೆ. ಮನೆ ಬಳಕೆಗೆ ಅವಶ್ಯವಾದುದೆಲ್ಲಾ ಉತ್ಪಾದನೆಯಾಗುತ್ತದೆ. ಮುಂದಿನ ವರ್ಷವೂ

ಇದೇ ಕ್ರಮ ಆದರೆ ನೆಲಮಾತ್ರ ಬದಲಾಯಿಸಲಾಗುತ್ತದೆ. ಹೀಗೆ ಮಿತಿಯಲ್ಲಿರುವ ನೆಲದ ಬಹುರೂಪಿ ಉಪಯೋಗ ಪಡೆಯಲಾಗುತ್ತದೆ. ಚೇರ್ಕಾಡಿ ಯವರ ಪ್ರಕಾರ ಅವರು ಜಮೀನಿಗೆ ದೂರದ ಒಡೆಯರಲ್ಲ, ಬದಲಿಗೆ ಸ್ಥಳದಲ್ಲೇ ಬದುಕುತ್ತಿರುವ ಒಂದು ಜೀವಿ.

ಆ ತುಂಡು ನೆಲದ ಮೇಲೆ ಬೆಳೆದಿರುವ ಗಿಡ, ಮರ, ಬಳ್ಳಿಗಳಂತೆ, ಮಣ್ಣನೊಂದಿಗಿರುವ ಎರೆಹುಳು, ಕೀಟ, ಇರುವೆ, ಅಲ್ಲೇ ಹಾರಾಡುತ್ತಿರುವ ಪಕ್ಷಿಗಳಿಗಿಂತ ಆತನೂ ಭಿನ್ನವಲ್ಲ.

ರೈತ ಮರಗಳಂತೆ ನಿಶ್ಚಲವಾಗಿರದೇ ಸದಾ ಚಲನಶೀಲನಾಗಿರುತ್ತಾನೆ. ಹಾಗಾಗಿ ರೈತ ನೆಲದಿಂದ ಪ್ರತ್ಯೇಕವಾಗಿ ಉಳಿಯದೇ ತಾನೂ ಅದರ ಒಂದು ಭಾಗವೆಂಬ ರೀತಿಯಲ್ಲಿ ಬದುಕುವುದು ಮತ್ತು ಬದುಕುವುದಕ್ಕಾಗಿಯೇ ಆಹಾರೋತ್ಪಾದನೆ ಮಾಡುವುದೇ ಬೇಸಾಯ. ನಾವು ನೆಲವನ್ನು ಪ್ರೀತಿಸಿದರೆ ಮಾತ್ರ ನಮಗೆ ಬೇಕಾದ ಹಣ್ಣನ್ನು ಅದು ಕೊಡುತ್ತದೆ. ನೆಲದ ಮೇಲೆ ಮಾನವನ ದಬ್ಬಾಳಿಕೆ ಸಲ್ಲದೆಂಬುದೇ ಚೇರ್ಕಾಡಿಯವರ ಅಭಿಮತ ಸರಳವಾಗಿ ಬದುಕು ಸಾಗಿಸುವುದರಿಂದ ಮಾತ್ರ ಸ್ವಾವಲಂಬನೆ ಸಾಧ್ಯ. 'ಬೇಕು' ಗಳಿಗೆ ಮಿತಿ ಹಾಕದಿದ್ದರೆ ನಾವು ಸದಾ ಪರಾವಲಂಬಿಗಳಾಗಿರುತ್ತೇವೆ.

ಪ್ರಕೃತಿಯ ಲಯ-ನಿಯಮಗಳನ್ನು ನಾವು ಅನುಸರಿಸಬೇಕೇ ವಿನಹ, ನಮ್ಮ ಗತ್ತುಗಾರಿಕೆ, ತೆವಲುಗಳಿಗೆ ಪ್ರಕೃತಿಯನ್ನು ಬಲವಂತ ಮಾಡುವುದು ದುಸ್ಸಾಹಸವೆಂದು ಚೇರ್ಕಾಡಿ ಹೇಳುತ್ತಾರೆ. ಬೇಸಾಯವು ತನ್ನಿಚ್ಛೆಗೇ ಆಗುವಂತೆ ನಾವು ಸಹಕರಿಸಬೇಕು, ಬೀಜವೊಂದು ಮೊಳೆಯುವುದಕ್ಕೆ, ಸಸಿಯೊಂದು ಬೆಳೆಯುವುದಕ್ಕೆ ನಾವು ಅವಕಾಶಮಾಡಿಕೊಡುವುದೇ ಕೃಷಿ ಎನ್ನುತ್ತಾರೆ ಶ್ರೀ ಚೇರ್ಕಾಡಿ. ತಮ್ಮ ಯಾವುದೇ ಕೃಷಿಗೆ ಹಾರೆ, ಪಿಕಾಸಿಗಿಂತ ದೊಡ್ಡ ಸಾಧನವನ್ನು ಅವರು ಬಳಸುವುದಿಲ್ಲ. ಉಳುಮೆಗಾಗಿ ಎತ್ತು, ಟಿಲ್ಲರ್, ಟ್ರಾಕ್ಟರ್‌ಗಳನ್ನು ಬಳಸುವುದೇ ಅನಗತ್ಯದ ಕಸರತ್ತು. ಪರಂಪರೆಯ ಬೇಸಾಯದಲ್ಲಿ ಎತ್ತಿಗೆ ಪ್ರಮುಖ ಪಾತ್ರವಿದ್ದರೆ ಇಲ್ಲಿ ಅದೂ ಅಪ್ರಸ್ತುತ. ಆದರೆ ಜಾನುವಾರುಗಳು ರೈತನ ಸಹಕಾರಿ ಜೀವಿಗಳೆಂದು ಅವರು ಪರಿಗಣಿಸುತ್ತಾರೆ. ಹಟ್ಟಿ ಗೊಬ್ಬರಕ್ಕೆ, ಹಾಲಿನ ಉತ್ಪಾದನೆಗೆ ಜಾನುವಾರು ಬೇಕಾಗುತ್ತದೆ. ಹೀಗಿದ್ದರೂ, ಗೊಬ್ಬರಕ್ಕಾಗಿ ಅವರು ಜಾನುವಾರುಗಳನ್ನೇ ನಂಬಿ ಕುಳಿತಿಲ್ಲ. ಕರಗುವ, ಕೊಳೆಯುವ ಯಾವುದೇ ಸಾವಯವ ಪದಾರ್ಥಗಳನ್ನು ಬಳಸಿ ಕೃತಕವಾಗಿಯೇ ಗೊಬ್ಬರ ತಯಾರಿಸಿಕೊಳ್ಳುತ್ತಾರೆ. ಅಲ್ಲದೇ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳನ್ನು ಅವರು ಬಲವಾಗಿ ವಿರೋಧಿಸುತ್ತಾರೆ. ಬಂಡವಾಳ ಪ್ರಧಾನ ಯಾಂತ್ರೀಕರಣದ ಬಗ್ಗೆಯೂ ಅಷ್ಟೇ, ಕೀಟನಾಶಕಗಳ ಸಿಂಪರಣೆಯ ಹೊರತಾಗಿಯೇ ಬೇಸಾಯ ಮಾಡುವುದು ಸಾಧ್ಯವೆಂದು ಇವರು ಸಾಬೀತುಪಡಿಸುತ್ತಾರೆ. ತಮ್ಮ ತೋಟದಲ್ಲಿ ಯಾವುದೇ ರೋಗ ಭಾದೆ ಕಂಡುಬರುವುದಿಲ್ಲವೆನ್ನುತ್ತಾರೆ. ಅದೆಂತಹ ಆತಂಕ ಬಂದರೂ ಬೂದಿ, ಸೆಗಣಿ ನೀರಿನಲ್ಲೇ ಎಲ್ಲವನ್ನೂ ನಿಯಂತ್ರಿಸಬಲ್ಲ ಮಾಂತ್ರಿಕತೆ ಇದರಲ್ಲಿದೆ. ಇದೇ ಕೀಟ ನಾಶಕಗಳು. ಈ ರೀತಿಯಲ್ಲಿ ಅದೆಷ್ಟೋ ಮೊತ್ತದ ಖರ್ಚಿನ ಹಣವನ್ನು ಉಳಿಸಿಬಿಡುತ್ತಾರೆ. ಚೇರ್ಕಾಡಿಯವರ ಮೇಲೆ ಮಹಾತ್ಮಾ ಗಾಂಧಿ ಹಾಗೂ ವಿನೋಬಾ ಬಾವೆಯವ ಗಾಢವಾದ ಪ್ರಭಾವವಿರುವುದನ್ನು ನಾವು ಗಮನಿಸಬಹುದು. ಸರಳತೆ ಹಾಗೂ ಸ್ವಾವಲಂಬನೆಯನ್ನು ಚಾಚೂ ತಪ್ಪದೇ ಪಾಲಿಸಬಲ್ಲ ಜೀವ ಚೈತನ್ಯ ಇವರಲ್ಲಿದೆ. ಗಾಂಧಿವಾದದ ಸಾರವನ್ನು ಆಚರಣೆಯಲ್ಲಿರಿಸಿ ಇತರರಿಗೂ ಮಾದರಿಯಾಗಬಲ್ಲವರು. ಸರ್ವೋದಯ ಆಂದೋಲನದ ಪ್ರವಾಹದ ಕಾಲದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಮಾತ್ರವಲ್ಲದೇ ತಾನಿರುವ ಪರಿಸರದಲ್ಲೇ ಅದಕ್ಕೊಂದು ಆಯಾಮವನ್ನು ಸೃಷ್ಟಿಸಿಕೊಂಡಿದ್ದಾರೆ. ತಾವು ಬದುಕಿದ ವಿಧಾನವೇ ಒಂದು ಉತ್ಕೃಷ್ಟ ಪ್ರಯೋಗ, ಆ ದಾರಿಯಲ್ಲೇ ಬದುಕಿನ ಪರಿಪೂರ್ಣತೆಯನ್ನು ಗಳಿಸಿಕೊಂಡಿದ್ದಾರೆ.

ಉತ್ಪಾದನೆ ಮತ್ತು ಗಳಿಕೆ ಮಾತ್ರ ಚೇರ್ಕಾಡಿಯವರ ಸೂತ್ರವಲ್ಲ ಉಳಿತಾಯವೂ ರೈತನ ಬಹುಮುಖ್ಯ ಲಕ್ಷಣವೆನ್ನುತ್ತಾರೆ. ಉಳಿತಾಯವೇ ರಾಷ್ಟ್ರದ ಸಂಪತ್ತನ್ನು ವೃದ್ಧಿಸುತ್ತದೆ ಎನ್ನುತ್ತಾರೆ.

ನೀವೆಷ್ಟು ಉಳಿಸಿದ್ದೀರೆಂದು ಪ್ರಶ್ನಿಸಿದರೆ, ಸುಮಾರು ಎಂಟು ಲಕ್ಷಗಳಿರಬಹುದೆಂದು ಮೆಲ್ಲನೆ ಉಸುರುವ ಇವರು, ಅಸುಪಾಸಿನ ಎಲ್ಲಾ ಬ್ಯಾಂಕುಗಳಲ್ಲೂ ಜಮೆ ಮಾಡಿಕೊಂಡಿದ್ದಾರೆ. ಇಷ್ಟೆಲ್ಲಾ ಬೆಳೆದಿರುವುದು ಈ ತುಂಡು ಒಣ ಭೂಮಿಯಿಂದಲೇ ಎಂದು ಯೋಚಿಸಿದಾಗ ಚೇರ್ಕಾಡಿಯವರ ಉತ್ಪಾದನಾ ವಿಧಾನದ ಮಹತ್ವ ತಿಳಿಯುವುದು. ಬಹುಷಃ ಈ ಪ್ರದೇಶದಲ್ಲಿ ಇಷ್ಟೊಂದು ಮೊತ್ತವನ್ನು ಯಾವನೇ ಕೃಷಿಕ ಬೆಳೆಸಿ ಉಳಿಸಿರಲಾರ.

ಇಷ್ಟೆಲ್ಲಾ ಇದ್ದರೂ ತನ್ನ ಸಿದ್ಧಾಂತ ತನಗಾಗಿ ಎಂಬ ಬಲವಾದ ನಂಬಿಕೆ ಹೊಂದಿರುವ ಇವರು, ಇತರರೂ ತನ್ನಂತೆಯೇ ಎಂದು ಬಗೆದರೂ ಯಾರ ಮೇಲೂ ಹೇರಲು ಇಷ್ಟಪಡುವುದಿಲ್ಲ. ಅವರವರೇ ಒಲಿಸಿಕೊಳ್ಳಬೇಕು. ಪ್ರತಿಯೊಬ್ಬರೂ ಸ್ವಾವಲಂಬನೆಯ ಸೃಜನಶೀಲತೆಯುಳ್ಳವರಾಗಿದ್ದಾರೆಂದು ಅವರು ನಂಬಿದ್ದಾರೆ. ಯಾವುದೇ ವಿಷಮ ಪರಿಸ್ಥಿತಿಯಲ್ಲೂ ಬದುಕಬಲ್ಲ, ಹೊಂದಿಸಿಕೊಳ್ಳಬಲ್ಲ ನೀರಿನಂತಹ ಗುಣ ಇವರದು. ತಾನು ಪ್ರಾಯೋಗಿಕವಾಗಿ ಸಾಧಿಸಿದ್ದನ್ನು ಇತರರೂ ಅನುಸರಿಸಿದರೆ ಖಂಡಿತಾ ಒಳ್ಳೆಯದಾಗುತ್ತದೆಂಬ ಅನ್ನಿಸಿಕೆ ಇದರಲ್ಲಿದೆ.

ವಿಳಾಸ
ಚೇರ್ಕಾಡಿ ರಾಮಚಂದ್ರರಾವ್
ಖಾದಿಗ್ರಾಮ, ಅಂಚೆ ಚೇರ್ಕಾಡಿ
ವಯಾ ಬ್ರಹ್ಮಾವರ - **576215** ದ.ಕ.



ಗ್ರಂಥ ಅವಲೋಕನ :

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿನ-ಕೃಷಿ ವಿಧಾನಗಳು

ಬೆಳೆಯುವ ಸಂಸ್ಕೃತಿ ಅಥವಾ ಬೆಳೆಯುವ ವಿಧಾನವು ನವಶಿಲಾಯುಗ ಕಾಲದಿಂದಲೂ ನಮ್ಮಲ್ಲಿ ಪ್ರಚಲಿತವಿದ್ದ ಅನೇಕ ಉದಾಹರಣೆಗಳು ಪುರಾತತ್ವ ಉತ್ಖನನದಲ್ಲಿ ದೊರೆತಿವೆ. ಕೃಷಿಯ ಮಹತ್ವವನ್ನು, ನಮ್ಮ ಪೂರ್ವಜರು ಅನುಸರಿಸಿಕೊಂಡು ಬಂದ ಕೃಷಿ ಪದ್ಧತಿಗಳನ್ನು, ವಿಧಿ ವಿಧಾನಗಳನ್ನು, ತಂತ್ರ ಜ್ಞಾನವನ್ನು ಕುರಿತಾಗಿ ಅನೇಕ ಮಹತ್ವದ ವಿವರಗಳನ್ನು ನಮ್ಮ ಪ್ರಾಚೀನರು ದಾಖಲಿಸಿದ್ದಾರೆ. ಪ್ರಸ್ತುತ ಕೌಟಿಲ್ಯನ ಅರ್ಥಶಾಸ್ತ್ರ ಗ್ರಂಥದಲ್ಲಿ ಉಲ್ಲೇಖಿತವಾಗಿರುವ ಕೃಷಿ ಪದ್ಧತಿಯ ವಿವರಗಳನ್ನು ವಿಶ್ಲೇಷಿಸುವ ಒಂದು ಕಿರು ಪ್ರಯತ್ನ ಈ ಲೇಖನದ ಉದ್ದೇಶವಾಗಿದೆ.

ಸುಮಾರು 2300 ವರ್ಷಗಳ ಹಿಂದೆ ಕೌಟಿಲ್ಯನೆಂಬ ಮಹಾತ್ಮನಿಂದ ರಚಿತವಾದ ಅರ್ಥಶಾಸ್ತ್ರ ಗ್ರಂಥದಲ್ಲಿ ಕೃಷಿಯನ್ನು 'ವಾರ್ತಾ' ಎಂದು ಕರೆಯಲಾಗಿದ್ದು ಸರ್ವ ಸಂಪತ್ತಿಗೂ, ಸುಖಕ್ಕೂ, ಕೃಷಿಯೇ ಮೂಲವೆಂಬುದಾಗಿ ಅಭಿಪ್ರಾಯ ಪಡಲಾಗಿದೆಯಲ್ಲದೆ ಕೃಷಿ ಇಲಾಖೆ, ಕೃಷಿ ಅಧಿಕಾರಿಯ ಕರ್ತವ್ಯಗಳು, ಮಳೆಗಾಲದ ವಿವರಗಳು, ಮಳೆಯ ಮುನ್ಸೂಚನೆಯ ಊಹೆ, ಬೆಳೆ ಬಿತ್ತುವ ಸ್ಥಳ ನಿರ್ದೇಶನ, ಬೀಜ ಸಂರಕ್ಷಣಾ ವಿಧಾನ ಹಾಗೂ ಸಾಗುವಳಿಯನ್ನು ಹೆಚ್ಚಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತಾಗಿ ಸುದೀರ್ಘವಾದ ವಿವರಣೆಗಳನ್ನು ನೀಡಲಾಗಿದೆ.

ಕೃಷಿ ಇಲಾಖೆ :

'ಅರ್ಥಶಾಸ್ತ್ರ' ಗ್ರಂಥದಲ್ಲಿ ಕೃಷಿ ವ್ಯವಹಾರಗಳ ಉಸ್ತುವಾರಿಗಾಗಿ ಒಂದು ಪ್ರತ್ಯೇಕವಾದ ಇಲಾಖೆಯೇ ಇದ್ದು 'ಕೃಷಿ ವಿಜ್ಞಾನ' (ಕೃಷಿ ತಂತ್ರ) ಹಾಗೂ 'ಸಸ್ಯ ವಿಜ್ಞಾನ' (ಗುಲ್ಮವೃಕ್ಷಾಯುರ್ವೇದ) ದಲ್ಲಿ ಪರಿಣಿತನಾದ ಅರ್ಹ ವ್ಯಕ್ತಿಯನ್ನು 'ಕೃಷಿ ನಿರೀಕ್ಷಕ' ಎಂದು (Supt. of Agriculture) ನಿಯುಕ್ತಿಗೊಳಿಸಬೇಕೆಂದು ನಿರ್ದೇಶನವಿದೆ.

ಕೃಷಿ ನಿರೀಕ್ಷಕನ ಕರ್ತವ್ಯಗಳು :

ಕೃಷಿ ನಿರೀಕ್ಷಕನು ಸಕಾಲದಲ್ಲಿ ಬೀಜಗಳನ್ನು ಸಂರಕ್ಷಿಸುವ, ಬಿತ್ತನೆ ಮಾಡಿಸುವ, ಕೃಷಿಗೆ ಅವಶ್ಯಕವಿರುವ ಕಾರ್ಮಿಕರನ್ನು ದನಗಳನ್ನು ಸಂಗ್ರಹಿಸುವ ಹಾಗೂ ಕೃಷಿ ಸಾಧನಗಳನ್ನು ಸಿದ್ಧಗೊಳಿಸುವ ಬಡಿಗ, ಕಂಬಾರ, ರಂದ್ರಗಾರ ಮುಂತಾದ ಕುಶಲ ಕರ್ಮಿಗಳಿಂದ ಸಲಕರಣೆಗಳನ್ನು ಸಕಾಲದಲ್ಲಿ ಪಡೆಯುವ ಹಾಗೂ ಅತ್ಯುತ್ತಮವಾದ ಫಸಲನ್ನು ಪಡೆಯಲು ಅವಶ್ಯವಿರುವ ಎಲ್ಲ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡು ಸಕಾಲದಲ್ಲಿ ಅನುಷ್ಠಾನಕ್ಕೆ ತರುವ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದು ಸ್ಪಷ್ಟವಾಗಿ ನಿರ್ದೇಶನವನ್ನು ನೀಡಲಾಗಿದೆ.

ಮಳೆಗಾಲದ ವಿವರಗಳು :

ಮಳೆಗಾಲದ ಪ್ರಾರಂಭದ ತಿಂಗಳುಗಳಲ್ಲಿ ಹಾಗೂ ಕೊನೆಯ ತಿಂಗಳಿನಲ್ಲಿ 1/3 ರಷ್ಟು ಹಾಗೂ ಮಧ್ಯಭಾಗದಲ್ಲಿ 2/3 ರಷ್ಟು ಅವಶ್ಯಕ ಮಳೆಯು ಬಿದ್ದರೆ ಅಥವಾ ಮೋಡಗಳು ನಿರಂತರವಾಗಿ 7 ದಿವಸಗಳ ಮಳೆ ಸುರಿಸಿ ಮಧ್ಯೆ ಮಧ್ಯೆ ಹನಿಮಳೆ ಮತ್ತು ಬಿಸಿಲುಮಳೆ (ಸೂರ್ಯಕಿರಣದೊಂದಿಗೆ ಬೀಳುವ ಮಳೆ ಬಿದ್ದುದಾದರೆ ಅಂಥ ಮಳೆಯನ್ನು ಸಮರ್ಪಕ ಮಳೆಗಾಲವೆಂದು ಕೌಟಿಲ್ಯನು ಪರಿಗಣಿಸಿದ್ದಾನೆ. ಗಾಳಿಯಿಲ್ಲದೆ, ಬಿಸಿಲು ಮಳೆ ಬಿದ್ದುದೇ ಆದರೆ ಮೂರು ಬಾರಿ ಭೂಮಿಯನ್ನು ಉಳಲು ಅನುಕೂಲವಾಗಿ ಒಳ್ಳೆಯ ಬೆಳೆಯನ್ನು ನಿರೀಕ್ಷಿಸಬಹುದೆಂದು ಉಲ್ಲೇಖಿಸಿದ್ದಾನೆ. ಕೃಷಿ ನಿರೀಕ್ಷಕನು ಆಯಾ ಭೂ ಲಕ್ಷಣಗಳಿಗನುಗುಣವಾಗಿ ಹಾಗೂ ಆಯಾ ಪ್ರದೇಶಗಳ ಮಳೆಯ ಪ್ರಮಾಣಕ್ಕೆ ಅನುಗುಣವಾಗಿ ಬೀಜಗಳನ್ನು ಬಿತ್ತಿಸಬೇಕೆಂದು ನಿರ್ದೇಶಿಸಿದ್ದಾನೆ.

ಮಳೆ ಹಾಗೂ ಬೆಳೆಗಳ ಮುನ್ಸೂಚನೆ :

ಗುರು ಗ್ರಹದ ಸ್ಥಾನ, ಚಲನೆ ಮತ್ತು ಗರ್ಭದಾನದಿಂದ, ಶುಕ್ರ ಗ್ರಹದ ಉದಯ ಅಸ್ತ ಹಾಗೂ ಚಲನೆಯಿಂದ ಮತ್ತು ಸೂರ್ಯನ ಸಹಜ ಹಾಗೂ ಅಸಹಜ ಬೆಳಕಿನ ಅಂಶಗಳಿಂದ ಮಳೆಯ ಪ್ರಮಾಣದ ಮುನ್ಸೂಚನೆಯನ್ನು ಹಾಗೂ ಸೂರ್ಯನಿಂದ ಬೀಜಗಳು ಅಂಕುರಗೊಳ್ಳುವುದನ್ನು, ಗುರುಗ್ರಹದ ಸ್ಥಾನದಿಂದ ಕಾಳುಗಳು ಪುಷ್ಟಿಗೊಳ್ಳುವುದನ್ನು ಊಹಿಸಬಹುದೆಂದು ಉಲ್ಲೇಖಿಸಿದ್ದಾನೆ.

ಬೆಳೆ ಬಿತ್ತುವ ಸ್ಥಳ ನಿರ್ದೇಶನ :

ನದಿಯ ದಡದ ಮೇಲಿನ ಭೂಮಿಯು ಬಳ್ಳಿಗಳಿಂದ ಪಡೆಯಬಹುದಾದ ಬೆಳೆಗಳನ್ನು (ಉದಾ : ಕುಂಬಳಕಾಯಿ, ಬೂದು ಕುಂಬಳಕಾಯಿ) ಬೆಳೆಯಲು, ಬಾವಿಯ ಸುತ್ತಲಿನ ಜಮೀನುಗಳು ತರಕಾರಿ, ಗೆಡ್ಡೆ ಗೆಣಸುಗಳನ್ನು ಬೆಳೆಯಲು ಹಾಗೂ ಇಳಿಜಾರು ಭೂಮಿಯಲ್ಲಿ ಹಸಿರು ಬೆಳೆಗಳನ್ನು, ವನಸ್ಪತಿಗಳನ್ನು, ಔಷಧ ಸಸ್ಯಗಳನ್ನು ಬೆಳೆಯಲು ಪ್ರಶಸ್ತವೆಂದು ನಿರ್ದೇಶಿಸಿದ್ದಾನೆ. ವನಸ್ಪತಿಗಳನ್ನು ಕುಂಡಗಳಲ್ಲಿ ಬೆಳೆಸುವ ಕುರಿತಾದ ಉಲ್ಲೇಖವು ಕೂಡಾ ದೊರೆಯುತ್ತದೆ.

ಬೀಜ ಸಂರಕ್ಷಣೆ ವಿಧಾನಗಳು :

ಆಹಾರ ಧಾನ್ಯದ ಬೀಜಗಳನ್ನು ಮಂಜು (Mist) ಮತ್ತು ಉಷ್ಣ (Heat) ವಾತಾವರಣದಲ್ಲಿ ಏಳು ರಾತ್ರಿ ತೆರೆದಿಡಬೇಕೆಂದು, ಕಬ್ಬಿನ ಮತ್ತು ಕಾಂಡ ಜಾತಿಯ ಸಸ್ಯದ ಪ್ರಸರಣಕ್ಕೆ ಕೊಯ್ದು ತುದಿಯ ಭಾಗದಲ್ಲಿ ಜೇನುತುಪ್ಪ, ಶುದ್ಧ ಬೆಣ್ಣೆ, ಹಂದಿ ಕೊಬ್ಬು (Fat of hogs) ಮತ್ತು ಆಕಳ ಸಗಣೆಯಿಂದ ಮೆತ್ತಬೇಕೆಂದೂ, ಗೆಡ್ಡೆಗಳುಳ್ಳ ಕಾಂಡದ ಬೀಜಗಳಿಗೆ ಜೇನುತುಪ್ಪ ಮತ್ತು ಶುದ್ಧ ಬೆಣ್ಣೆಯನ್ನು ಲೇಪಿಸಬೇಕೆಂದೂ, ಹಾಗೂ ಹತ್ತಿ ಬೀಜಗಳಿಗೆ ಸಗಣೆ ಲೇಪಿಸಿ ಸಂರಕ್ಷಿಸಿ ಇಟ್ಟುಕೊಂಡು ಸಕಾಲದಲ್ಲಿ ಬಿತ್ತನೆಮಾಡಬೇಕೆಂದು ಉಲ್ಲೇಖಿಸಿದ್ದಾನೆ.

ಹಾವುಗಳ ಕಾಟದಿಂದ ಮುಕ್ತಿ

ಬೆಳೆಯಲ್ಲಿ ಅಡಗಿರುವ ಹಾವುಗಳನ್ನು ದೂರ ಓಡಿಸಲು ಹತ್ತಿಯ ಬೀಜಗಳನ್ನು ಹಾಗೂ ಪೊರೆಯನ್ನು ಸುಡಬೇಕೆಂದೂ ಆ ವಾಸನೆಗೆ ಹಾವುಗಳು ದೂರ ಹೋಗುವವೆಂದು ತಿಳಿಸಿದ್ದಾನೆ.

ಸಾಗುವಳಿಗೆ ಪ್ರೋತ್ಸಾಹ

ಪಾಳುಬಿದ್ದ ಭೂಮಿಯನ್ನು ಸಾಗುವಳಿ ಭೂಮಿಯನ್ನಾಗಿ . ಪರಿವರ್ತಿಸಲು ಅನುಕೂಲವಾಗುವಂತೆ ಸರ್ಕಾರಿ ಭೂಮಿಯನ್ನು ಬೆಳೆಯ ಅರ್ಧ ಭಾಗದ ಹಂಚಿಕೆಯ ಒಡಂಬಡಿಕೆಯ ಮೇಲೆ ಮತ್ತು ಸ್ವತಂತ್ರವಾಗಿ ಭೂ ಸಾಗುವಳಿ ಮಾಡಲು ಇಚ್ಚಿಸುವವರಿಗೆ ಬೆಳೆಯ 1/4 ಅಥವಾ 1/6 ಭಾಗವನ್ನು ನಿಗದಿಪಡಿಸಿ ಅಥವಾ ಸಾಗುವಳಿ ಮಾಡುವವನಿಂದ ಆದಷ್ಟು ಬೆಳೆಯ ಭಾಗವನ್ನು ನಿಗದಿ ಪಡಿಸಿ ಭೂಮಿಯನ್ನು ಸಾಗುವಳಿಗೆ ನೀಡಬೇಕೆಂದು ತಿಳಿಸಿದ್ದಾನೆ.

ಮೇಲೆ ಚರ್ಚಿಸಿದ ವಿಷಯಗಳಲ್ಲದೇ ವಿವಿಧ ಮೂಲಗಳಿಂದ ನೀರಾವರಿಯನ್ನು ಅಳವಡಿಸಿಕೊಂಡಿರುವ ಜಮೀನುಗಳಿಗೆ ವಿಧಿಸುವ ತೆರಿಗೆಯ ಪ್ರಮಾಣ, ಬರಗಾದಲ್ಲಿ ಕೃಷಿಕನಿಗೆ ನೀಡುವ ಸಹಾಯ, ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳದಿದ್ದರೆ ತೆರಬೇಕಾದ ದಂಡದ ಪ್ರಮಾಣ ಮುಂತಾದ ವಿವರಗಳು ನಮಗೆ ದೊರೆಯುತ್ತವೆ.

ಲೇಖಕರು
ಬಿ.ಎಸ್.ಅಪರಂಜ
ಗಣಪತಿ ಗಲ್ಲಿ, ಗಣಪತಿ ದೇವಸ್ಥಾನ ಎದುರು
ಜಮಖಂಡಿ -587301 ಜಿಲ್ಲೆ : ವಿಜಾಪುರ

ಹಿತ್ತಲಗಿಡ ಸ್ಪರ್ಧೆ

ಹಿತ್ತಲಗಿಡಕ್ಕೆ ಕೃಷಿ, ಪಶುಪಾಲನೆ ಗ್ರಾಮೀಣ ಕಸುಬು, ಪರಿಸರ, ಪಕ್ಷಿಗಳ ಕುರಿತಾದ ಜನಪದ ಕಥೆ, ಲಾವಣಿ, ನಂಬಿಕೆ, ಹಾಡು, ಒಗಟು, ಗಾದೆಗಳನ್ನು ಬರೆದು ಕಳುಹಿಸಿರಿ. ಉತ್ತಮವಾದ ಮೊದಲ ಐದು ಬರಹಗಳಿಗೆ ಬೆಂಗಳೂರಿನ ಇಕ್ರಾ ಸಂಸ್ಥೆಯವರು ಪ್ರಕಟಿಸಿರುವ ಈ ಕೆಳಗಿನ ಮೂರು ಕನ್ನಡ ಪುಸ್ತಕಗಳನ್ನು ಬಹುಮಾನವಾಗಿ ನೀಡಲು ಆ ಸಂಸ್ಥೆಯವರು ಮುಂದೆ ಬಂದಿರುವರು.

ಪುಸ್ತಕಗಳು

೧. ಸಾವಯವ ಬೇಸಾಯ ಒಂದು ಒಳನೋಟ, ಲೇಖಕ ಎಸ್.ಎನ್. ಗೋಷ್

೨. ಕಾಂಪೋಸ್ಟ್ ಗೊಬ್ಬರ ಕಲೆ ಮತ್ತು ವಿಜ್ಞಾನ

೩. ರಾಸಾಯನಿಕಗಳು ಕೊಲ್ಲುತ್ತವೆ, ಎಸ್.ಎನ್. ಗೋಶ್

ಕೂಚುಭಟ್ಟ

ಪ್ರಾಚೀನ ಭಾರತದಲ್ಲಿ ಬೇಸಾಯ

ಇದು ಭಾರತೀಯ ಕೃಷಿ ಸಂಶೋಧನ ಸಂಸ್ಥೆಯು ಮೂಲತಃ ಇಂಗ್ಲೀಷ್ ಭಾಷೆಯಲ್ಲಿ ಪ್ರಕಟಿಸಿದ 'ಅಗ್ರಿಕಲ್ಚರ್ ಇನ್ ಎನ್ಸಿಯಂಟ್ ಇಂಡಿಯಾ' ಪುಸ್ತಕದ ಅನುವಾದ ಕೃತಿ.

ಮೂಲತಃ ಕೃಷಿ ಪ್ರಧಾನವಾದ ಭಾರತ ದೇಶದಲ್ಲಿ ವ್ಯವಸ್ಥಿತ ಕೃಷಿ ಮತ್ತು ಪಶುಸಂಗೋಪನೆಗಳು ವೇದಕಾಲಾರಂಭದಿಂದಲೇ ಪ್ರಾರಂಭವಾಗಿದ್ದುವು. ಜನ ಅರಣ್ಯಶಾಸ್ತ್ರದಲ್ಲೂ ಪರಿಣಿತರಾಗಿದ್ದರು. ಈ ವಿಚಾರವಾಗಿ ಋಗ್ವೇದ, ಅಥರ್ವಣ ವೇದಗಳಲ್ಲಿ ನೂರಾರು ಆಧಾರಗಳು ದೊರೆಯುತ್ತವೆ.

ಮಧ್ಯಕಾಲೀನ ಅವಧಿಯಲ್ಲೂ ಸಹ ಹಿಂದೂ ರಾಜರುಗಳ ಅಧೀನದಲ್ಲಿ ಗೋಧಿ, ಕಡಲೆ, ಬಾರ್ಲಿ, ನೀಲಿ, ಹತ್ತಿ, ಮೆಣಸು ಇತ್ಯಾದಿ ಬೆಳೆ ಹಾಗೂ ಅನಾನಸು, ಕಿತ್ತಳೆ, ಮಾವಿನ ಹಣ್ಣಿನ ಬೇಸಾಯದಲ್ಲಿ ಪರಿಣಿತಿಯಿದ್ದ ಬಗ್ಗೆ ಸಮಕಾಲೀನ ಸಾಕ್ಷ್ಯಾಧಾರಗಳು ದೊರೆಯುತ್ತವೆ. ಅಕ್ಬರನ ಕಾಲದಲ್ಲಿ ಭೂಸುಧಾರಣೆಗಳಾದರೂ ರೈತರ ಸ್ಥಿತಿಗತಿಗಳು ಕುಂದಿ, ಬೇಸಾಯವು ಪುನಃ ಸಾಂಪ್ರದಾಯಿಕ ಪದ್ಧತಿಗಳಿಗೆ ಸೀಮಿತವಾದಂತೆ ತೋರುತ್ತದೆ.

ಪ್ರಸ್ತುತ 'ಪ್ರಾಚೀನ ಭಾರತದಲ್ಲಿ ಬೇಸಾಯ' ಕೃತಿಯಲ್ಲಿ 1. ಭೂಮಿ ಮತ್ತು ವಿಭಾಗಗಳು, 2. ನೀರಾವರಿ ಮತ್ತು ನೀರು ಬಸಿಯುವಿಕೆ, 3.ಸಾಗುವಳಿ ಮತ್ತು ಸಾಗುವಳಿ ಉಪಕರಣಗಳು, 4. ಗೊಬ್ಬರಗಳು ಮತ್ತು ಗೊಬ್ಬರಗಳನ್ನು ಹಾಕುವ ವಿಧಾನ, 5. ವಿವಿಧ ಬೆಳೆಗಳ ಬೇಸಾಯ, 6. ಬೀಜ ಬಿತ್ತನೆ, 7.ಬೆಳೆಸರದಿ, 8. ರೋಗ ಮತ್ತು ಪೀಡೆಗಳಿಂದ ಬೆಳೆಯ ಸಂರಕ್ಷಣೆ, 9. ಕೃಷಿಯ ಪವನಶಾಸ್ತ್ರ 10. ಬೇಸಾಯದಲ್ಲಿ ಜಾನುವಾರುಗಳು, 11.ಹಸುಗಳು ಮತ್ತು ಎತ್ತುಗಳು, 12.ದನಗಳ ಆರೈಕೆ, 13. ದನಗಳ ಸಂರಕ್ಷಣೆ ಮತ್ತು ಪ್ರಾಣಿಜನ್ಯ ಆಹಾರ ಬಳಕೆ ಹಾಗೂ 14.ದನಗಳ ವೈದ್ಯಕೀಯ ಚಿಕಿತ್ಸೆ ಹೀಗೆ 14 ಅಧ್ಯಾಯಗಳಿದ್ದು, ಇದರಲ್ಲಿ ಪ್ರಾಚೀನ, ಋಷಿಮುನಿಗಳ, ವೇದಪುರಾಣ ಗ್ರಂಥಗಳು ಮತ್ತು ಕವಿಕೃತಿಗಳಲ್ಲಿ ಕಂಡುಬಂದಿರುವ ವಿಚಾರಗಳನ್ನೆಲ್ಲ ಕ್ರೋಢೀಕರಿಸಿ ವಿವರಿಸಲಾಗಿದೆ.

ಭೂಮಿ ಮತ್ತು ವಿಭಾಗಗಳನ್ನು ಕುರಿತ ಅಧ್ಯಾಯದಲ್ಲಿ ಭೂ ವಿಂಗಡಣೆಯ ರೀತಿ, ಭೂ ಪರೀಕ್ಷಣೆ, ವರ್ಗೀಕರಣ, ಭೂಮಿಯ ಆಯ್ಕೆ, ಅನುಗುಣವಾದ ಕಂದಾಯ ಪದ್ಧತಿಗಳನ್ನು ಕುರಿತು ವಿವರಿಸಿದ್ದರೆ, ನೀರಾವರಿ ಮತ್ತು ನೀರು ಬಸಿಯುವಿಕೆ ಭಾಗದಲ್ಲಿ ವೇದಕಾಲದಿಂದ ಹಿಡಿದು ಮಹಾಕಾವ್ಯಗಳು, ಅರ್ಥಶಾಸ್ತ್ರ, ಶಾಸನಾಧಾರಗಳಲ್ಲಿ ದೊರೆಯುವ ಮಾಹಿತಿಗಳನ್ನು ತಿಳಿಸಿದ್ದು ಕೆರೆ, ಕಟ್ಟೆ, ಬಾವಿ ಜಲಾಶಯಗಳು, ಜಲಮಟ್ಟ ಕಂಡುಹಿಡಿಯುವಿಕೆ; ಪರ್ವತ / ಜೌಗು / ಶುಷ್ಕ ಪ್ರದೇಶಗಳಲ್ಲಿ ಭೂ ಜಲಶೋಧನೆ ವಿಧಾನ, ಜಲಾಶಯ ರಚನೆ, ಬಂಡೆಗಳನ್ನು ಸೀಳುವಿಕೆ ಮುಂತಾದ ವಿಚಾರಗಳನ್ನು ಕುರಿತು ವಿವರಿಸಲಾಗಿದೆ. ಸಾಗುವಳಿ ಮತ್ತು ಉಪಕರಣಗಳನ್ನು ಕುರಿತು ಮುಂದಿನ ಅಧ್ಯಾಯದಲ್ಲಿ ನೇಗಿಲು, ಕೃಷಿ ಕಾರ್ಯಗಳಿಗೆ ಬಳಸುವ ಹಸು ಮತ್ತು ಹೋರಿಗಳ ಲಕ್ಷಣಗಳು ಮತ್ತು ಅಂದಿನ ನಂಬಿಕೆಗಳ ವಿವರವಿದೆ. ಗೊಬ್ಬರಗಳನ್ನು ಕುರಿತು ನಾಲ್ಕನೆಯ ಅಧ್ಯಾಯದಲ್ಲಿ ಸಸ್ಯಪೋಷಣೆಗೆ ಸಾವಯವ ಗೊಬ್ಬರಗಳ ಬಳಕೆ, ವಿವಿಧ ಬೆಳೆಗಳಿಗೆ ಹಾಕಬೇಕಾದ ಪೋಷಕಾಂಶಗಳ ವಿವರಗಳನ್ನು ತಿಳಿಸಲಾಗಿದೆ. ಮುಂದೆ ಬೆಳೆಗಳ ಬೇಸಾಯ ಕುರಿತಾಗಿ ವಿವಿಧ ಬೆಳೆಗಳು, ಬತ್ತ, ಕಬ್ಬು ಮತ್ತು ತರಕಾರಿಗಳ ಬೇಸಾಯ, ಕೀಟಪೀಡೆಗಳ ನಿವಾರಣೆ ಕುರಿತು ವಿವರಿಸಿದ್ದು ಬೆಳೆ ಸಂರಕ್ಷಣೆ ಕುರಿತಾಗಿ ಅವು ಸಹ ವಾತಪಿತ್ತಶ್ಲೇಷ್ಮಾದಿ ರಸಧಾತುಗಳ ಅತಿರೇಕಕ್ಕೊಳಗಾಗುವುದೆಂದು ತಿಳಿಸಿದ್ದು, ಚಿಕಿತ್ಸಾ ಮಾರ್ಗಗಳನ್ನು ಸೂಚಿಸಿದೆ. ಹಾಗೆಯೇ ಬೀಜ ಶೇಖರಣೆ, ಬಿತ್ತನೆ ವಿಧಾನ, ಕಾಲ ಹಾಗೂ ಬೆಳೆಯ ಫಸಲಿನ ಮೇಲಾಗುವ ವಿವಿಧ ಮಳೆನಕ್ಷತ್ರಗಳ ಪ್ರಭಾವ ಕುರಿತು ತಿಳಿಸಲಾಗಿದೆ.

ವಾಯುಮಂಡಲ ಸ್ಥಿತಿಗತಿಗಳ ನಿರೀಕ್ಷಣೆಯಿಂದ ಮಳೆಯ ಸಾಧ್ಯತೆ, ನೀರು ಕೊರತೆ ಇತ್ಯಾದಿಗಳನ್ನು ಪೂರ್ವಭಾವಿಯಾಗಿ ನುಡಿಯುವುದನ್ನು ಭಾರತದ ತಜ್ಞರು ಕಾಲ ಕಾಲಕ್ಕೆ ಮಾಡುತ್ತಲೇ ಬಂದಿದ್ದಾರೆ. ಆ ಕುರಿತಾಗಿ ಯಾವ ಯಾವ ಮಳೆನಕ್ಷತ್ರಗಳಿಂದ ಮಳೆಯಾದುವುದೆಂಬ ವಿವರದೊಡನೆ ಬೇಸಾಯಕ್ಕೆ ತಕ್ಕ ಕಾಲ ಕುರಿತು ವಿವಿಧ ಮೂಲಗಳಿಂದ ಸಂಗ್ರಹಿಸಿದ ವಿವರಗಳಿವೆ.

ಬೇಸಾಯದಲ್ಲಿ ಜಾನುವಾರುಗಳ ಪಾತ್ರ, ಅವುಗಳ ಪಾಲನೆ, ಸಂರಕ್ಷಣೆ, ಗೋಪಾಲಕರ ಕರ್ತವ್ಯ, ಹಸುಗಳ ಪಾಲನೆ, ಆರೈಕೆ, ದುಡಿಮೆಗೆ ಬಳಸುವ ಪರಿಮಿತಿ, ಗೋಶಾಲೆಗಳು, ಅವುಗಳ ರಚನೆ, ಗೋಸಂರಕ್ಷಣೆ, ಹೈನುಬಳಕೆ, ತಳಿಯೆಬ್ಬಿಕೆ ಹಾಗೂ ದನಗಳ ವಿವಿಧ ರೋಗ ಬೇನೆಗಳಿಗೆ ಹಿಂದೆ ಮಾಡಲಾಗುತ್ತಿದ್ದ ಚಿಕಿತ್ಸಾ ವಿಧಾನಗಳ ವಿವರ ನೀಡಲಾಗಿದೆ.

'ಹೊಸ ಚಿಗುರು ಹಳೆಬೇರು ಕೂಡಿರಲು ಮರಸೊಬಗು' ಎಂದ ಡಿ.ವಿ.ಜಿ.ಯವರ ಉಕ್ತಿ ಸಾರ್ವಕಾಲಿಕ ಸತ್ಯ. ರಾಸಾಯನಿಕ ಹಾಗೂ ಕೀಟನಾಶಕಗಳ ಅಪಾಯಕರ ಬಳಕೆಯ ವಿಷವರ್ತುಲದಿಂದ ಬಿಡಿಸಿಕೊಂಡು ಇಂದು ನೈಸರ್ಗಿಕ ಕೃಷಿ / ಸುಸ್ಥಿರ ಕೃಷಿ ಬೇಕೆಂದು ಹಿಂದಕ್ಕೆ ತಿರುಗಿನೋಡುತ್ತಾ, ತಿರುವಿನಲ್ಲಿ ನಿಂತಿರುವ ಇಂದಿನ ಪರಿಸ್ಥಿತಿಯಲ್ಲಿ, ನಮ್ಮ ನೈಸರ್ಗಿಕ ಸಹಜ ಕೃಷಿಪದ್ಧತಿಗಳನ್ನು ಕುರಿತು ವಿವರಗಳನ್ನು ಕ್ರೋಡೀಕರಿಸಿ ಬುತ್ತಿಯಾಗಿರುವ ಈ ಕೃತಿಯ ಅಧ್ಯಯನ ನಿಜಕ್ಕೂ ಸಮಯೋಚಿತವಾಗಿದೆ. ಅಲ್ಲದೆ, ಇಲ್ಲಿರುವ ವಿವಿಧ ವಿಚಾರಗಳೆಲ್ಲ ಕುರಿತು ಇಂದಿನ ವೈಜ್ಞಾನಿಕ ವಿಚಾರಗಳ ಹಿನ್ನಲೆಯಲ್ಲಿ ಸಂಶೋಧಿಸಿ, ಪರೀಕ್ಷಿಸಿ, ವಿಶ್ಲೇಷಿಸಿ, ಸತ್ಯಾಸತ್ಯತೆಗಳನ್ನು ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಿ ವ್ಯವಸಾಯದಲ್ಲಿ ಅಳವಡಿಸಿಕೊಳ್ಳಲು ಒಳ್ಳೆಯ ಮಾಹಿತಿಗಳಾಗಿವೆ.

ಪುಸ್ತಕದ ಕೊನೆಯಲ್ಲಿ ಸುಮಾರು 29 ಪುಟಗಳಷ್ಟು ಭಾರತೀಯ ಭಾಷೆಗಳಲ್ಲಿ ದೊರೆತ ಅದರಲ್ಲೂ ಮುಖ್ಯವಾಗಿ ಸಂಸ್ಕೃತ ಭಾಷೆಯಲ್ಲಿ ದೊರೆತಿರುವ ಬೇಸಾಯ, ಪಶುಸಂಗೋಪನೆ ಕುರಿತ ಸಾಹಿತ್ಯಕ ವಿವರಗಳ ಪಟ್ಟಿಯನ್ನು ವಿಷಯಾನುಕ್ರಮವಾಗಿ ಹಾಗೂ ಕಾಲಾನುಕ್ರಮವಾಗಿ ಕೊಡಲಾಗಿದೆ. ಆಯಾ ಸಾಹಿತ್ಯ ಆಕರಗಳ ಹೆಸರು ಮತ್ತು ಅವುಗಳಲ್ಲಿ ಬಂದಿರುವ ಕೃಷಿವಿಚಾರಗಳಾವುವು ಎಂಬ ವಿವರಗಳು ಅನೇಕ ಪ್ರತಿಗಳು ದೊರೆಯುವ ಮೂಲ ಸ್ಥಳ ಹಾಗೂ ಅಧ್ಯಯನ ಮಾಡಲಾದ ಗ್ರಂಥಭಂಡಾರಗಳ ವಿವರವನ್ನೂ ನೀಡಿರುವುದು ಈ ಬಗ್ಗೆ ಆಳವಾಗಿ ಅಧ್ಯಯನ ಮಾಡಬೇಕೆಂದಿರುವವರಿಗೆ ಮಾರ್ಗದರ್ಶಿಯೂ ಆಗಿದೆ.

ವಿ.ಸೂ. ಪ್ರತಿಗಳಿಗಾಗಿ ಸಂಪಾದಕರು ಸಂವಹನಕೇಂದ್ರ ಕೃಷಿ ವಿ.ವಿ.ನಿಲಯ ಹೆಬ್ಬಾಳ, ಬೆಂಗಳೂರು - 560 024.

ಅನುವಾದಕರು ಶ್ರೀಮತಿ ಸಿ.ಕೆ. ಕುಮುದಿನಿ
ಕನ್ನಡ ಅಧ್ಯಯನ ವಿಭಾಗ ಸಹ ಪ್ರಾಧ್ಯಾಪಕರು ಕೃಷಿ
ವಿ.ವಿ.ನಿಲಯ ಬೆಂಗಳೂರು-24

ಕರ್ನಾಟಕದಲ್ಲಿ ಸಾವಯವ ಬೇಸಾಯ - ಒಂದು ಮೂಲ ಗ್ರಂಥ

ಮೊಟ್ಟಮೊದಲ ಬಾರಿಗೆ ಕನ್ನಡದಲ್ಲಿ ಹೊರತರಲು ಯೋಜಿಸಲಾಗಿರುವ "ಕರ್ನಾಟಕದಲ್ಲಿ ಸಾವಯವ ಬೇಸಾಯ" ಪುಸ್ತಕವನ್ನು ಕುರಿತ ಮೂಲಗ್ರಂಥವು ಕರ್ನಾಟಕದ ಸಾವಯವ ಬೇಸಾಯಗಾರರ ವೈವಿಧ್ಯಮಯ ಮತ್ತು ಸುಸ್ಥಿರ ಕೃಷಿ ವಿಧಾನಗಳನ್ನೆಲ್ಲಾ ಒಂದೆಡೆ ಕಲೆಹಾಕುವ ಪ್ರಯತ್ನವಾಗಿರುತ್ತದೆ.

ಸಾವಯವ ಬೇಸಾಯ ಪದ್ಧತಿಯಲ್ಲಿನ ಸರಳ ಅಂಶಗಳಿಂದ ಅತ್ಯಂತ ಸಂಕೀರ್ಣ ಅಂಶಗಳವರೆಗೆ, ಶುದ್ಧ ದೇಶೀಯ ರೀತಿಗಳಿಂದ ಅತ್ಯಾಧುನಿಕ ರೀತಿಗಳವರೆಗಿನ ಎಲ್ಲ ವಿವರಗಳು ಈ ಮೂಲಗ್ರಂಥದ ಕುರುಹು. ಪ್ರತಿಯೊಬ್ಬ ಸಾವಯವ ಕೃಷಿಕನೂ, ಅಲ್ಲದೆ ಕಾಳಜಿಯುಳ್ಳ ಎಲ್ಲರೂ ಈ ಪ್ರಯತ್ನದಲ್ಲಿ ಕೈಸೇರಿಸಲು ಕೇಳಿಕೊಳ್ಳುತ್ತೇವೆ.

ನೀವೊಬ್ಬ ಸಾವಯವ ಬೇಸಾಯಿಯಾಗಿದ್ದಲ್ಲಿ ನಿಮ್ಮ ಬೇಸಾಯಕ್ರಮ ಕುರಿತು ನಮಗೆ ಬರೆಯಿರಿ, ಇಲ್ಲವೇ ಮೂಲಗ್ರಂಥಕ್ಕೆ ಸೇರಲೇಬೇಕೆಂದು ನಿಮಗೆ ಕಂಡುಬಂದ ಸುಸ್ಥಿರ ವಿಧಾನ ಅಥವಾ ತಂತ್ರಜ್ಞತೆಗಳನ್ನು ಕುರಿತು ಬರೆಯಿರಿ, ನೀವು ಬಲ್ಲ ಕೃಷಿಕರ ಬಗ್ಗೆ ಕೂಡ ಬರೆಯಿರಿ. ಪ್ರತಿಯೊಂದು ಸ್ವೀಕೃತ ಬರಹಕ್ಕೂ ಸೂಕ್ತ ಮನ್ನಣೆ ಉಂಟು.

ಸಾವಯವ ಬೇಸಾಯ ಕ್ಷೇತ್ರದ ಮಾಹಿತಿ ವಿನಿಮಯದಲ್ಲಿ ಈ ಮೂಲಗ್ರಂಥದ ಪಾತ್ರ ಗಮನಾರ್ಹವಾದದ್ದು, ಹಾಗೆಯೇ ರೈತರು ಹಾಗೂ ಈ ನಿಟ್ಟಿನಲ್ಲಿ ಕಾಳಜಿಯುಳ್ಳ ಎಲ್ಲರಿಗೂ ಉತ್ತೇಜನಕಾರಿಯಾಗಿರುವುದಲ್ಲದೆ ದಿಕ್ಸೂಚಿಯೂ ಆಗಬಲ್ಲದು. ಸಾವಯವ ಬೇಸಾಯ ಚಳವಳಿಯನ್ನು ಬಲಪಡಿಸುವಲ್ಲಿಯೂ ಇದರ ಪಾತ್ರ ಮಹತ್ವದ್ದು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಇಕ್ರಾ - (ICRA)
Institute of Cultural Research & Action
ಸಂಸ್ಕೃತಿ, ಅಂಚೆ ಪೆಟ್ಟಿಗೆ 7551
ನಂ.22 ಮೈಕೇಲ್ ಪಾಳ್ಯ
ಹೊಸ ತಿಪ್ಪಸಂದ್ರ ಅಂಚೆ,
ಬೆಂಗಳೂರು - 560 075.

ಮಾಲಿನ್ಯ ರಹಿತ ಕೃಷಿ ಕಾರ್ಯಾಗಾರ

ಇದೇ ಏಪ್ರಿಲ್ 11 ರಿಂದ 13 ರವರೆಗೆ ಬೆಂಗಳೂರಿನ ಇಕ್ರಾ ಸಂಸ್ಥೆಯವರು ಜೈವಿಕ ಮತ್ತು ಹೋಮಿಯೋಪತಿ ಪದ್ಧತಿಯಿಂದ ಪೀಡೆ ನಾಶಕಗಳ ಬಗ್ಗೆ ಕಾರ್ಯಾಗಾರ ಏರ್ಪಡಿಸಿರುವರು. ಆಸಕ್ತರು ಇಕ್ರಾ ಸಂಸ್ಥೆಯನ್ನು ಸಂಪರ್ಕಿಸಬಹುದು.

ಸಂ.

ಹಿತ್ತಲಗಿಡಕ್ಕೆ ನಿಮ್ಮ ಸಲಹೆ

ಹಿತ್ತಲಗಿಡವನ್ನು ಮತ್ತಷ್ಟು ವ್ಯವಸ್ಥಿತಗೊಳಿಸಲು ನಿಮ್ಮ ಮುಖ್ಯ ಮೂಲ ಸಲಹೆಗಳನ್ನು ಇಂದೇ ಬರೆದು ಕಳುಹಿಸಿರಿ

ಉತ್ತಮ ಸಲಹೆಗಳಿಗೆ ಪುಸ್ತಕಗಳ ಬಹುಮಾನ ನೀಡಲಾಗುವುದು

ಸಂ.

ಅಂಬಾಜಿಯವರ ನಾಟಿ ಪಶುವೈದ್ಯ ಪದ್ಧತಿಗಳು

ಅಹಮದಾಬಾದ್ ಸಮ್ಮೇಳನಕ್ಕೆ ಆಹ್ವಾನಿತ ನಾಟಿ ಪಶು ಚಿಕಿತ್ಸಕ

ಶ್ರೀಮಾನ್ ಅಂಬಾಜಿಯವರು ಬೀದರ್ ಜಿಲ್ಲೆಯ ಬಸವ ಕಲ್ಯಾಣ ತಾಲ್ಲೂಕಿನ ಗೊರ್ಟ (ಬಿ) ಎಂಬ ಹಳ್ಳಿಯಲ್ಲಿದ್ದು ಸುತ್ತ ಮುತ್ತ 8-10 ಹಳ್ಳಿಗಳಲ್ಲಿ ಪ್ರಸಿದ್ಧ ನಾಟಿ ಪಶು ವೈದ್ಯರಾಗಿದ್ದಾರೆ. ಈಗಿರುವ ನವೀನ ಪಶುವೈದ್ಯಕೀಯ ಶಾಸ್ತ್ರವನ್ನು ಓದದೆ, ಹಳೆಯ ಕಾಲದ ವೈದ್ಯ ಪದ್ಧತಿಯನ್ನು ಅವರ ಚಿಕ್ಕಪ್ಪನಿಂದ ಕಲಿತು, ಹಸು, ಎಮ್ಮೆ, ಕುರಿ, ಮೇಕೆಗಳ ಕಾಯಿಲೆಗಳನ್ನು ಸುಮಾರು ವರ್ಷಗಳಿಂದ ವಾಸಿ ಮಾಡುತ್ತಿದ್ದಾರೆ. ಅವರು ಕಡು ಬಡವರಾಗಿದ್ದರೂ ಕೂಡ (ದಿನಕ್ಕೆ ರೂ.40/- ಗಳನ್ನು ದಿನಕೂಲಿಯಿಂದ ಸಂಪಾದಿಸುತ್ತಾರೆ.) ಪ್ರಾಣಿಗಳ ಯಜಮಾನರಿಂದ ಒಂದು ಪೈಸೆಯನ್ನು ಸ್ವೀಕರಿಸುವುದಿಲ್ಲ. ಪಶು ಸೇವೆಯೇ ದೇವರ ಸೇವೆಯೆಂದು ಧೃಡವಾಗಿ ನಂಬಿದ್ದಾರೆ.

1. ಹೆಗಲು ಬೇನೆ / ಹೆಗಲು ಬಾವು

ಇದನ್ನು ಇಂಗ್ಲೀಷನಲ್ಲಿ Yolk gall ಎಂದು ಕರೆಯುತ್ತಾರೆ. ಇದು ಸಾಮಾನ್ಯವಾಗಿ ಉಳುವ ಎತ್ತುಗಳಲ್ಲಿ ಕಂಡು ಬರುತ್ತದೆ. ನೇಗಿಲು ನೊಗವು ಕತ್ತಿನ ಮೇಲೆ ಉಜ್ಜಿ ಉಜ್ಜಿ ಉಂಟಾಗುವ ಗಾಯಕ್ಕೆ ಹೆಗಲುಬೇನೆ ಎನ್ನುತ್ತಾರೆ. ಮೊದ ಮೊದಲು ಸಣ್ಣ ಗೆಡ್ಡೆಯಾಗಿ ಕಾಣಿಸಿಕೊಂಡು ಸುಮಾರು ಕೋಸಿನ ತೂಕದಷ್ಟು ಬೆಳೆಯುತ್ತದೆ. ಇದಕ್ಕೆ ಅಂಬಾಜಿಯವರ ಔಷಧಿ ಈ ರೀತಿ ಇದೆ

ಕೋಡಂಗಿ ಬೇರನ್ನು - (Yellow Parasite grows on trees/shrubs) ಅರಿವೆಯಲ್ಲಿ ಹಾಕಿ ಕುದಿಸಿದರೆ ಅದು ನೀರನ್ನು ಬಿಡುತ್ತದೆ. ಜಟಶಂಕರ ಗೆಡ್ಡೆಯನ್ನು ಕಲ್ಲಿನ ಮೇಲೆ ತಿಕ್ಕಿ ಗಂಧವನ್ನು ತೆಗೆಯಬೇಕು. ಈ ನೀರು ಹಾಗು ಗಂಧವನ್ನು ಹರಳೆಣ್ಣೆಯಲ್ಲಿ ಕಲಿಸಿ, ಹೆಗಲು ಬಾವಿಗೆ ದಿನಾಲು ಒಂದು ಬಾರಿ ಚೆನ್ನಾಗಿ ತಿಕ್ಕಬೇಕು. ಗೆಡ್ಡೆ ಹಾಗೆಯೆ ಕರಗಿ ಹೋಗುತ್ತದೆ.

2. ಗಾಯಗಳಿಗೆ ಮುಲಾಮು

ಯಾವ ರೀತಿಯ ಗಾಯಗಳೇ ಆಗಲಿ ಈ ಕೆಳಗಿನ ಮುಲಾಮನ್ನು ಹಚ್ಚುತ್ತಾ ಇದ್ದರೆ ಗಾಯ ಬೇಗನೆ ವಾಸಿಯಾಗುವುದು.

ಬೆಣ್ಣೆ - 400 ಗ್ರಾಂ ಎಕ್ಕದ ಹಾಲು - 21ತೊಟ್ಟು ಕರ್ಪೂರ - 100 ಗ್ರಾಂ. ಈ ಮೂರನ್ನು ಮಿಶ್ರಣ ಮಾಡಿ ಗಾಯಕ್ಕೆ ಹಚ್ಚಬೇಕು. ಈ ಮುಲಾಮನ್ನು ಸುಮಾರು 1 ವಾರದಿಂದ 3 ವಾರದವರೆಗೆ ಇಡಬಹುದು.

3. ಹಸುಗಳಲ್ಲಿ ಹಾಲು ಹೆಚ್ಚಿಸುವ ವಿಧಾನ

ಅಮೃತ ಬಳ್ಳಿ *(Tinospora cordifolia)* - 1 ಬಾಟಲು ಕ್ಷಾರ ಕಡ್ಲೆಬೇಳೆ - 1 ಕೆ.ಜಿ., ಬೆಲ್ಲ - 750 ಗ್ರಾಂ ಹೊತ್ತು ಮುನುಗಿದ ಬೇರು - 4 ಕೆ.ಜಿ ಅಮೃತ ಬಳ್ಳಿಯನ್ನು ಚೆನ್ನಾಗಿ ಕುದಿಸಿ, ಬಂದ ಕ್ಷಾರವನ್ನು (ಒಂದು ದೊಡ್ಡ ಬಾಟಲಿನಷ್ಟನ್ನು ತೆಗೆದಿಡಬೇಕು. ಕಡಲೆ ಬೇಳೆಯನ್ನು ಚೆನ್ನಾಗಿ ನೆನಸಬೇಕು. ಹೊತ್ತು ಮುನುಗಿದ ಬೇರನ್ನು ಚೆನ್ನಾಗಿ ಕುಟ್ಟಿ ಒಂದು ರಾತ್ರಿ ನೆನಸಬೇಕು.

ಈ ಮೇಲಿನವುಗಳನ್ನು ಬೆಲ್ಲದ ಜೊತೆ ಸೇರಿಸಿ ಹಸು / ಎಮ್ಮೆಗೆ ಮುಂಜಾನೆ ಕುಡಿಸಬೇಕು. ಇದನ್ನು ಸುಮಾರು 1 ವಾರದಿಂದ - 4 ವಾರದವರೆಗೆ ಕುಡಿಸಬಹುದು. ಈ ರೀತಿ ಮಾಡಿದರೆ, ಅಂಬಾಜಿಯವರ ಪ್ರಕಾರ - 1 ಲೀಟರ್ ಮೇಲಿನ ಮಿಶ್ರಣಕ್ಕೆ ಹಸು 1/4 ಲೀಟರ್ ಹಾಲನ್ನು ಹೆಚ್ಚಿಗೆ ನೀಡುತ್ತದೆ.

4. ಕೆಮ್ಮು, ಶೀತ, ನೆಗಡಿಗೆ

ಎಕ್ಕದ ಗಿಡದ ಕಾಂಡ, ತುದಿಗೆ ಬೆಣ್ಣೆ ಅರಿಶಿನವನ್ನು ಹಚ್ಚಿ ಈ ಕಡ್ಡಿಯನ್ನು ಹಸುವಿನ ಮೂಗಿನಲ್ಲಿ ಎರಡು ಮೂರು ಬಾರಿ ಇಟ್ಟು ತೆಗೆಯಬೇಕು. ಅನಂತರ ನೆಲಗಗುಳು ಎಂಬ ಗಿಡದ ಬೇರನ್ನು ಕುಟ್ಟಿ ಪುಡಿ ಮಾಡಿ ಅದೇ ಹಸುವಿನ ಮೂತ್ರದಲ್ಲಿ ಹಾಕಿ - ಮೂರು ದಿನ ಹಚ್ಚಬೇಕು.

5. ಹಸುವಿನ ನಿಶ್ಯಕ್ತತೆಗೆ

(For debilitated condition)

ಇದನ್ನು ಬೀದರ ಕಡೆ ಗೋಡೆ ಬೆನೆ ಎಂದು ಕರೆಯುತ್ತಾರೆ. ಕುದುರೆ ಬೇವಿನ ತಪ್ಪಲು - 100 ಗ್ರಾಂ ಬಿದಿರು ತಪ್ಪಲು - 100 ಗ್ರಾಂ ಈ ಗಿಡಗಳ ರಸ ತೆಗೆದು ಮಿಶ್ರಣ ಮಾಡಿ ದಿನಕ್ಕೆ ಮೂರು ಬಾರಿಯಂತೆ ಹಸುವಿಗೆ ಕುಡಿಸಬೇಕು. ಇದನ್ನು ಸುಮಾರು 8-10 ದಿವಸಗಳ ಕಾಲ ಕೊಟ್ಟರೆ ಹಸುವಿನ ನಿಶ್ಯಕ್ತಿ ಕಡಿಮೆಯಾಗುತ್ತದೆ.

6. ಹಸುವಿನ ಮೈಮೇಲಿರುವ ಉಣ್ಣೆಗಳಿಗಾಗಿ

(For external parasites)

ಕೇದಿಗೆ *(Pandanus tectorius)* ಯನ್ನು ಕುಟ್ಟಿ ರಸ ತೆಗೆದು ಇದನ್ನು ಹಸುವಿನ ಮೈಮೇಲೆ ಹಚ್ಚಬೇಕು. ಸುಮಾರು 3-4 ದಿನ ಹಚ್ಚಿದರೆ, ಹಸುವಿಗೆ ಉಣ್ಣೆಗಳ ಕಾಟ ಕಡಿಮೆಯಾಗುತ್ತದೆ.

ಸಂಗ್ರಹ : *ವೀಣಾ T.*
ಸಹಾಯಕ ಪ್ರಾಧ್ಯಾಪಕರು, ಪಶುವೈದ್ಯಕೀಯ ಕಾಲೇಜು, ಹೆಬ್ಬಾಳ, ಬೆಂಗಳೂರು
ರವಿಶಂಕರ ಬಿರಾದಾರ,
ಸಹಾಯಕ ಉಪನ್ಯಾಸಕರು,
ನೀಲಾಂಬಿಕಾ ಮಹಿಳಾ ಕಾಲೇಜು, ಬಸವಕಲ್ಯಾಣ

7. ದನಗಳ ಹೆಗಲಿಗೆ (ಮೃದುಮಾಡಲು, ಗೆಡ್ಡೆ ಬಂದರೆ ಕರಗಿಸಲು)

100 ಗ್ರಾಂ ರುಮ್ಮಿ ಮಸ್ತಿಕೆ *(Pistacia lentiscus)* ಕಾಳನ್ನು ಚೆನ್ನಾಗಿ ಹುರಿದು 1 ಸೇರು ಹಸುವಿನ (ನಾಟಿ ಹಸು) ಬೆಣ್ಣೆಯನ್ನು ಕಂಚಿನ ತಟ್ಟೆಯಲ್ಲಿ ಹಾಕಿ ವಾರ ಕಾಲ ಪ್ರತಿದಿನ ಗಂಟೆಕಾಲ ತಾಮ್ರದ ಪಂಚಪಾತ್ರೆಯಲ್ಲಿ ತೀಡುತ್ತಾ ಬಂದರೆ ಹಚ್ಚ ಹಸಿರು ಬಣ್ಣಕ್ಕೆ ಬರುತ್ತದೆ. ಆ ಮಿಶ್ರಣವನ್ನು ತಾಮ್ರದ ಪಾತ್ರೆಯಲ್ಲಿ ಶೇಖರಿಸಿಕೊಂಡು ದನಗಳ ಹೆಗಲಿಗೆ ಲೇಪನ ಮಾಡಿದರೆ ಮೃದುವಾಗುತ್ತದೆ. ಹೆಗಲು ಹೊಡೆದಿದ್ದರೆ ಸರಿಪಡಿಸುತ್ತದೆ. ಅರುಪತಿ ಅಥವಾ ಊತ ಬಂದಿದ್ದರೆ ನಿವಾರಣೆಯಾಗುತ್ತದೆ.

ಜಾನುವಾರು ಕಾಲು ಮುರಿದರೆ/ ಸಂದು ಬಿಟ್ಟರೆ ಮಲೆನಾಡಿನ ಪ್ರಾಂತ್ಯದಲ್ಲಿ ಸಾಮಾನ್ಯವಾಗಿ ದೊರಕುವ 'ಕಾಲು ಮುರುಕನ ಸೊಪ್ಪನ್ನು' ಅರೆದು, ಉದ್ದಿನ ಹಿಟ್ಟು, ತುಪ್ಪ ಅಥವಾ ಕೋಳಿ ಮೊಟ್ಟೆ ಸೇರಿಸಿ, ಸತತವಾಗಿ ಮೂರುದಿನ ದನಕ್ಕೆ ತಿನ್ನಿಸಿ, ನಂತರ ಅದನ್ನೇ ಮಾಡಿ ಕಾಲಿಗೆ ಕಟ್ಟಿದರೆ, ಮುರಿದ ಎಲುಬು ಕೂಡಿ, ದನ ಗುಣಮುಖವಾಗುತ್ತದೆ. ಹಾಗೇ, ಮುಳ್ಳುಕವರೆ ಅಥವಾ ಅಂಟು ಪುರುಲೆ *(Tragus biflorus)* ಬೇರನ್ನು ಅಕ್ಕಿ ಗಂಜಿಯಲ್ಲಿ ಬೇಯಿಸಿ ಮೂರುದಿನ ದನಕ್ಕೆ ತಿನ್ನಿಸಿದರೆ ಎಲುಬು ಸಂದು ಬಿಡುವುದು ಅಥವಾ ಮಳು ಬಿಡುವುದು ಸರಿಯಾಗುತ್ತದೆ.

ಮಕ್ಕಿ ಗಣೇಶರಾವ್ ಬಿ.ಆರ್.
ಕಮ್ಮರಡಿ ಅಂಚೆ, ತೀರ್ಥಹಳ್ಳಿ (ತಾ) ಶಿವಮೊಗ್ಗ

1. ಮದ್ಯ ಪಾನ ಮತ್ತು ಧೂಮಪಾನ ಬಿಡಲು ಮಧು ನಾಶಿನಿ ಎಲೆ

ಒಂದು ಮಧು ನಾಶಿನಿ *(Gymnema sylvestre)* ಅಥವಾ ಬಳ್ಳಿ ಎಲೆಯನ್ನು ಕುಡಿತ ಅಥವಾ ಧೂಮಪಾನದೆಡೆ ಮನಸ್ಸು ಎಳೆಯಲು ಶುರುಮಾಡಿದರೆ ಬಾಯಿಯಲ್ಲಿ ಹಾಕಿ ಜಗಿದರೆ, ನಾಲಿಗೆ ರುಚಿ ಪೂರ್ತಿ ಕೆಟ್ಟು, ಏನು ಬೇಡವೆಂಬ ವೈರಾಗ್ಯ ಬರುತ್ತದೆ. ಇದು ಬೆಂಗಳೂರು ಕೃಷಿ ವಿ.ವಿ.ನಿಲಯದ ವಾಹನ ಚಾಲಕ ಕೃಷ್ಣಪ್ಪ ಸ್ವತಃ ಕಂಡುಕೊಂಡ ಉಪಾಯ. ಅದೇ ರೀತಿ ತನ್ನ ಹತ್ತಾರು ಸ್ನೇಹಿತರಿಗೂ ಹೇಳಿಕೊಟ್ಟಿರುವನು. ಈಗ ಈತನ ಜೇಬಿನಲ್ಲಿ ಸದಾ ಮಧುನಾಶನಿ ಎಲೆಗಳು ತುಂಬಿರುತ್ತದೆ. ಆದರೆ ತೀವ್ರ ಪರಿಣಾಮ ಬೀರುವ ಸರಾಯಿ, ಕಳ್ಳಭಟ್ಟಿಗಳ ಮೇಲೆ ಇದರ ಪರಿಣಾಮ ಬೀರದೇನೊ ಎಂಬುದು ಕೃಷ್ಣಪ್ಪನ ಸಂಶಯ.

ಇದೇ ಎಲೆಯನ್ನು ಜಗಿದು ತನ್ನ ಮಗಳ ಹುಳುಕು ಹಲ್ಲಿನ ನೋವನ್ನೂ, ಹಾಗೇ ತನಗೆ ಆಗಾಗ್ಗೆ ಬರುವ ತಲೆನೋವು; ಎದೆ ಉರಿಗಳನ್ನೂ ಕೃಷ್ಣಪ್ಪ ಗುಣಪಡಿಸಿರುವನು. ಸಕ್ಕರೆ ಕಾಯಿಲೆಯನ್ನೂ ಇದರಿಂದ ಗುಣಪಡಿಸಲು ಸಾದ್ಯ ಎಂಬುದು ಕೃಷ್ಣಪ್ಪನ ಬಲವಾದ ನಂಬಿಕೆ.

M. ಕೃಷ್ಣಪ್ಪ
ವಾಹನ ಚಾಲಕರು
ಕೃಷಿ ವಿ.ವಿ.ನಿಲಯ ಹೆಬ್ಬಾಳ,
ಬೆಂಗಳೂರು-24.

2. ಮನೆಮದ್ದು ಬೆಳ್ಳುಳ್ಳಿ

1. ಬೆಳ್ಳುಳ್ಳಿ ಸಿಪ್ಪೆ ತೆಗೆದು ನುಣ್ಣಗೆ ಅರೆದು ತುಪ್ಪದೊಡನೆ ಸೇವಿಸಿದ ಬೆಳ್ಳುಳ್ಳಿಗೆ ಸಮಸ್ತ ವಾತರೋಗ ನಿವಾರಣೆ ಶಕ್ತಿ ಇದೆ.

2. ಶುಂಠಿ ಮತ್ತು ಲಕ್ಕಿ ಸೊಪ್ಪು *(Justcia prostrata)* ನೊಂದಿಗೆ ಎರಡು ತೊಲ ಬೆಳ್ಳುಳ್ಳಿ ಸೇರಿಸಿ, ಕುಟ್ಟಿದ ಪುಡಿಯನ್ನು ಅರ್ಧಸೇರು ನೀರಿನಲ್ಲಿ ಕುದಿಸಿ ಎರಡು ಚಮಚದಂತೆ ಪ್ರತೀ ದಿನ ಸೇವಿಸಿದರೆ ಕೀಲು ನೋವು ಮಾಯವಾಗುತ್ತದೆ.

3. ಬೆಳ್ಳುಳ್ಳಿ, ಒಂದೆಲಗದ ಸೊಪ್ಪು, ಸೈಂಧ್ರಿಯ ಲವಣ ಹಾಗು ಚಿತ್ರಮೂಲ ಸೈನ್ಯದ ಬೇರು ಸೇರಿಸಿ ತಯಾರಿಸಿದ ಮಿಶ್ರಣ ದಿನಾ ಸವರುವುದರಿಂದ ಕೂದಲು ಉದುರುವಿಕೆಯನ್ನು ತಡೆಯುತ್ತದೆ.

4. ಮೂಲವ್ಯಾಧಿಗೆ ಇದು ಸಿದ್ಧೌಷಧಿ ಆಗಿದೆ.

5. ಜಡೆ ಹತ್ತಿ ಸೊಪ್ಪು, *(Gosypium purpurascens)* ಸಾಸಿವೆ ಜೊತೆ ಸೇರಿಸಿದ ಬೆಳ್ಳುಳ್ಳಿ ಮಿಶ್ರಣ ಚೇಳು ವಿಷವನ್ನು ತಕ್ಷಣ ಇಳಿಸುತ್ತದೆ.

6. ರಕ್ತ ನಾಳದಲ್ಲಿ ಸೇರಿಸಿದ ಕೊಬ್ಬನ್ನು ಕರಗಿಸುವುದಲ್ಲದೆ, ಹೃದಯ ರೋಗವನ್ನು ತಡೆಯುತ್ತದೆ.

7. ಬಾಯಿ ದುರ್ವಾಸನೆ ಹಾಗು ವಾಯು ದೋಷ ನಿವಾರಿಸುತ್ತದೆ.

ಮಹಮದ್ ಆಬಿದ್ ಹುಸಿಲಿನ್
ಎನ್. ಶಿವಾರೆಡ್ಡಿ

3.ಕೊನ್ನಾರಿ ಗೆಡ್ಡೆಯನ್ನು ಬಾಯಿಗೆ ಹಾಕಿಕೊಂಡ ಕಡಿದು ಬಾಯಿಯಲ್ಲಿಯೇ ಇಟ್ಟುಕೊಂಡು ರಸವನ್ನು ಕುಡಿದರೆ, ಗ್ಯಾಸ್ಟ್ರಿಕ್ ರೋಗ ಒಂದು ವಾರದಲ್ಲಿ ಹೋಗುತ್ತದೆ. ಒಂದು ವಾರ ಕಾಲ ಪ್ರತಿದಿನ ಎರಡು ಗೆಡ್ಡೆ ಬಾಯಲ್ಲಿ ಇಟ್ಟುಕೊಂಡು ರಸಕುಡಿಯುತ್ತ ಬರಬೇಕು. (ಕಾಫಿ, ಬೀಡಿ, ಸಿಗರೇಟು, ಮಧ್ಯಪಾನ ಬಿಡಬೇಕು, ಅಭ್ಯಾಸ ವಿರುವವರು) ಕಾಲಕ್ಕೆ ಸರಿಯಾಗಿ ಊಟ ತಿಂಡಿ ಲಘುವಾಗಿ ಬಿಸಿಮಾಡಿ ಆಹಾರ ತೆಗೆದುಕೊಳ್ಳಬೇಕು. ಈ ಗೆಡ್ಡೆಯಿಂದ ಜೀರ್ಣ ರಸದ ಉತ್ಪತ್ತಿ ಹೆಚ್ಚಾಗಿ ಬಾಯಿಯ ಶುದ್ದತೆ, ಹಾಗೂ ಹಲ್ಲು ನೋವು ಇದ್ದರೂ ಮಾಯವಾಗುತ್ತದೆ. ರೈತರಿಗೆ ಸುಲಭವಾಗಿ ಸಿಗುವುದು ಅವರ ಜಮೀನಿನಲ್ಲಿ.

ಬಿ. ಬಸವರಾಜು
ಸಂತೇಶಿವರ

ಬಸ್‌ಚಾಲಕ ಸೈಯದ್ ಅಹ್ಮದ್‌ನ ಔಷದಗಳು

4. ಜಾಂಡೀಸ್ (ಪಿತ್ತ ಕಾಮಲೆಗೆ) :- ಉತ್ತುತ್ತೆ ಬೀಜ ತೆಗೆದು ಅದರೊಳಗೆ ಜೀರಿಗೆ ಪುಡಿ ಮಾಡಿ ತುಂಬಿ, ನಿಂಬೇಹಣ್ಣಿನ ರಸದಲ್ಲಿ 7 ಗಂಟೆ ಮುಳುಗಿಸಿಡಬೇಕು. ಈ ರೀತಿಯ 14 ಉತ್ತುತ್ತೆಗಳನ್ನು - ಬೆಳಗ್ಗೆ ಖಾಲಿ ಹೊಟ್ಟೆಗೆ ಒಂದು, ರಾತ್ರಿ ಮಲಗುವಾಗ ಮತ್ತೊಂದು, ಏಳು ದಿನ ತೆಗೆದು ಕೊಂಡರೆ, ಜಾಂಡೀಸ್‌ನಿಂದ ನರಳುತ್ತಿದ್ದು, ಮೊಳಕಾಲಿನ ಕೆಳಗೆ ಕೆರೆತ, ಯಕೃತ ವಾತಗಳು ಕಡಿಮೆಯಾಗಿ, ಮೂತ್ರ ಶುದ್ಧವಾಗಿ, ವ್ಯಕ್ತಿಗುಣಮುಖನಾಗುತ್ತಾನೆ.

5. ಹುಳಕಡ್ಡಿಗೆ (ನೀರು ಇಳಿಯುವಂತಹ) 'ಗರಗತ್ತ' *(Ficus asperima)* (ಮಲೆನಾಡಿನಲ್ಲಿ ಸಾಮಾನ್ಯವಾಗಿ ಕಂಡುಬರುವ ಒಂದು ಜಾತಿಯ ಮರ) ಮರದ ತೊಗಟೆಯನ್ನು ಸಿಪ್ಪೆಸುಲಿದು, ಒಳಗಿನ ತೊಗಟೆಯನ್ನು ಚೆನ್ನಾಗಿ ಅರೆದು, ಹಸಿ ತೆಂಗಿನ ಕಾಯಿಯನ್ನೂ ಇದೇ ರೀತಿ ಬೇರೆ ಅರೆದು, ಸೋದಿಸಿ, ಅದರ ಹಾಲನ್ನು ಮಾತ್ರ ತೆಗೆದು, ಗರಗತ್ತ ಮರದ ತೊಗಟೆಯ ರಸ ಮತ್ತು ತೆಂಗಿನ ಹಾಲಿನ ರಸ ಇವೆರಡನ್ನೂ ಸೇರಿಸಿ ಒಂದು ತಾಮ್ರದ ಪಾತ್ರೆಯಲ್ಲಿ ಹಾಕಿ ಮೂರು ದಿನ ಇಡಬೇಕು. ನಂತರದಲ್ಲಿ ಏರ್ಪಾಡಾಗಿರುವ ಮಿಶ್ರಣವನ್ನು ಚೆನ್ನಾಗಿ ಕಲಕಿಸಿ, ಸೋರುತ್ತಿರುವ ಹುಳಕಡ್ಡಿ ಜಾಗಕ್ಕೆ ತಿಂಗಳುಕಾಲ ಹಚ್ಚುತ್ತಾ ಇರಬೇಕು. ಮಿಶ್ರಣ ಒಣಗಿದರೆ, ತೆಂಗಿನ ಹಾಲಿನ ರಸವನ್ನು ಮತ್ತೆ ಮತ್ತೆ ಹಾಕಿ ಉಪಯೋಗಿಸಬೇಕು. ಈ ಸಂದರ್ಭದಲ್ಲಿ ಹುಳಿ, ಕಾರ, ಮೀನು, ಎಣ್ಣೆ ಪದಾರ್ಥಗಳನ್ನೂ ದೂರವಿಡಬೇಕು.

ಈ ಎಲ್ಲಾ ಪದ್ದತಿಗಳನ್ನು ಸ್ವಂತ ಪ್ರಯೋಗ ಮತ್ತು ತನ್ನ ಅಜ್ಜನಿಂದ ಸೈಯದ್ ಕಲಿತಿದ್ದು, ಮಲೆನಾಡಿನಿಂದ, ದಾವಣಗೆರೆವರೆಗೆ, ಬಸ್ ಚಾಲನೆ ಮಾಡುತ್ತಿರುವಾಗ ನೂರಾರು ಜನರಿಗೆ ಔಷಧಿ ನೀಡಿ ಗಣಮುಖಮಾಡಿರುವನು. ಇವನ ಈ ಸಾಧನೆಯನ್ನು ದೆಲ್ಲಿಯ ಹಮ್‌ದರ್ದ್ ಚಿಕಿತ್ಸಾ ಸಂಸ್ಥೆಯ ಶಾಹಿದ್ ಹುಸೇನ್ ಅನ್ಸಾರಿ ಖುದ್ದ ಬಂದು, ನೋಡಿ ಪ್ರಶಂಸಿರುವರು.

ಸೈಯದ್ ಅಹಮದ್
KSRTC ಬಸ್ ಚಾಲಕ
ಶೃಂಗೇರಿ ರಸ್ತೆ ಹರಿಹರಪುರ,
ಚಿಕ್ಕಮಗಳೂರು ಜಿಲ್ಲೆ - 577 120.

ಹಿತ್ತಲ ಗಿಡಕ್ಕೆ ಮಾಹಿತಿ

ಹಿತ್ತಲಗಿಡಕ್ಕೆ ಸೂಕ್ತ ಎನಿಸಿದ ವ್ಯಕ್ತಿಮತ್ತು ವಿಚಾರಗಳ ಬಗ್ಗೆ ಮಾಹಿತಿ ನೀಡಿರಿ. ಉತ್ತಮ ಮಾಹಿತಿಗೆ ಬಹುಮಾನವಿದೆ.

ಸಂ.

ಧಾನ್ಯ ವೈವಿಧ್ಯ ಮತ್ತು ಸುಸ್ಥಿರ ಕೃಷಿ

ಮೂಲ ವನಜಾರಾಂ ಪ್ರಸಾದ್, ಭಾಷಾಂತರ ತೇಜಸ್ವಿನಿ

ಧಾನ್ಯ ವೈವಿಧ್ಯತೆ ಬಗ್ಗೆ ಸಕಾಲದಲ್ಲಿ ರೈತರನ್ನು ಎಚ್ಚರಿಸಿ, ಅವರಲ್ಲಿರುವ ತಳಿಗಳ ವೈಶಿಷ್ಟ್ಯತೆಯನ್ನು, ಅದನ್ನು ಕಾಪಾಡಿ ಕೊಳ್ಳಬೇಕಾದ ಅಗತ್ಯತೆಯನ್ನು ಮನವರಿಕೆ ಮಾಡಿಸಿ, ಅವು ಬೆಳೆಯುವ ಜಾಗದಲ್ಲೇ ಸಂಗ್ರಹಿಸುವ ಪ್ರಯತ್ನವನ್ನು ಶ್ರೀಮತಿ ವನಜಾರಾಂ ಪ್ರಸಾದ್ ನೇತೃತ್ವದ *GREEN* ಸಂಸ್ಥೆ, ಕರ್ನಾಟಕ ತಮಿಳುನಾಡು ಗಡಿ ಪ್ರದೇಶದ 'ತಳ್ಳಿ' ಎಂಬ ಹಳ್ಳಿಯಲ್ಲಿ ಕೈಗೊಂಡಿರುತ್ತದೆ. ಈ ಸಂಸ್ಥೆ ರೈತರನ್ನು ಪ್ರೋತ್ಸಾಹಿಸಿ, ಸಂರಕ್ಷಿಸಿರುವ ವಿವಿಧ ಬೆಳೆಗಳ ನಾಟೀ ತಳಿಗಳ ಪಟ್ಟಿ ಮತ್ತು ಅವುಗಳ ಗುಣಗಳನ್ನು ಈ ಮುಂದೆ ಕೊಡಲಾಗಿದೆ.

ಅ) ರಾಗಿ - (1) ಜೇನುಗೂಡು ರಾಗಿ - ಕೀಟ ನಿರೋಧಕ ಶಕ್ತಿ (2) ಮಜ್ಜಿಗೆ ರಾಗಿ - ಬಿಳಿ ಬಣ್ಣದ ರುಚಿಯಾದ ರಾಗಿ (3) ಮೂರುತಿಂಗಳ ರಾಗಿ - ಬೇಗ ಕೊಯ್ಲಿಗೆ ಬರುತ್ತದೆ. ನೀರಿನ ಬರ ತಡೆಯಬಲ್ಲದು. (4) ಕರಿ ಮುಂಡಗ - ಅಧಿಕ ಇಳುವರಿ. ಮೇವಿನ ಪ್ರಮಾಣ ಹೆಚ್ಚಾಗಿ ಸಿಗುತ್ತದೆ. (5) ಪೂರ್ಣ ರಾಗಿ - ಒಳ್ಳೆಯ ಮೇವು. (6) ಮುಂಡಗ - ದೊಡ್ಡ ತೆನೆ. (7) ಇಯ್ಯನ ರಾಗಿ - ಕೀಟ ನಿರೋಧಕ ಜೊತೆಗೆ ನೀರಿನ ಬರ ತಡೆದುಕೊಳ್ಳಬಲ್ಲ ಶಕ್ತಿಯಿದೆ. ಒಳ್ಳೆಯ ಮೇವು ಕೂಡಾ. (8) ಕಾರಿ ಕಡ್ಡಿ ರಾಗಿ - ಒಳ್ಳೆಯ ಮೇವು. (9) ಮಿಟ್ಟ ರಾಗಿ - ಒಳ್ಳೆಯ ಮೇವು ಜೊತೆಗೆ ಅಧಿಕ ಇಳುವರಿ. (10)ತಿಡಲು - ಕಾಳಿನ ಬಣ್ಣ ಚೆನ್ನಾಗಿದೆ. (11) ಹಸಿರು ಕಡ್ಡಿ ರಾಗಿ - ತೆನೆಯ ಬಣ್ಣ ಹಸಿರು. ಒಳ್ಳೆಯ ಮೇವು. (12) ಉಗಾಂಡ ರಾಗಿ - ಅಧಿಕ ಇಳುವರಿ, ದೊಡ್ಡ ತೆನೆ. ಕೀಟ ಮತ್ತು ನೀರಿನ ಬರ ನಿರೋಧಕ ಶಕ್ತಿ ಹೊಂದಿದೆ. (13)ಬಿಡ್ನಾಪು ರಾಗಿ - ಕೀಟ ನಿರೋಧಕ. (14)ಉದುರು ಮಲ್ಲಿಗೆ - ಒಣ ಮತ್ತು ನೀರಾವರಿ ಭೂಮಿ ಎರಡೂ ಕಡೆ ಬೆಳೆಯಬಹುದು. (15) ಬಾಳೆ ಪಟ್ಟೆ ರಾಗಿ - ಮಧ್ಯಮ ಇಳುವರಿ

ಆ) ಶೇಂಗಾ

(1) ದೊಡ್ಡ ಗುತ್ತಿ-ಕಾಯಿಗಳ ಗೊಂಚಲು ದೊಡ್ಡದು. (2) ಸಣ್ಣ ಗುತ್ತಿ - ಕಾಯಿಗಳ ಗೊಂಚಲು ಚಿಕ್ಕದು (3) ಅಂಬು ಕಾಯಿ - 9 ತಿಂಗಳ ಬೆಳೆ ಒಳ್ಳೆಯ ರುಚಿ ಗಿಡ ನೆಲದಲ್ಲಿ ಹಬ್ಬುತ್ತದೆ. ನೀರಿನ ಬರ ತಡೆಯಬಲ್ಲ ಶಕ್ತಿಯಿದೆ ಒಳ್ಳೆಯ ಮೇವು.

ಇ) ಒಣಭೂಮಿಯ ಭತ್ತ

(1) ಪುಟ್ಟ ಭತ್ತ (2) ಸಾಲು ಭತ್ತ - ನೀರಿನ ಬರ ತಡೆಯಬಲ್ಲದು. (3) ಕಾಳು ಗಾಯ - ಬೇಗ ಕಟಾವಿಗೆ ಬರುತ್ತದೆ. ಕಾಳಿನ ಬಣ್ಣ ಆಕರ್ಷಕ. (4) ಪೊಂಗಾರ (5) ಮೊಟ್ಟಾಯಿ ಕಾರ - ಒಳ್ಳೆಯ ಮೇವು. ಅಧಿಕ ಇಳುವರಿ. (6) ದೊಡ್ಡ ಬೈರ ನೆಲ್ಲು - ಒಳ್ಳೆಯ ತಳಿ (7)ಬಿಳಿ ಮಂಡಿಗೆ - ಅಧಿಕ ಇಳುವರಿ (8) ಕರಿ ಮುಂಡಿಗೆ - ಅಧಿಕ ಇಳುವರಿ (9) ಮುಂಡಿಗೆ - ಬರ ನಿರೋಧಕ ಶಕ್ತಿ, ಒಳ್ಳೆಯ ಮೇವು (10) ದೊಡ್ಡಿ ಭತ್ತ. (11) ಆರ್ಯಾನ. (12) ಬಿಹಾರ ಭತ್ತ - ಬೇಗ ಕಟಾವಿಗೆ ಬರುತ್ತದೆ. (13)ನೊತ ಪತ್ತು - ನೂರು ದಿನದ ಬೆಳೆ. ಒಳ್ಳೆಯ ಇಳುವರಿ. (14) ಮಾರ ನೆಲ್ಲು. (15) ಗೂಡು ನೆಲ್ಲು. (16) ಮಾರುಡಿ - ಮಧ್ಯಮ ಇಳುವರಿ. (17) ನೊರುಂಗಾನ - ಮಧ್ಯಮ ಇಳುವರಿ (18) ಕರಿ ಛನ್ನಂಗಿ - ಕಪ್ಪು ಬಣ್ಣದ ಬೀಜ. (19) ಕರಿ ನೆಲ್ಲು - ಕಪ್ಪು ಬಣ್ಣದ ಬೀಜ (20)ಕಪ್ಪು ಕರೆ - ಮಧ್ಯಮ ಇಳುವರಿ (21)ಪಿ.ಎಮ್.ಕೆ. - ಮಧ್ಯಮ ಇಳುವರಿ (22) ಬಿಳಿ ನೆಲ್ಲು - ಕೀಟ ನಿರೋಧಕ ಶಕ್ತಿ (23) ರಾಮಟಿ - ಮಧ್ಯಮ ಇಳುವರಿ (24)ಗುಳಿಗುಳಿ ಚಾಣ - ಮಧ್ಯಮ ಇಳುವರಿ (25) ಮೊಟ್ಟ ಕಾರ - ಅಧಿಕ ಇಳುವರಿ.

ಈ) ಸಜ್ಜೆ

1. ಹುಲ್ಲು ಸಜ್ಜೆ- ಒಳ್ಳೆಯ ಮೇವು. 9-10 ಅಡಿ ಎತ್ತರ ದೊಡ್ಡ ತೆನೆ. 5 ತಿಂಗಳ ಬೆಳೆ. 2. ಮುಳ್ಳು ಸಜ್ಜೆ - ತೆನೆಯ ಮೇಲೆ ಮುಳ್ಳಿದೆ. ಹಕ್ಕಿಯ ಕಾಟವಿಲ್ಲ. 3. ದೊಡ್ಡ ಸಜ್ಜೆ - ದೊಡ್ಡ ತೆನೆ. ಒಳ್ಳೆಯ ಮೇವು. 4. ಕೊಂಬಿನ ಹಕ್ಕಿ

ಉ) ಜೋಳ

1. ಪುಲಿಯನ ಗುಡಿ - 10-12 ಅಡಿ ಎತ್ತರ. ನೀರಿನ ಬರ ತಡೆಯ ಬಲ್ಲದು. ಆಕರ್ಷಕ ಕಾಳುಗಳು. 2. ಜಿಂಗ್ರಿ ಜೋಳ - ಒಳ್ಳೆಯ ರುಚಿ. 3. ಪಾಲುಕೊಂಡ ಜೊನ್ನಲು - ಒಳ್ಳೆಯ ರುಚಿ. 4. ಬಿಳಿ ಜೋಳ - ಉತ್ತಮ ಮೇವು. 5. ರಗಡ ಚೊನ್ನಲು - ಬರ ನಿರೋಧಕ ಶಕ್ತಿ. ಗುಂಡಗಿನ ತೆನೆ. 6. ಕಾಕಿ ಜೋಳ - ಉತ್ತಮ ಮೇವು. 7. ಮುತ್ಸಾಲ ಚೊನ್ನಲು - ಉತ್ತಮ ಮೇವು. ಬಿಳಿ ಬಣ್ಣದ ಕಾಳು. 8. ಪಚ್ಚ ಚೊನ್ನಲು 9. ಬಿಳಿ ಮುದ್ದುಗ ಚೊನ್ನಲು - ಒಳ್ಳೆಯ ಮೇವು. 10. ಪಿವಾಲು ಜೋಳ - ಉತ್ತಮ ರುಚಿ.

ಊ) ನವಣೆ

1. ಕುಚ್ಚು ನವಣೆ - ಉತ್ತಮ ತಳಿ, 2. ಜಡೆ ನವಣೆ - ಉದ್ದ ತೆನೆ 3. ಕೆಂಪು ನವಣೆ - ಕೆಂಪು ಕಾಳು 4. ಹುಲ್ಲು ನವಣೆ - ಉತ್ತಮ ಮೇವು 5. ಬಿಳಿ ನವಣೆ - ಮಧ್ಯಮ ಇಳುವರಿ.

ಋ) ನೀರಾವರಿ ಭತ್ತ

1.ರಸಕದಮ - ಕೆಂಪು ಬೀಜ, ಸಣ್ಣ ಕಾಳು, 2.ಕೋಲಂ-ನವಾಬಿ - ಉತ್ತಮ ರುಚಿ. 3.ಗಂಧ ಸಾಲೆ - ಪರಿಮಳ ಹೊಂದಿದೆ. 4.ಅತಿ ಕಾಯ - ಕೀಟ ನಿರೋಧಕ ಶಕ್ತಿ ಇದೆ. 5.ಸುಗದಸ್ಸ - ಕೆಂಪು ಕಾಳು. 6. ಬಸುಮತಿ - ಕಡಿಮೆ ಅವಧಿ ಹಾಗೂ ಕೀಟ ನಿರೋಧಕ ಶಕ್ತಿ ಹೊಂದಿದೆ. 7. ಜೀರಗೆ ಸಾಂಬ - ಉತ್ತಮ ಮೇವು 6 ತಿಂಗಳ ಬೆಳೆ. 8. ಜೀರಿಗೆ ಸಾಂಬ (ಪರಿಮಳ) - ಸಣ್ಣ ಕಾಳು, ಒಳ್ಳೆ ಪರಿಮಳದ ಅಕ್ಕಿ. 9. ಸಣ್ಣ ವಾಳ್ಯ - 6 ತಿಂಗಳ ಬೆಳೆ 10.ರೂಪ ಸಾಲೆ.

ೠ) ಆಳ ನೀರಿರುವ ಜಾಗದಲ್ಲಿ ಬೆಳೆಯುವ ಭತ್ತ

1. ನೀರು ಮುಳಾಗಳು ಭತ್ತ - 8-9 ಅಡಿ ಎತ್ತರ ಮತ್ತು ಗಟ್ಟಿಯಾದ ಕಾಂಡ. 2. ನೀರುಗುಳಿ

ಎ) ಸಾಮೆ

1. ಪಣಿವೆರಗು - ಕಡಿಮೆ ಅವಧಿಯ ತಳಿ ನೀರಿನ ಬರ ನಿರೋಧಕ ಹೊಂದಿದೆ. ಅಧಿಕ ಇಳುವರಿ. 2. ಹೆಜ್ಜಾಮೆ - ನಾಲ್ಕು ತಿಂಗಳ ಬೆಳೆ, 3, ಕರಿ ಸಾಮೆ, 4. ಕರಪು ಸಾಮೆ, 5. ಬಿಳಿ ಸಾಮೆ

ಹಿತ್ತಲ ಗಿಡಕ್ಕೆ ಸಲಹೆ

ಹಿತ್ತಲಗಿಡವನ್ನು ಮತ್ತಷ್ಟು ವ್ಯವಸ್ಥಿತ ಗೊಳಿಸಲು ನನ್ನ ಮುಖ್ಯ ಸಲಹೆಗಳು

1. Please cover all important news regarding Agriculture published in News paper, Magazines etc., in seperate coloumn.

2. Give a list of the useful plants in the follwoing way - i) Technical - scientific name of the plant, ii) Its local names, iii) Its name in other languages, iv) Brief uses.

ವಿದ್ಯಾಧರ ಕುಲಕರ್ಣಿ
ಕಣಗಲಿ, ಬೆಳಗಾಂ

'ಹಿತ್ತಲ ಗಿಡ 1996' ಮೊದಲ ಸಂಚಿಕೆ ಹಿಂದಿನ ಸಂಚಿಕೆಗಿಂತಲು ಉತ್ತಮವಾಗಿ ಮೂಡಿ ಬಂದಿದೆ. ಸಾವಯವ ಕೃಷಿ,ಕೀಟ ನಿರ್ವಹಣೆ, ರೋಗ ನಿವಾರಣೆ ಹಾಗೂ ಭೂ ಫಲವತ್ತತೆಗೆ ಹೊಸ ಪರಿಹಾರ ಭರವಸೆಗಳನ್ನು ಮೂಡಿಸಿದೆ. ಆದರೂ ಪ್ರತಿಯೊಂದು ಬೆಳೆಯನ್ನು ಹೇಗೆ ನಿರ್ವಹಣೆ ಮೂಡಬೇಕೆಂಬ ವಿವರ ಇನ್ನಷ್ಟು ಮೂಡಿ ಬಂದರೆ ಒಳ್ಳೆಯದು. ಪ್ರತಿಯೊಂದು ಜಿಲ್ಲೆಯಲ್ಲಿ ಇನ್ನು ಉಳಿದುಕೊಂಡಿರುವ ವಿವಿಧ ಬೆಳೆಯ ನಾಟಿ ತಳಿಗಳ ಮಾಹಿತಿ ಹಾಗೂ ದೊರೆಯುವ ಸ್ಥಳ ವಿವರ ಕೊಟ್ಟರೆ ಒಳ್ಳೆಯದು.

ಚೆನ್ನಬಸವ ರಡ್ಡಿ
ಹೆಂಬರಾಳ, ರಾಯಚೂರು

ನಿಮ್ಮ **ಹಿತ್ತಲಗಿಡ** ಇತ್ತೀಚೆಗಷ್ಟೆ ಸ್ನೇಹಿತರೊಬ್ಬರಿಂದ ಪಡೆದು ಓದಿದ್ದೇನೆ. ಒಂದು ಉತ್ತಮ ಪ್ರಯತ್ನ ಹೆಬ್ಬಾಳದಲ್ಲಿ ನಡೆಸುತ್ತಿದ್ದೀರಿ. ನಿಮಗೆ ಅಭಿನಂದನೆಗಳು. ಈ ರೀತಿಯ ಸಂವಹನ ಪ್ರಕ್ರಿಯೆ ನಡೆಯಬೇಕಾದ ಅನಿವಾರ್ಯತೆ ಇದೆ. ಮರೆಯುತ್ತಿರುವ ನಮ್ಮ ಪದ್ದತಿಗಳನ್ನು ದಾಖಲಿಸಿ ಹೊಂದಾಣಿಕೆಗಳೊಂದಿಗೆ ಪುನಃ ಅಳವಡಿಸಬೇಕಾಗಿದೆ. ನಿಮ್ಮ ಈ ಪ್ರಯತ್ನದ ಮೂಲಕ ಮತ್ತೆ ಇದಕ್ಕೆ ಚೇತನ ಬರುವಂತಾಗಿದೆ.

ಕೆ. ಶ್ಯಾಂಭಟ್, ಆಣಕಟಾಣಿ, ಮಂಗಳೂರು

ಪ್ರತಿಕ್ರಿಯೆಗೆ ಪ್ರತಿಕ್ರಿಯೆ

ಹಿತ್ತಲಗಿಡ ಸಂಚಿಕೆ, 2-3, 1995 ರಲ್ಲಿ ಸೂಕ್ತ ಸಮಯದಲ್ಲಿ ತಜ್ಞರ ಅಭಿಪ್ರಾಯವೆಂದು ಅಭಿವೃದ್ಧಿಶೀಲ ಭಾರತದ ಸಾಮಾನ್ಯ ಪ್ರಜೆಗೂ ಅರ್ಥವಾಗುವಂತೆ ಜನಸಾಮಾನ್ಯ, ಮುಗ್ಧ ರೈತಾಪಿ ಜನರನ್ನು ಸರಿಯಾದ ಸಂದರ್ಭದಲ್ಲಿ ಡಾ|| ಬಿ.ಆರ್. ಹೆಗ್ಡೆಯವರು ಎಚ್ಚರಿಸಿದ್ದಕ್ಕೆ ನಾನು ತುಂಬಾ ಅಭಾರಿ. ತಜ್ಞ ಡಾ|| ಬಿ.ಆರ್. ಹೆಗ್ಡೆಯವರು ಸಾವಯವ ಕೃಷಿ ಅಸಾಧ್ಯ 'ಯಾ' ರಾಸಾಯನಿಕ ಕೃಷಿ 'ಅನಿವಾರ್ಯ'. ಇವೆರಡನ್ನೂ ಹೇಳಿಲ್ಲದಿರುವಾಗ ವಿಚಾರ, ವಿವೇಕಗಳು ಏಕಮುಖ 'ಯಾ' ಸೀಮಿತವಾಗಿಯೂ ಇರುವುದಿಲ್ಲ. 'ಸುಸ್ಥಿರ ಕೃಷಿ'ಗೆ ಸುವಿಚಾರಗಳು ಎಲ್ಲಮೂಲಗಳಿಂದಲೂ ಅವಶ್ಯವಿದೆ.

ಸಾಮಾನ್ಯ 45 ವರ್ಷಗಳ ಹಿಂದೆ ಭಾರತದ ಹೆಚ್ಚಿನ ಕೃಷಿಕರು ಸಾವಯವ ಕೃಷಿಯಿಂದಲೇ ಬದುಕು, ಸಹ ಬಾಳ್ವೆ, ಸ್ವಾವಲಂಬನೆಯಿಂದ ಜೀವನ ಸಾಗಿಸುತ್ತಿದ್ದರು. ಈಗಲೂ, ಅಲ್ಲೊಬ್ಬ, ಇಲ್ಲೊಬ್ಬ ಅದೇ ರೀತಿಯ ಸ್ವಾವಲಂಬನೆಯಿಂದ ಇರುವವರಿದ್ದಾರೆ. ಇಂದು ವಿಸ್ತಾರವಿರುವ ಜಗತ್ತು ವೈಜ್ಞಾನಿಕ ಮುನ್ನಡೆಯಿಂದ ಜನರಿಗೆ ಕಿರಿದಾಗಿ ಮಾರ್ಪಟ್ಟಿದೆ. ಮುಂದುವರಿದ ರಾಷ್ಟ್ರದ ರೈತ; ಅಭಿವೃದ್ಧಿಶೀಲ ಭಾರತದ ಕಿರಿದಾದ ಹಿಡುವಳಿ ಇರುವ, ಆರ್ಥಿಕವಾಗಿ ಹಿಂದುಳಿದ ಬಡ ರೈತನಿಗೆ ಮುಖ್ಯವಾಗಿ ಅನುಭವೀ ರೈತರಿಂದಲೂ, ತಜ್ಞರಿಂದಲೂ ಯೋಗ್ಯ ಮಾರ್ಗದರ್ಶನ ಬೇಕು. ಇದರಿಂದ ಭಾರತದ ರೈತ ತನ್ನ ಸರ್ವಾಂಗೀಣ ಅಭಿವೃದ್ಧಿ ಹೊಂದಿ ದೇಶವು ಸ್ವಾವಲಂಭನೆಯನ್ನ ಕಾಣಬಹುದು. ಶ್ರೀ ಎ.ಪಿ. ಚಂದ್ರಶೇಖರರವರ ಪ್ರತಿಕ್ರಿಯೆಯಲ್ಲಿ (ಹಿತ್ತಲಗಿಡ, ಮೊದಲ ಸಂಚಿಕೆ, 1996) "ಭಾರತದಲ್ಲಿ ನಿಜವಾಗಿ ಉತ್ಪಾದನೆ ಕಡಿಮೆ, ಆಗಿರುವುದೂ ಇಲ್ಲ". ಎಂಬುದಕ್ಕೆ ನನಗಂತೂ ಅರ್ಥಕಾಣುವುದಿಲ್ಲ. ಹೆಚ್ಚಿನ ರೈತರು ಕೊರತೆ ಉತ್ಪಾದನೆಯಿಂದ ಬಡತನ ನೀಗದಾಗಿದ್ದಾರೆ. ಬೆಳೆದ ಉತ್ಪಾದನೆಯನ್ನು ಯೋಗ್ಯ ರೀತಿ ವಿತರಿಸುವ ವ್ಯವಸ್ಥೆ ಇಲ್ಲದೆ ಬಳಲುತ್ತಿದ್ದಾರೆ. ಮೇಲ್‌ಮೈ ಸವಕಳಿಗೊಂಡು ಸಾಗರ ಸೇರುವುದು ಎಂಬ ವಿಚಾರ ಸರಿಯಾದುದೇ ಆದರೂ ದ.ಕ.ಜಿಲ್ಲೆಯ ಒಬ್ಬ ಕೃಷಿಕ ತನ್ನ ಕುಮ್ಕಿ ಸ್ಥಳದಿಂದ (ಕಾದಿಟ್ಟ ಸೊಪ್ಪಿನ ಗುಡ್ಡೆ) ಗದ್ದೆ, ಅಡಿಕೆ ಮರಕ್ಕೆ ಸೊಪ್ಪು ಹಾಕಲು ವರ್ಷವೂ ಸೊಪ್ಪು ಕಡಿಯುತ್ತಾನೆ. ರಾಸಾಯನಿಕ ಗೊಬ್ಬರ ಉಪಯೋಗಿಸಿದರೆ ಕುಮ್ಕಿಯ ಅರ್ಧಸ್ಥಳದ ಸೊಪ್ಪು ವರ್ಷ ಒಂದಕ್ಕೆ ಸಾಕಾಗಿ, ಸೊಪ್ಪಿನ ಗುಡ್ಡದಿಂದ ಎರಡು ವರ್ಷಕ್ಕೆ ಒಂದು ಬಾರಿ ಸೊಪ್ಪು ಕಡಿಯುವ ಪ್ರಮೇಯ ಬರುತ್ತದೆ. ಇದರಿಂದ ಒಟ್ಟಿನಲ್ಲಿ ಆ ಕ್ಷೇತ್ರದ ಮಣ್ಣು ಸವಕಳಿ ಕಡಿಮೆಯಾಗುತ್ತದೆ. ಹಾಗಿದ್ದಲ್ಲಿ ಪೂರಕವಾಗಿ ಉಪಯೋಗಿಸುವ ರಾಸಾಯನಿಕ ಗೊಬ್ಬರ ಉಪಯೋಗಕರವಲ್ಲವೆ ?

ಹಿಂದಿನ ದಿನಗಳಂತೆ ಹಳ್ಳಿಗಳಲ್ಲಿ ಜಾನುವಾರು ಸಾಕಣೆ, ಕೂಲಿಯಾಳುಗಳ ಲಭ್ಯತೆ ಕಷ್ಟಸಾಧ್ಯವಾಗಿ, ಮರ ಬೆಳೆಸಿದರೂ, ಹಸಿರು ಉಳಿಸಿದರೂ ಸಾವಯವ ಕೃಷಿ ಸುಲಭ ಸಾಧ್ಯವಲ್ಲ. ಕೃಷಿಕನ ಇತಿ ಮಿತಿಯಲ್ಲಿ, ಎಲ್ಲ ಕೃಷಿ ವಿಚಾರಗಳನ್ನು ತಿಳಿದುಕೊಂಡು ಮುನ್ನಡೆಯುವುದೇ ಯೋಗ್ಯವೂ, ಸೂಕ್ತವೂ ಆಗಿರುವುದೆಂದು ನನ್ನೆಣಿಕೆ.

ದಯಾನಂದ ಕೋಟಿ
ಸುಳ್ಯ, ದ.ಕ.

{ವಿ.ಸೂ : ಹಿ.ಗಿ. **1996** ಮೊದಲ ಸಂಚಿಕೆಯಲ್ಲಿ ಶ್ರೀ **A.P.** ಚಂದ್ರಶೇಖರ್‌ರವರ ಸಾವಯವ ಕೃಷಿ : ಇತಿ ಮಿತಿಗಳು (ಎಲ್ಲ ಹಂತದಲ್ಲೂ ಸಾಧ್ಯವೇ) ಪ್ರತಿಕ್ರಿಯೆಗೆ ಪ್ರತಿಕ್ರಿಯೆ ಸಂ.}

ಪ್ರಿಯ ಪ್ರಕಾಶ್,

ಹಿತ್ತಲಗಿಡದ ಸಂಚಿಕೆ ಕೈಸೇರಿತು. ತುಂಬಾ ಸುಂದರವಾಗಿ ಬಂದಿದೆ. ನಿಜಕ್ಕೂ, ಮುದ್ರಣದ ಅಚ್ಚುಕಟ್ಟು ನನ್ನ ಗಮನ ಸೆಳೆಯಿತು. ಖುಷಿಕೊಟ್ಟಿತು. ಸಂಪಾದಕೀಯದಲ್ಲಿ ನೀವು ಪ್ರಸ್ತಾಪಿಸಿರುವ ದೇಸೀಯ ಜ್ಞಾನ ಮತ್ತು ಜನಪದ ಸಂಸ್ಕೃತಿಗಳ ಒಡನಾಟ ಗಮನಿಸುವಂತದ್ದು. ಇತ್ತೀಚೆಗೆ ಪರ್ಯಾಯಕೃಷಿ ಹಿಡಿಯುತ್ತಿರುವ ಜಾಡು ನೋಡಿದರೆ, ಇದೇನು ವೈದಿಕ ಸಂಸ್ಕೃತಿಯನ್ನು ಬಲಪಡಿಸುವ ಚಳುವಳಿಯೇ ಎಂಬ ಶಂಕೆ ಬರುತ್ತದೆ. ಕರ್ನಾಟಕದಲ್ಲಿ ಸಮತಾ ಸಂಘಟನೆ, ದಲಿತ, ರೈತ ಚಳುವಳಿಗಳು ಮಣ್ಣುಮುಕ್ಕಿದ್ದು ಇಂಥ ಶಕ್ತಿಗಳ ನುಸುಳುವಿಕೆಯಿಂದಲೇ . ಆದ್ದರಿಂದ ಹಿತ್ತಲಗಿಡ ಈ ವಿಷಯದಲ್ಲಿ ಎಚ್ಚರಿಕೆ ಯಿಂದರಬೇಕಾದ್ದು, ಅಗತ್ಯ.

ವಂದನೆಗಳು.

ಕೃಷ್ಣ ಪ್ರಸಾದ್, ತಳ್ಳಿ

ಅರಳೀಕಟ್ಟೆ ಗೋಷ್ಠಿ ಸಂಕಿರಣ ಇತ್ಯಾದಿ

ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆಗಾಗಿ ನೆಲಮಟ್ಟದ ಜನರ ಶೋಧನೆ ಮತ್ತು ಕತೃತ್ವ ಪ್ರವೃತ್ತಿ ಅಂತರ ರಾಷ್ಟ್ರೀಯ ಸಮ್ಮೇಳನದ ವಿವರಗಳು

ಅಹ್ಮದಾಬಾದ್, ಜನವರಿ 11-14, 1997 ನಾಲ್ಕು ದಿನಗಳ ಕಾಲ ಜರುಗಿದ ಈ ಸಮ್ಮೇಳನದಲ್ಲಿ ದೇಶ ವಿದೇಶಗಳಿಂದ ಸುಮಾರು 500 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಗುಜರಾತಿನ ಕುಶಲಕರ್ಮಿ, ಅಮೃತ್‌ಬಾಯಿ ಅಗರಾವತ್ ಈ ಸಮ್ಮೇಳನ ಉದ್ಘಾಟಿಸಿದರೆ, ಕಂಬಾರ ವೃತ್ತಿಯ ಕರೀಂಭಾಯಿ, ಕೃಷಿಕ ಸುಂದರಾಂ ಮುಖ್ಯ ಭಾಷಣಕಾರರಾಗಿ ತಮ್ಮ ಅನುಭವ ಹಂಚಿಕೊಂಡಿದ್ದರೆ, ಕರ್ನಾಟಕದ, ಚಿಕ್ಕ ಪಡಸಲಗಿ ಬ್ಯಾರೇಜ್‌ನ ರುವಾರಿ ಸಿದ್ದುನ್ಯಾಮಗೌಡರು ಮತ್ತೊಂದು ಗೋಷ್ಠಿಯ ಮುಖ್ಯ ಆಕರ್ಷಣೆಯಾಗಿದ್ದರು. ಕರ್ನಾಟಕದ ಐವರು ರೈತರು ವಿಶೇಷ ಆಹ್ವಾನಿತರಾಗಿ, ಬಂದು ತಮ್ಮ ಪ್ರಬಂಧ ಮಂಡಿಸಿರುವುದು ಮತ್ತೊಂದು ಹೆಮ್ಮೆಯ ವಿಚಾರ.

ಬೀದರ್ ಜಿಲ್ಲೆಯ ಕೂಲಿಗಾರ ಕುಟುಂಬದಿಂದ ಬಂದಿರುವ ಶ್ರೀ ಅಂಬಾಜಿಯ ನಾಟೀ ಪಶು ಚಿಕಿತ್ಸಾ ಕ್ರಮಗಳನ್ನು ಎಲ್ಲರೂ ಪ್ರಶಂಸಿಸುವಂತಾಯ್ತು. ಹಾಗೇ ದಕ್ಷಿಣ ಕನ್ನಡದ ಶ್ರೀ ಪಡಾರು ರಾಮಕೃಷ್ಣ ಶಾಸ್ತ್ರಿಯ ಕಳೆ ಕತ್ತರಿಸುವ ಯಂತ್ರ, ರಾಯಚೂರಿನ ಶ್ರೀ ಚನ್ನಪ್ಪಗೌಡರ ಸಾವಯವ ಒಣಬೇಸಾಯ ಕ್ರಮಗಳು, ಶಿವಮೊಗ್ಗದ ಶ್ರೀ ದಿನೇಶರವರ ಮುಕ್ಕಡಕ ಜೈವಿಕ ಕೀಟನಾಶಕ ಮತ್ತು ಉ.ಕನ್ನಡದ ಶ್ರೀ ಹೆಗ್ಡೆಯವರ ಬಸಿಗಾಲುವೆ ಪ್ರಯೋಗಗಳನ್ನೂ ಎಲ್ಲರ ಕುತೂಹಲದಿಂದ ಗಮನಿಸುವಂತಾಯ್ತು. ಶ್ರೀಯುತ ಎಂ.ಜಿ.ನಾಗರಾಜ್, ಶ್ರೀಮತಿ ವೀಣಾ ಎನ್.ನರಸಿಂಹ ಮತ್ತು ರಾಮಚಂದ್ರಭಟ್ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ ವಿವಿಧ ದೇಸೀಯ ಕ್ರಮಗಳ, ದೇಸೀಯ ಸಂಸ್ಥೆಗಳ ಬಗ್ಗೆ ಉನ್ನತ ಪ್ರಬಂಧಗಳನ್ನು ಮಂಡಿಸಿದರು.

ಒಟ್ಟಾರೆ, ನೆಲಮಟ್ಟದ ಸಾಂಸ್ಥಿಕ ಶೋಧನೆಗಳ (Institutional Innovations) ಬಗ್ಗೆ 54 ಪ್ರಬಂಧಗಳೂ, ಶೈಕ್ಷಣಿಕ ಶೋಧನೆಗಳ ಮೇಲೆ 35 ಪ್ರಬಂಧಗಳು, ತಾಂತ್ರಿಕ ಶೋಧನೆಗಳ ಬಗ್ಗೆ 48 ಪ್ರಬಂಧಗಳು, ಜ್ಞಾನದ ಸಾಮಾಜಿಕ-ಸಾಂಸ್ಕೃತಿಕ ಆಯಾಮದ ಮೇಲೆ 44 ಪ್ರಬಂಧಗಳೂ, ತಳಮಟ್ಟದ ಜನರ ಶೋಧನೆಯನ್ನು ಪುರಸ್ಕರಿಸುವ ಬಗ್ಗೆ 11 ಪ್ರಬಂಧಗಳು, ಮಾರುಕಟ್ಟೆ ವಿಚಾರಗಳ ಮೇಲೆ ಎಂಟು ಮತ್ತು ತಳಮಟ್ಟದ ಜನರಿಂದಲೇ ಸುಮಾರು 20 ಪ್ರಬಂಧಗಳು, ಈ ಸಮ್ಮೇಳನದಲ್ಲಿ ಮಂಡಿಸಲ್ಪಟ್ಟಿವೆ. ಜಗತ್ತಿನಲ್ಲಿ ಪ್ರಪಥಮ ಎನ್ನಬಹುದಾಗಿರುವ ಈ ರೀತಿಯ ಸಮ್ಮೇಳನದ ಕೇಂದ್ರ ಬಿಂದು, *ಹನಿಬೀ* ಪತ್ರಿಕೆ ಸಂಪಾದಕರಾದ ಪ್ರೊ. ಅನಿಲ್‌ಗುಪ್ತ.

ಸಮ್ಮೇಳನಕ್ಕೆ ಆಹ್ವಾನಿತ ರೈತರ ಪ್ರತಿಕ್ರಿಯೆ

ಈ ಸಮ್ಮೇಳನವನ್ನು ಸಾಮಾನ್ಯ ರೈತ ಶ್ರೀ ಅಮೃತ್‌ಭಾಯಿ ಉದ್ಘಾಟಿಸಿದ್ದು; ಪ್ರತಿದಿನ ಪೂರ್ವಾಹ್ನದ ಸಭೆಗಳಲ್ಲಿ ವೇದಿಕೆಯಲ್ಲಿ ರೈತರಿಗೆ ಅವಕಾಶ ಕೊಟ್ಟಿದ್ದು; ಅಪರಾಹ್ನದ ಮತ್ತು ಸಂಜೆ ನಡೆದ ಸಮಾನಾಂತರ ಅಧಿವೇಶನಗಳಲ್ಲಿ ಒಂದರಲ್ಲಿ ರೈತರಿಗೆ ತಮ್ಮ ಶೋಧನೆಗಳನ್ನು ಮಂಡಿಸಿ ಪ್ರಶ್ನೋತ್ತರ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿದ್ದು ಮಹತ್ತರ ಅಂಶಗಳು.

ಕೊನೆಯ ದಿನ ತಳಮಟ್ಟದ ಶೋಧಕರಿಗೆ ನೆರವಾಗಲು ಸ್ಥಾಪಿಸುವ ನಿಧಿಯನ್ನು ಎಲ್ಲಿ, ಹೇಗೆ ಸ್ಥಾಪಿತವಾಗಬೇಕು ಮತ್ತು ಯಾರಿಂದ ಯಾವ ರೀತಿ ನಡೆಸಲ್ಪಡಬೇಕು ಎಂಬ ವಿಷಯಗಳಲ್ಲಿ ನಡೆದ ಚರ್ಚೆಗೆ ರೈತರನ್ನೂ ಸೇರಿಸಿದ್ದು ನೆನಪಿನಲ್ಲಿ ಉಳಿಯುವ ಅಂಶಗಳು. ಹಾಗೇ ಈ ಸಮ್ಮೇಳನದ ಉಸ್ತುವಾರಿ ವಹಿಸಿದ್ದ ಪ್ರೊ. ಅನಿಲ್ ಕೆ. ಗುಪ್ತ, ಮತ್ತು ಗುಜರಾತಿನ ರೈತರು ಆಂಧ್ರ ಮತ್ತು ಕರ್ನಾಟಕದಿಂದ ಭಾಗವಹಿಸಿದ ಎಲ್ಲಾ ಸದಸ್ಯರು, ಸಮ್ಮೇಳನದಲ್ಲಿ ಪೂರೈಸಿದ ತಿಂಡಿಗಳು ಮತ್ತು ಭೋಜನ ಸದಾ ನೆನಪಿನಲ್ಲಿ ಉಳಿಯುವಂತಹವು.

ಪಡಾರು ರಾಮಕೃಷ್ಣ ಶಾಸ್ತ್ರಿ, ದಕ್ಷಿಣ ಕನ್ನಡ

ವಿಶ್ವ ಸಂಸ್ಕೃತ ಸಮ್ಮೇಳನ

ತರಬಾಳು ಕೇಂದ್ರ, ಬೆಂಗಳೂರು

ಜನವರಿ 3 ರಿಂದ 9, 1997. ಅಂತರ ರಾಷ್ಟ್ರೀಯ ಸಂಸ್ಕೃತ ಅಧ್ಯಯನ ಸಂಘಟನೆ, ಬೆಂಗಳೂರಿನ ಈ ಹತ್ತನೇ ವಿಶ್ವಸಂಸ್ಕೃತ ಸಮ್ಮೇಳನವನ್ನು ಸಂಘಟಿಸಿರುತ್ತದೆ. ಸಂಸ್ಕೃತ ಭಾಷೆಯನ್ನು ಕೇಂದ್ರಲಿವಾಗಿಟ್ಟುಕೊಂಡು ಸುಮಾರು 24 ಘೋಷ್ಠಿಗಳು ಈ ಸಮ್ಮೇಳನದಲ್ಲಿ ಜರುಗಿತ್ತುದೆ. ಸಂಸ್ಕೃತ ಮತ್ತು ಕೃಷಿ ಪರಿಸರ, ಕಂಪ್ಯೂಟರ್ ಇವುಗಳ ಬಗೆಗಿನ ಘೋಷ್ಠಿಗಳು ವಿಶೇಷ ಗಮನ ಸೆಳೆಯುವಂತಿದ್ದವು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿರುವ ಡಾ. ಜಿ.ಕೆ.ವೀರೇಶ್ ಅಧ್ಯಕ್ಷತೆಯಲ್ಲಿ ಸಂಸ್ಕೃತ ಮತ್ತು ಕೃಷಿ ಬಗ್ಗೆ ವಿಚಾರ ಘೋಷ್ಠಿ ಏರ್ಪಡಿಸಿದ್ದು, ಇದರಲ್ಲಿ ಬೆಳೆ ಸಂರಕ್ಷಣೆ, ಬೆಳೆ ಸಂವೃದ್ಧಿ, ಹೈನುಗಾರಿಕೆ, ಅರ್ಥಶಾಸ್ತ್ರ ಮತ್ತು ಕೃಷಿಗೆ ಸಂಬಂಧಿಸಿದ ಸಾಹಿತ್ಯ, ಈ ವಿಚಾರಗಳ ಬಗ್ಗೆ ಪ್ರಬಂಧ, ಚರ್ಚೆಗಳು ನಡೆದಿರುತ್ತವೆ.

ಸಾವಯುವ ಬೇಸಾಯ ಮತ್ತು ಸುಸ್ಥಿರ ಕೃಷಿ

ರಾಷ್ಟ್ರಮಟ್ಟದ ವಿಚಾರ ಸಂಕಿರಣ, ಅಕ್ಟೋಬರ್ 9-11, 1996 ಕೃಷಿ ವಿ.ವಿ.ನಿಲಯ ಬೆಂಗಳೂರು.

ಒಂಬತ್ತು ಪ್ರತ್ಯೇಕ ಘೋಷ್ಠಿಗಳು, ಒಂದು ರೈತ ಘೋಷ್ಠಿ, ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಘೋಷ್ಠಿಗಳೂ ಸೇರಿದಂತೆ ಮೂರುದಿನ ನಡೆದ ಈ ವಿಚಾರ ಸಂಕೀರಣದಲ್ಲಿ ಸುಮಾರು 218 ಪ್ರಬಂಧಗಳು ಮಂಡಿಸಲ್ಪಟ್ಟಿರುತ್ತವೆ. ಸಾವಯವ ಕೃಷಿಯನ್ನು ಬೆಳೆಸುವ ನಿಟ್ಟಿನಲ್ಲಿ ***"Association For Promotion of Organic Farming"*** ಎಂಬ ಸಂಸ್ಥೆಯನ್ನು ಈ ಸಮ್ಮೇಳನದ ಅಂತ್ಯದಲ್ಲಿ ಹುಟ್ಟು ಹಾಕಲಾಗಿದ್ದು, ಡಾ. ಜಿ.ಕೆ.ವೀರೇಶ್ ಇದರ ಅಧ್ಯಕ್ಷರೂ, ಡಾ. ಶಿವಶಂಕರ್ ಕೆ. ಕಾರ್ಯದರ್ಶಿಯೂ ಆಗಿ ಆಯ್ಕೆಯಾಗಿರುತ್ತಾರೆ. ಈ ಬಗ್ಗೆ ಹೆಚ್ಚಿನ ವಿವರಗಳಿಗೆ :

ಡಾ. ಕೆ. ಶಿವಶಂಕರ್

ಕೃಷಿ ವಿ.ವಿ. ನಿಲಯ, ಹೆಬ್ಬಾಳ ಬೆಂಗಳೂರು-24

ಇವರನ್ನು ಸಂಪರ್ಕಿಸಬಹುದು.

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು/ನಿರುದ್ಯೋಗಿಗಳು	40 ರೂ	400 ರೂ
ರೈತರು	50 ರೂ	500 ರೂ
ಇತರರು	60 ರೂ	600 ರೂ
ಸಂಸ್ಥೆಗಳು	350 ರೂ	2500 ರೂ
ಪೋಷಕರು	ರೂ.5000/- ಮತ್ತು ಅಧಿಕ	

(*ವಿ.ಸೂ.:* ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್/ಚೆಕ್ ಮೂಲಕ ***"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"*** ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡು ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಇದನ್ನು ಸ್ಪಷ್ಟವಾಗಿ ತಿಳಿಸ ತಕ್ಕದ್ದು.

ತೆರೆದ ಅಂಚೆ

ಗೆ _ _ _ _ _ _ _ _ _ _ _ _ _ _ _ _

_ _ _ _ _ _ _ _ _ _ _ _ _ _ _ _

_ _ _ _ _ _ _ _ _ _ _ _ _ _ _ _

_ _ _ _ _ _ _ _ _ _ _ _ _ _ _ _

ವಿಳಾಸ
ಟಿ.ಎನ್.ಪ್ರಕಾಶ್ ಕಮ್ಮರಡಿ, ಸಹಾಯಕ ಪ್ರಾಧ್ಯಾಪಕರು
ಗೌರವ ಸಂಪಾದಕರು ಹಿತ್ತಲಗಿಡ
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ
ಬೆಂಗಳೂರು - 560 024

Printed by Sri S. Sridhar, Published by Smt. K. Meenakshi (Owner), printed at Navbharath Enterprises, No.10, Sirur Park B Street, Seshadripuram, Bangalore - 560 020 and published at No.399, 14 - B Cross, New Town Yelahanka, Bangalore - 560 064. Edited by Sri T.N. Prakash